ಧನ ಸಹಾಯ ಪಡೆಯದೇ ಇರುವ ಸಹಕಾರ ಸಂಘಗಳವರು ಸಹ ಮೀಸಲಾತಿ ಅನುಸರಿಸಲು ನಿರ್ದೇಶನ ನೀಡಬಹುದೇ ಎಂಬುದರ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ.

## ವಿತ್ತೀಯ ಕಾರ್ಯಕಲಾಪಗಳು

## 1993-94ನೇ ಸಾಲಿನ ಆಯವ್ಯಯದದ ಮೇಲೆ ಸಾಮಾನ್ಯ ಚರ್ಚೆ

† ಶ್ರೀ ಎಸ್. ಬಂಗಾರಪ್ಪ (ಸೊರಬ) : ಸನ್ಮಾನ್ಯ ಸಭಾಧ್ಯಕ್ಷರೆ, 1993-94ರ ಆಯವ್ಯಯ ಪತ್ರದ ಮೇಲೆ ನಡೆಯುತ್ತಿರುವ ಈ ಸಾಮಾನ್ಯ ಚರ್ಚೆಯಲ್ಲಿ ಭಾಗವಹಿಸತಕ್ಕಂತಹ ಸದವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ಮೊಟ್ಟ ಮೊದಲನೆಯದಾಗಿ ತಮಗೆ ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ. ನಾನು ಕೆಲವು ಅಂಕಿಅಂಶಗಳನ್ನಿಟ್ಟು ರಾಜ್ಯದ ಆರ್ಥಿಕ ವಿಷಯಗಳ ಬಗ್ಗೆ ಮಾತನಾಡಬೇಕೆನ್ನುವ ಅಭಿಪ್ರಾಯದಿಂದ ಇಲ್ಲಿ ನಿಂತಿದ್ದೇನೆ. ಇದಕ್ಕೆ ಪೂರ್ವ ನಾನು ಒಂದು ಅಭಿಪ್ರಾಯವನ್ನು ಕೊಟ್ಟರೆ ಅದು ನಮ್ಮ ಚಿಂತನೆಗೆ, ನಮ್ಮಲ್ಲಿರುವ ಸಾಮಾಜಿಕ, ಆರ್ಥಿಕ ವ್ಯವಸ್ಥೆಗೆ ಅದು ಪೂರಕವಾಗಿ ನಿಲ್ಲಬಹುದೆಂದು ನನ್ನ ಭಾವನೆ. ನಮ್ಮ ಸಮಾಜ ಇವ್ಯಾವುದು ಎಂಬುದು. ನಮ್ಮ ಆರ್ಥಿಕ ಸಮಾಜ ಬೇಸಾಯಕ್ಕೆ ಸಂಬಂಧಿಸಿದ ಆರ್ಥಿಕ ವಿಷಯದ ಮೇಲೆ ನಿಂತಿರುವ ಸಮಾಜ, ಇದನ್ನು ಕರ್ನಾಟಕಕ್ಕೆ ಸೀಮಿತಗೊಳಿಸಿ ನಾನು ಹೇಳಿದರೂ ಕೂಡ ರಾಷ್ಟ್ರಕ್ಕೇ ಇದು ಅನ್ವಯವಾಗುವ ಮಾತು. ನಮ್ಮ ಕೃಷಿ ಆಧಾರಿತ ಚಿಂತನೆಯನ್ನು ಮೂಲಭೂತವಾಗಿಟ್ಟರೆ ನಮ್ಮಂಥ ದೇಶದಲ್ಲಿ ಬೇರೆ ಕೈಗಾರಿಕಾ ನೀತಿ ಇತ್ಯಾದಿ ನೀತಿಗಳನ್ನು ಅವಲೋಕನ ಮಾಡಲು ಇಲ್ಲಿ ಅನುಕೂಲವಾಗುತ್ತದೆ. ನಮ್ಮಂತಹ ದೇಶದಲ್ಲಿ ಕೃಷಿ ಆಧಾರಿತ ನೀತಿ ವಿಫುಲಗೊಂಡರೆ ಇನ್ನುಳಿದಿರುವ ನೀತಿ ಅದೆಂದಿಗೂ ಉದ್ಧಾರವಾಗಲು ಸಾಧ್ಯವೇ ಇಲ್ಲ. ಇದು ವಿಭಿನ್ನವಾಗಿದೆ. ಬಹಳ ಮುಂದುವರೆದ ಜಪಾನ್, ಅಮೆರಿಕಾ, ಇಂಗ್ಲೆಂಡ್ ದೇಶಗಳಿಗೆ ಹೋಲಿಸಿದರೆ, ನಮ್ಮಂಥಹ ದೇಶದಲ್ಲಿ ಮಳೆ ಬರಬೇಕು, ಡ್ಯಾಮ್‌ಗಳು ಕಟ್ಟಿದ್ದರೆ ಅವು ತುಂಬಬೇಕು ಅಥವಾ ನೀರಾವರಿಯಲ್ಲದ ಪ್ರದೇಶಗಳಲ್ಲಿ ನಾವು ಅರ್ಥವ್ಯವಸ್ಥೆಯನ್ನು ಕೃಷಿ ಮುಖಾಂತರ ಕಾಣುತ್ತೇವೆ. ಇಲ್ಲಿ ನಾವು ಬಿದ್ದು ಹೋಗಿಬಿಟ್ಟರೆ ಅಂದರೆ ಮಳೆ ಬಾರದೇ ಇದ್ದರೆ ನಾವು ಕಟ್ಟಿರುವ ಅಣೆಕಟ್ಟುಗಳು ಪ್ರಯೋಜನಕ್ಕೆ ಬರಲು ಸಾಧ್ಯವೇ ಇಲ್ಲ.

ಉದಾಹರಣೆಗೆ ಅಮೆರಿಕವನ್ನು ತೆಗೆದುಕೊಳ್ಳೋಣ. ಮತ್ತೊಂದು ರಾಷ್ಟ್ರವನ್ನು ತೆಗೆದುಕೊಂಡು ಆ ರೀತಿ ಇರತಕ್ಕಂಥಹ ಆರ್ಥಿಕ ಸಮಾಜವನ್ನು ವಿಚಾರ ಮಾಡೋಣ. ಒಂದು ವೇಳೆ ಮಳೆ ಬಾರದೆ ಅಲ್ಲಿ ಡ್ಯಾಮ್‌ಗಳು ತುಂಬದೇ ಕೃಷಿ ಆರ್ಥಿಕ ಶಕ್ತಿ ಕುಸಿದು ಬಿದ್ದುಹೋಗುತ್ತಿದೆ ಎಂದು ಇಟ್ಟುಕೊಳ್ಳೋಣ. ಆಗ ಆ ರಾಷ್ಟ್ರದವರು ಕೈಗಾರಿಕಾ ಆರ್ಥಿಕ ನೀತಿ ಏನಿದೆ ಸ್ವತಃ ಅದರ ಮೇಲೆಯೇ ನಿಲ್ಲಬಲ್ಲರು. ಆ ಶಕ್ತಿಯನ್ನು ಅವರು ಪರ್ಯಾಯವಾಗಿ ಸ್ಪಷ್ಟವಾಗಿ ಇಟ್ಟುಕೊಂಡಿದ್ದಾರ. ಆದರೆ ನಮ್ಮಂತಹ ದೇಶದಲ್ಲಿ ಹಾಗಿಲ್ಲ. ಕೃಷಿ ಆಧಾರಿತ ಆರ್ಥಿಕ ನೀತಿಗೆ ಸಂಬಂಧಪಟ್ಟಿರತಕ್ಕಂಥ ಕೈಗಾರಿಕಾ ನೀತಿ ನಮ್ಮಂತಹ ರಾಷ್ಟ್ರದಲ್ಲಿ ಉಳಿದುಕೊಂಡಿದೆ. ಕೃಷಿ ನೀತಿ ಹೋಗಿಬಿಟ್ಟರೆ ಆರ್ಥಿಕ ಶಕ್ತಿ ಕುಸಿದುಬಿದ್ದು ಹೋಗಿಬಿಟ್ಟರೆ, ಕೈಗಾರಿಕಾ ಆರ್ಥಿಕ ಶಕ್ತಿಯೂ ಕೂಡ ಅದು ಎಷ್ಟೇ ಬೆಳವಣಿಗೆಯಾಗಿದ್ದರೂ ಅದು ನಿಲ್ಲುವುದಕ್ಕೆ ನಮ್ಮಂತಹ ರಾಷ್ಟ್ರದಲ್ಲಿ ಸಾಧ್ಯವೇ ಇಲ್ಲ. ಜೊತೆಗೆ ಶೇಕಡ 80, 90 ರಷ್ಟು ಕೃಷಿ ಪ್ರದೇಶ ಜನಸಂಖ್ಯೆ ಅದರ ಮೇಲೆ ಅವಲಂಬನೆಯನ್ನು

ಮಾಡಿಕೊಂಡಿರತಕ್ಕಂಥ ಒಂದು ವ್ಯವಸ್ಥೆಯನ್ನು ನಾವು ಈ ಮಧ್ಯೆ ಪಡೆದೇ ಇರುವುದರಿಂದ ಇದನ್ನು ಅತಿ ಮುಖ್ಯವಾಗಿ ನೋಡಬೇಕಾಗಿರತಕ್ಕಂಥ ಒಂದು ವಿಚಾರಧಾರೆಯೆಂದು ನಾನು ಭಾವಿಸಿದ್ದೇನೆ. ನಾವು ನಮ್ಮ ಚಿಂತನೆಯನ್ನು ಈ ವಿಚಾರದ ಬಗ್ಗೆ ಗಮನಹರಿಸಿ ನಾವು ನಮ್ಮ ಕಾರ್ಯಕ್ರಮಗಳನ್ನು, ನಮ್ಮ ಯೋಜನೆಯನ್ನು ವಾರ್ಷಿಕ, ಪಂಚವಾರ್ಷಿಕವಾಗಿ ಇದನ್ನು ರೂಪಿಸಿಬೇಕು. ಆ ಯೋಜನೆಯಡಿಯಲ್ಲಿ ನಮ್ಮ ಕಾರ್ಯಕ್ರಮಗಳನ್ನು ಸ್ಪಷ್ಟವಾಗಿ ನಾವು ರೂಪಿಸಿ ಜಾರಿಗೆ ಕೊಟ್ಟು ಅದರ ಫಲವನ್ನು ನಾವು ರಾಜ್ಯಕ್ಕೆ ಅಥವಾ ನಮ್ಮ ರಾಷ್ಟ್ರಕ್ಕೆ ನೀಡದಾಗಿ ಮಾತ್ರ ಆರ್ಥಿಕ ವ್ಯವಸ್ಥೆ ಕುಸಿಯುವುದರ ಬದಲು ಅದು ಶಕ್ತಿಯನ್ನು ಪಡೆಯಲಿಕ್ಕೆ ಸಾಧಯವಾಗುತ್ತದೆ ಎನ್ನತಕ್ಕದ್ದು ನನ್ನ ಸ್ಪಷ್ಟವಾಗಿರತಕ್ಕ ನಂಬಿಕೆ. ನಾನಾದರೂ ನಂಬಿಕೊಂಡಿದ್ದೇನೆ, ಈ ಮೂಲಕ ವಿಚಾರದ ಬಗ್ಗೆ ಭಿನ್ನಾಭಿಪ್ರಾಯ ನಮ್ಮಲ್ಲಿ ಯಾವಾಗಲೂ ಬರಲಾರದು ಎನ್ನತಕ್ಕ ಅಭಿಪ್ರಾಯವನ್ನು ಪಕ್ಷ ಬೇಧವನ್ನು ಮರೆತು ನಾವು ಇಟ್ಟುಕೊಂಡಿದ್ದೇವೆ ಎನ್ನುವಂತಹ ವಿಚಾರವನ್ನು ನಾನು ಇಟ್ಟುಕೊಂಡಿದ್ದೇನೆ. ಇದರ ಅರ್ಥವನ್ನು ಇನ್ನೊಂದು ಮಾತಿನಲ್ಲಿ ಹೇಳುವಹಾಗಿದ್ದರೆ, ನಾವು ಒಂದು ಯೋಜನೆಯನ್ನು ರೂಪಿಸಬೇಕಾದರೆ ಯೋಜನಾ ಗಾತ್ರವನ್ನು ಒಂದು ಆರ್ಥಿಕ ವರ್ಷಕ್ಕೆ ರೂಪಿಸತಕ್ಕಂಥ ಒಂದು ಸಂದರ್ಭದಲ್ಲಿ ಪಂಚವಾರ್ಷಿಕ ಯೋಜನೆಯನ್ನು ಕೂಡ ಗಮನದಲ್ಲಿಟ್ಟು ನಾವು ರೂಪಿಸುತ್ತಾ ಹೋಗುತ್ತೇವೆ. ಯೋಜನಾಗಾತ್ರವನ್ನು ರೂಪಿಸತಕ್ಕಂಥ ಸಂದರ್ಭದಲ್ಲಿ ನಾವು ಪ್ರಿಯಾರಿಟಿ ಸೆಕ್ಟಾರ್ ಅಥವಾ ಕೋರ್ ಸೆಕ್ಟಾರ್ ಅಥವಾ ಆದ್ಯತಾ ವಲಯಗಳ ಎನ್ನತಕ್ಕ ಮಾತನ್ನು ನಾವೇನು ಹೇಳುತ್ತೇವೆ ಅದಕ್ಕೆ ಹೆಚ್ಚಿನ ಹಣವನ್ನು ನೀಡತಕ್ಕ ಮೂಲ ನೀತಿಗೆ ನಾವೆಲ್ಲರೂ ಬದ್ಧರಾಗಿಯೇ ಬಂದಿದ್ದೇವೆ. ಉದಾಹರಣೆ ಭಾರಿ, ಮಧ್ಯಮ, ಮತ್ತು ಸಣ್ಣ ಇತ್ಯಾದಿ ನೀರಾವರಿ ಯೋಜನೆಗಳು ಇವೆ. ಸಣ್ಣ ನೀರಾವರಿಯಲ್ಲಿ ಬೇಕಾದಷ್ಟು ರೀತಿ ಇದೆ. ಇನ್ನು ವಿದ್ಯುತ್ ವಲಯವನ್ನು ಕೂಡ ಆದ್ಯತಾ ವಲಯಕ್ಕೇ ನಾವು ತಂದಿದ್ದೇವೆ. ಅದು ಕೃಷಿ ಮತ್ತು ಕೈಗಾರಿಕೆಗೆ ಸಂಪೂರ್ಣವಾಗಿ ಇಂಬು ಕೊಡತಕ್ಕಂಥಹ ಒಂದು ವಿಚಾರಧಾರೆಯಾಗಿದೆ. ನಾವು ಬೇಸಾಯ, ಕೈಗಾರಿಕೆ, ಎಲ್ಲವನ್ನು ಕೂಡ ಒಟ್ಟಿಗೆ ತೆಗೆದುಕೊಂಡು ಹೋಗುವಂತಹ ಸಂದರ್ಭದಲ್ಲಿಯೇ ನಾವು ಗಮನದಲ್ಲಿಟ್ಟುಕೊಂಡು ನಾವೇನು ಯೋಜನಾ ವೆಚ್ಚವನ್ನು ಒಂದು ಆರ್ಥಿಕ ವರ್ಷಕ್ಕೆ ನಿಗದಿಪಡಿಸುತ್ತೇವೆ ಆ ಯೋಜನಾ ಗಾತ್ರಕ್ಕೆ ಅನುಗುಣವಾಗಿ ನಾವು ಆ ರೀತಿಯಾಗಿ ಯೋಜನಾ ವೆಚ್ಚವನ್ನು ಮಾಡತಕ್ಕ ಸಂದರ್ಭದಲ್ಲಿ ಯೋಜನೇತರ ವೆಚ್ಚವನ್ನು ನಾವು ಯಾವ ರೀತಿ ಮಾಡಬೇಕೋ ಖರ್ಚು ಯಾವ ರೀತಿ ಮಾಡಬೇಕೋ ಯಾವ ಬಾಬಿಗೆ ಮಾಡಬೇಕೋ, ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ ನಾವು ಹೇಗೆ ಮಾಬೇಕು ಎನ್ನತಕ್ಕ ವಿಚಾರದಲ್ಲಿಯೂ ಕೂಡ ನಾವು ಬಹಳ ಗಮನವನ್ನು ಹರಿಸುತ್ತೇವೆ. ಉದಾಹರಣೆಗೆ ನಾವು ತೆಗೆದುಕೊಳ್ಳೋಣ. ಇವತ್ತು ಸಮಾಜ ಎನ್ನತಕ್ಕ ಮಾತನ್ನಾಡಿದಾಗ ಬರೀ ಲ್ಯಾಂಡ್ ಅಂಡ್ ಪ್ಲಾಜಂಟರಿ ಬಗ್ಗೆ ಮಾತನಾಡುವುದಿಲ್ಲ. ಇವತ್ತು ಒಬ್ಬ ವ್ಯಕ್ತಿಗೆ 10 ಎಕರೆ ಜಮೀನು ಇದೆ ಎಂದು ಇಟ್ಟುಕೊಳ್ಳೋಣ. 10 ಎಕರೆ ಭೂಮಿ ಒಬ್ಬ ವ್ಯಕ್ತಿಗೆ ಇದ್ದರೆ ಸ್ವತಃ ಅವನೇ ದುಡಿದು ಬೇಸಾಯ ಮಾಡಿ ಬೆಳೆಯನ್ನು ತೆಗೆದರೆ ನಿಜವಾಗಿಯೂ ಅವರಿಗೆ ಕಾಸ್ಟ್ ಆಫ್ ಪ್ರೊಡಕ್ಷನ್ ಕಡಿಮೆ ಬೀಳುತ್ತದೆ. ಮನೆಯಲ್ಲಿ ಜನಸಂಖ್ಯೆ ಜಾಸ್ತಿ ಇರಬೇಕು. ಹಿಂದಲ್ಲಾ ಅವಿಭಾಜ್ಯ ಕುಟುಂಬಗಳು ಬೇಕಾದಷ್ಟು ಇದ್ದವು. ಈಗ ಆ ವ್ಯವಸ್ಥೆ ಇಲ್ಲ, ಆ ವ್ಯವಸ್ಥೆ ನುಚ್ಚುನೂರಾಗಿದೆ. ಈಗ ವ್ಯವಸ್ಥೆ ಹೆಚ್ಚುಕಡಿಮೆಯಾಗಿರುವುದರಿಂದ ಲ್ಯಾಂಡ್ ಹೋಲ್ಡಿಂಗ್ಸ್ ಕೂಡ, ಅದರ ಗಾತ್ರ ಏನಿದೆ ಅದು ಡಿಮಿನಿಶ್ ಆಗುತ್ತಾ ಬರುತ್ತಿದೆ. ಅದು ಲ್ಯಾಂಡ್ ರಿಫಾರ್ಮ್ಸ್ ಇರಬಹುದು, ಮತ್ತೊಂದು ಕಾನೂನೇ ಇಬಹುದು. ಇದು ಯೋಜನಾ ವ್ಯಾಪ್ತಿಯಲ್ಲಿದೆ. ಇದು ತಮಗೆಲ್ಲಾ ಗೊತ್ತಿರುವುದು.

ಈಗ ಅದು ಕಡಿಮೆಯಾಗುತ್ತಾ ಬರುತ್ತಿದೆ. ಆಧರೆ ನಮ್ಮಂತಹ ಸಮಾಜದಲ್ಲಿ ನಾವು ಒಂದು ಯೋಜನೆಯನ್ನು ರೂಪಿಸಬೇಕಾದರೆ ಇವತ್ತು ಭೂಮಿಯ ಮಾಲೀಕನ ಬಗ್ಗೆ ನಾವೇನು ಗಮನವನ್ನು ಹರಿಸುತ್ತೇವೆ, ಆ ಭೂಮಿಯ ಮಾಲೀಕನು ಒಬ್ಬನೇ ಹೋಗಿ ಅಲ್ಲಿ ಬೆಳೆಯುವುದಕ್ಕೆ ಸಾಧ್ಯ ಇಲ್ಲದೇ ಇರುವಂತಹ ಪರಿಸ್ಥಿತಿ ನಮ್ಮಂತಹ ಸಮಾಜದಲ್ಲಿ ಉದ್ಭವವಾಗಿದೆ. ಇದು ಇವತ್ತಿನದಲ್ಲ, ಹಿಂದೆ ಬೇಕಾದಷ್ಟು ಇತ್ತು. ಈಗಂತೂ ಜನಸಂಖ್ಯಾ ಸ್ಫೋಟ ಅಸಾಧ್ಯವಾಗಿ ಬೆಳೆದುಕೊಂಡಿದೆ. ಕೃಷಿಕಾರ್ಮಿಕರು ಎನ್ನತಕ್ಕಂಥ ಮಾತನ್ನು ನಾವು ಆಡಿದಾಗ ಅವನಿಗೆ ಸ್ವತಃ ಭೂಮಿ ಇಲ್ಲದಿದ್ದರೂ ಕೂಡ ಮತ್ತೊಬ್ಬರ ಭೂಮಿಯಲ್ಲಿ ಹೋಗಿ ಅವನು ದುಡಿದು ಜೀವನ ಮಾಡತಕ್ಕಂಥದ್ದು, ಅನ್ನ ತಿನ್ನತಕ್ಕಂಥದ್ದು ಅಥವಾ ರಾಷ್ಟ್ರಕ್ಕೆ ಆಹಾರ ಉತ್ಪಾದನಾ ವಲಯಕ್ಕೆ ಹೆಚ್ಚಿನ ಆಹಾರವನ್ನು ಉತ್ಪಾದನೆ ಮಾಡುವ ಹಾಗೆ ಇದ್ದರೆ ಬರೀ ಭೂಮಿ ಮಾಲೀಕ ಮಾತ್ರ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಕೃಷಿ ಕಾರ್ಮಿಕ ಏನು ಇದ್ದಾನೆ, ಅವನ ಕೈ ಇಲ್ಲದಿದ್ದರೆ ಮಾಲೀಕ ಏನೂ ಕೂಡ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕಂಥ ವಿಚಾರವನ್ನು ನಾವು ಗಮನಿಸಬೇಕು. ಅದರ ಅರ್ಥ ಇನ್ನೊಂದು ಮಾತಿನಲ್ಲಿ ಹೇಳುವ ಹಾಗಿದ್ದರೆ ಭೂಮಾಲೀಕ ಮತ್ತು ಕೃಷಿ ಕಾರ್ಮಿಕ ಇವರಿಬ್ಬರನ್ನೂ ಕೂಡ ಜೊತೆಗೆ ತೆಗೆದುಕೊಂಡು ಹೋದಾಗ ಮಾತ್ರ ನಾವು ಕೃಷಿ ಆಧಾರಿತ ಆರ್ಥಿಕ ವಲಯಕ್ಕೆ ಹೆಚ್ಚಿನ ಬೆಂಬಲ ಕೊಡುವುದಕ್ಕೆ ನಮಗೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಈ ಆರ್ಥಿಕ ವಿಚಾರ ಸ್ಪಷ್ಟವಾಗಿ ಕುಸಿದುಬೀಳುತ್ತದೆ. ಇದರ ಬಗ್ಗೆ ಅನುಮಾನ ,ಬೇಕಾಗಿಲ್ಲ. ನಾವು ಎಷ್ಟೋ ವರ್ಷಗಳಿಂದ ಮಾಡಿಕೊಂಡು ಬಂದಿರತಕ್ಕಂಥದ್ದು. ಗ್ರಾಮೀಣ ಪ್ರದೇಶದಿಂದ ಹೆಚ್ಚಾಗಿ ನಾವೆಲ್ಲ ಬಂದಿದ್ದೇವೆ. ಅಲ್ಲಿ ಬೆಳೆ ಬಂದಾಗ ಪಟ್ಟಣ ನಗರ ಪ್ರದೇಶದಲ್ಲಿ ಚುಟುವಟಿಕೆ ಜಾಸ್ತಿಯಾಗುತ್ತದೆ. ಒಂದಕ್ಕೊಂದು ಪೂರಕವಾಗಿದೆ. ಅಲ್ಲಿ ಯಾವಾಗ ಮಳೆಬೆಳೆಗಳು ವಿಫಲವಾಗುತ್ತವೆ ತಕ್ಷಣ ಪಟ್ಟಣ ನಗರ ಪ್ರದೇಶದಲ್ಲಿ ಕೂಡ ಸ್ಪಷ್ಟವಾಗಿ ಪೆಟ್ಟಾಗುತ್ತದೆ. ನಮ್ಮಂಥ ಸಮಾಜದಲ್ಲಿ ಗ್ರಾಮೀಣ ಪ್ರದೇಶ ಮತ್ತು ಗ್ರಾಮೀಣೇತರ ಪ್ರದೇಶಗಳು ಅಂದರೆ ಪಟ್ಟಣ ನಗರ ಪ್ರದೇಶಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ನೋಡತಕ್ಕಂಥ ಸಮಾಜ ನಮ್ಮದಲ್ಲ. ಇದು ಒಂದಕ್ಕೊಂದು ಪೂರಕವಾಗಿರತಕ್ಕಂಥ ಒಂದು ಸಮಾಜ. ಆದ್ದರಿಂದ ನಾನು ಪೂರ್ವಪೀಠಿಕೆಯಾಗಿ ಈ ಮಾತನ್ನು ಆಡಿರತಕ್ಕಂಥದ್ದು ಇಷ್ಟೆ. ನಾವು ಯೋಜನಾ ಗಾತ್ರವನ್ನು ಮಾಡಬೇಕಾದರೆ ಯೋಜನಾ ವ್ಯಾಪ್ತಿಗೆ ತರತಕ್ಕಂಥ ವಿಚಾರಗಳನ್ನು ನಾವು ಗಮನಿಸಬೇಕಾದಂಥ ಸಂದರ್ಭದಲ್ಲಿ ಆದ್ಯತಾ ವಲಯಗಳನ್ನು ಗಮನದಲ್ಲಿಟ್ಟೇ ಯಾವಾಗಲೂ ಯೋಜನಾ ಆಯೋಗದವರು ಯಾವ ವಿಚಾರವನ್ನು ಗಮನದಲ್ಲಿಡುತ್ತಾರೆ, ನಾವು ಕೂಡ ಅದನ್ನು ಒಪ್ಪಿ ಅದೇ ರೀತಿ ನಾವು ಮಾಡಿಕೊಂಡು ಬಂದಿರತಕ್ಕಂಥ ವಿಚಾರ ನಮ್ಮ ಮುಂದೆ ನಾವು ಇಟ್ಟುಕೊಂಡಿದ್ದೇವೆ. ಈ ಸಂದರ್ಭದಲ್ಲಿ ನಾನು ಮಾತನಾಡಬೇಕಾದರೆ ಟೀಕೆ ಟಿಪ್ಪಣಿಗಳು ಅಥವಾ ವಿವರಣೆಗಳು ಬಂದಾಗ ಸಹಜವಾಗಿ ನಾವು ಒಪ್ಪಿಕೊಂಡಿದ್ದೇವೆ. ನಮ್ಮಂಥ ವ್ಯವಸ್ಥೆಯಲ್ಲಿ ಟೀಕೆ ಟಿಪ್ಪಣಿ ಮತ್ತೊಂದು ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಇವೆಲ್ಲಾ ಕೂಡ ನಿರೀಕ್ಷೆ ಮಾಡಿರತಕ್ಕಂಥ ವಿಚಾರಗಳು ಒಪ್ಪಿರತಕ್ಕಂಥ ವಿಚಾರಗಳು. ನನಗೆ ಅದರ ಬಗ್ಗೆ ಯಾವುದೇ ಕೂಡ ವಿಚಾರ ಅಲ್ಲ. ಆಧರೆ ಅವಾಸ್ತವಿಕ ವಿಚಾರಗಳು ಅಥವಾ ಅಂಕಿಅಂಶಗಳಿಂದ, ವಾಸ್ತವಾಂಶಗಳಿಂದ ದೂರ ಇರತಕ್ಕಂಥ ವಿಚಾರಧಾರೆ ಬಂದಾಗ ಅದನ್ನು ಸರಿಪಡಿಸತಕ್ಕಂಥ ಜವಾಬ್ದಾರಿ ನಮ್ಮೆಲ್ಲರ ಮೇಲೆ ಇದೆ. ನಾನು ಈ ಮಾತನ್ನು ಆಡುವುದು ಏತಕ್ಕಾಗಿ ಎಂದರೆ, ನಾನೂ ಕೂಡ ಮುಖ್ಯಮಂತ್ರಿಯಾಗಿ ಕರ್ನಾಟಕ ರಾಜ್ಯದಲ್ಲಿ ಎರಡು ವರ್ಷ ಆಡಳಿತವನ್ನು ನಮ್ಮ ಮಿತ್ರರೊಡಗೂಡಿ ನಮ್ಮ ಪಕ್ಷದ ಮುಖಾಂತರ ನಾವು ನಮ್ಮ ಕಾರ್ಯಕ್ರಮವನ್ನು ನಡೆಸಿದ್ದೇವೆ. ಟೀಕೆ ಟಿಪ್ಪಣಿಗಳು ಬಂದಾಗ ನನ್ನ

ಹೆಸರನ್ನು ತೆಗೆದುಕೊಳ್ಳತಕ್ಕಂಥಾದ್ದು ಸಹಜ. ಏಕೆಂದರೆ ನಾನು ಮುಖ್ಯಮಂತ್ರಿಯಾಗಿದ್ದೆ, ಆ ಕಾರಣಕ್ಕಾಗಿ. ಒಂದು ಸರ್ಕಾರದ ಪ್ರತಿನಿಧಿಯಾಗಿ, ಮುಖ್ಯಸ್ಥನಾಗಿದ್ದಂಥ ಕಾಲ. ನಾನು ಕುಳಿತುಕೊಂಡು ಕೇಳಿದೆ. ನಿನ್ನೆ ಕೂಡ ಮಾನ್ಯ ಯಡಿಯೂರಪ್ಪನವರ ಭಾಷಣ ಕೇಳಿದೆ. ನಾನು ಹೆಚ್ಚು ಕಾಲ ಕುಳಿತುಕೊಳ್ಳುವುದಿಲ್ಲ. ನಾನು ಏನೊ ಸ್ವಲ್ಪ ಹೊತ್ತು ಬಂದು ಕುಳಿತುಕೊಂಡೆ. ಕೆಲವು ದಿವಸ ನಾನು ಊರಿನಲ್ಲಿರಲಿಲ್ಲ. ನಾನು ಕುಳಿತುಕೊಂಡಾಗಲೂ ನಾನು ಕೇಳಿದ್ದೇನೆ. ಅಥವಾ ಇಲ್ಲದೇ ಇರತಕ್ಕಂಥ ಸಂದರ್ಭದಲ್ಲಿ ಕೂಡ ಬರುತ್ತದೆ. ಅದು ನನಗೆ ಒಂದು ಸಂತೋಷ. ಕೆಲವು ಕಾರ್ಯಕ್ರಮಗಳನ್ನು ನೀವು ಮನಸಾರೆ ಮೆಚ್ಚಿ ಸ್ವಾಗತ ಮಾಡಿದ್ದೀರಿ. ಇನ್ನು ಕೆಲವು ಕಾರ್ಯಕ್ರಮಗಳನ್ನು ಟೀಕಿಸಿದ್ದೀರಿ. ಕಟುವಾಗಿ ಕೂಡ ಟೀಕಿಸಿದ್ದೀರಿ. ನಿಮ್ಮ ಪ್ರಕಾರ ಕಾರ್ಯಕ್ರಮ, ಅದು ಇರಬಹುದು, ಇಲ್ಲ ಎನ್ನತಕ್ಕಂಥ ಮಾತನ್ನು ನಾನು ಆಢಲಾರೆ. ಆದರೆ ಒಂದು ಮಾತು ನಿಜ. ಸಕಾರಣಗಳ ಆಧಾರದ ಮೇಲೆ ಇಲ್ಲದಿರಕ್ಕಂಥ ಟೀಕೆಟಿಪ್ಪಣಿಗಳು ಅವು ಸತ್ಯಕ್ಕೆ ದೂರವಾಗಿ ಉಳಿಯುತ್ತವೆ ಎನ್ನತಕ್ಕಂಥ ಮಾತನ್ನು ಯಾರೂ ಮರೆಯಬಾರದು. ನಾನು ಈ ಸಂದರ್ಭದಲ್ಲಿ ನನ್ನ ಕಾಲದಲ್ಲಿ ಅರ್ಥಾತ್ ಎರಡು ವರ್ಷಗಳ ಅವಧಿಯಲ್ಲಿ, ನಾನು ಮುಖ್ಯಮಂತ್ರಿಯಾಗಿದ್ದಂಥ ಕಾಲದಲ್ಲಿ ಆಡಳಿತದ ಬಗ್ಗೆ ಹೆಚ್ಚಾಗಿ ಗಮನ ಕೊಟ್ಟಿರತಕ್ಕಂಥ ಸಂದರ್ಭ, ತಮ್ಮ ಭಾಷಣಗಳ ಕಾಲದಲ್ಲಿ ಏನು ಬಂದಿದೆ, ಸುಮಾರು 1989ರ ನಂತರ ಅಂದರೆ ಶ್ರೀಮಾನ್ ವೀರೇಂದ್ರ ಪಾಟೀಲ್‌ರವರು ಕೂಡ ಒಂದು ವರ್ಷ ಮುಖ್ಯಮಂತ್ರಿಯಾಗಿದ್ದಂಥ ಕಾಲವನ್ನು ಕೂಡ ತಾವು ಸೇರಿಸಿ ಅನೇಕ ಸಾರಿ ಮಾತನಾಡಿರುವುದು ಅಲ್ಲಿದೆ. ಆದರೆ ಒಂದು ಮಾತು, ನಾನು ಮುಖ್ಯಮಂತ್ರಿಯಾಗಿ ಅಧಿಕಾರವನ್ನು ತೆಗೆದುಕೊಂಡಿದ್ದು ಅಕ್ಟೋಬರ್ 17ನೇ ತಾರೀಖು 1990. ಹಿಂದಿನ ಸರ್ಕಾರ ಏನು ಮಾಡಿತು ಮತ್ತೊಂದು ಮಾಡಿತು ಎನ್ನುವ ಮಾತನ್ನು ಆಡುವುದಕ್ಕೆ ನಾನು ಹೋಗಲಿಲ್ಲ. ಒಬ್ಬ ವ್ಯಕ್ತಿಯ ವಿಚಾರಧಾರೆ ನೋಡುವುದಕ್ಕೆ ಎರಡು ದೃಷ್ಟಿಕೋನಗಳು ಇದ್ದಾವೆ. ಒಬ್ಬ ವ್ಯಕ್ತಿ ಅಧಿಕಾರಕ್ಕೆ ಬಂದಾಗ ಹಿಂದೆ ಏನು ಮಾಡಿದರು, ಮತ್ತೊಂದು ಮಾಡಿದರು ಎಂದು ಬೇರೆ ಪಕ್ಷದ ಸರ್ಕಾರದವರು ಇದ್ದಾಗಲೂ ಹೇಳುವುದಕ್ಕೂ ಕಾರಣ ಬರಬಹುದು. ಆಧರೆ ಒಂದು ಇನ್ನೊಂದು ದೃಷ್ಟಿಕೋನ ಹಿಂದಿನದು ಏನನ್ನೂ ನೋಡದೆ ನಮ್ಮ ಜವಾಬ್ದಾರಿ ಬಹಳ ದೊಡ್ಡದು, ರೈತರು ತುಂಬಿದ್ದಾರೆ, ಬಡವರು ಜಾಸ್ತಿ ಇದ್ದಾರೆ ಸಮಸ್ಯೆಗಳ ಮಹಾಪೂರ ನಮ್ಮ ಎದುರಿನಲ್ಲಿ ಹರಿಯುತ್ತಿರಬೇಕಾದರೆ ಸಮಸ್ಯೆಗಳಿಗೆ ಪರಿಹಾರ ಕಾಣುವುದಕ್ಕೆ ಹಿಂದನದನ್ನು ಕೆದಕುವುದಕ್ಕಿಂತ ಮುಂದಿನ ವಿಚಾರ ಮಾಡುವುದು ಬಹಳ ಒಳ್ಳೆಯದು ಎಂದು ವಿಚಾರ ಮಾಡುವುದಕ್ಕೂ ಬರುತ್ತದೆ. ಆದರೆ ಹಿಂದಿನ ಆಡಳಿತ ಕಾಲದಲ್ಲಿ ಕ್ಷಮೆಗೆ ಅರ್ಹತೆ ಪಡೆಯದೇ ಇರತಕ್ಕ ವಿಚಾರ ಯಾವುದಾದರೂ ಇದ್ದರೆ ಅದನ್ನು ಪ್ರಸ್ತಾಪ ಮಾಡುವುದಕ್ಕೆ ತಮಗೆ ಹಕ್ಕು ಇವೆ, ಅದನ್ನು ತಾವು ಮಾಡಿ. ನಾನು ಅದಕ್ಕೆ ಅಡ್ಡ ಬರುವುದಿಲ್ಲ. ಇದು ನನ್ನ ವಿಚಾರಧಾರೆ. ಅಧಕ್ಕಾಗಿ ಎರಡನೆಯ ವಿಚಾರವನ್ನು ನಾನು ನನ್ನ ಅಧಿಕಾರದ ಅವಧಿಯಲ್ಲಿ ಸ್ಪಷ್ಟವಾಗಿ ಆರಿಸಿಕೊಂಡಿದ್ದೇನೆ. ಹಿಂದೆ ನೋಡತಕ್ಕ ಅವಶ್ಯಕತೆ ಇಲ್ಲ. ನಾನು ಮುಂದಿನ ಮಾರ್ಗದಲ್ಲಿ ನೋಡಬೇಕು ಎನ್ನತಕ್ಕ ವಿಚಾರ. ನಾನು ಸದನದಲ್ಲಿ ಸಭಾ ನಾಯಕನಾಗಿ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿಯೂ ಕೂಡ ಒಂದು ಮಾತನ್ನು ಹೇಳಿದ್ದೆ. ನಮ್ಮ ಆಡಳಿತ ಕಾಲದಲ್ಲಿ ತಪ್ಪುಗಳು ಇದ್ದರೆ ಇರಲಿ. ನಾವಾಗಿಯೇ ತಪ್ಪು ಕಂಡೂ ಕೂಡ ಮಾಡಿಲ್ಲ. ಆದರೆ ಕಾಣದೆ ಮಾಡಿದ್ದರೆ ಅದಕ್ಕೆ ಒಂದು ಮಾರ್ಜಿನ್ ಇರಲಿ, ಕರ್ನಾಟಕ ರಾಜ್ಯದ ಜನತೆಯ ಸಮಸ್ಯೆಗಳಿಗೆ ಪರಿಹಾರವನ್ನು ಸಾಧ್ಯವಾದರೆ ಶಾಶ್ವತ ಪರಿಹಾರವನ್ನು ಕಂಡುಹಿಡಿಯುವಂತಹ ವಿಚಾರದಲ್ಲಿ ತಮ್ಮೆಲ್ಲರ ಸಹಕಾರವನ್ನು ಈ ಸದನದ ಎಲ್ಲಾ ಮೂಲಗಳಿಂದ ಮತ್ತು ಈ ಸದನದ ಮುಖಾಂತರ ಕರ್ನಾಟಕ ಜನತೆಯ ಸಂಪೂರ್ಣ

ಸಹಕಾರವನ್ನು ನಾನು ನಿರೀಕ್ಷೆ ಮಾಡುತ್ತೇನೆ ಮತ್ತು ಕೇಳಿಕೊಳ್ಳುತ್ತೇನೆ ಎನ್ನತಕ್ಕ ಮಾತನ್ನು ಕೂಡ ಆ ಸಂದರ್ಭದಲ್ಲಿ ಆಡಿದ್ದೆ. ಅದಕ್ಕೆ ಅನುಗುಣವಾಗಿ ಸಹಕಾರ ನಾನು ಈ ಸದನದಲ್ಲಿ ಪಡೆದಿದ್ದೆ. ಅದಕ್ಕಾಗಿ ಪಕ್ಷಬೇಧವನ್ನು ಮರೆತು ನಾನು ತಮ್ಮ ಮುಖಾಂತರ ಈ ಸದನದ ಎಲ್ಲಾ ಮಾನ್ಯ ಸದಸ್ಯರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಕೆಲವು ಸಾರಿ ಟೀಕೆ ಟಿಪ್ಪಣಿಗಳು ಬಂದರೂ ಕೂಡ ಅದು ನಮ್ಮಂಥ ವ್ಯವಸ್ಥೆಯ ಅವಿಭಾಜ್ಯ ಅಂಗ ಎನ್ನತಕ್ಕ ಒಂದು ಅನಿಸಿಕೆಯ ಹಿನ್ನೆಲೆಯಲ್ಲಿ ಮಾತ್ರ ಸ್ವೀಕಾರ ಮಾಡಿದ್ದೇನೆ ಎನ್ನತಕ್ಕ ಭಾವನೆಯನ್ನು ನಾನು ಈ ಸಂದರ್ಭದಲ್ಲಿ ಇಟ್ಟುಕೊಂಡಿದ್ದೇನೆ. ಇನ್ನು ನಾನು ನೇರವಾಗಿ ಹೇಳುತ್ತೇನೆ. ಏಕೆಂದರೆ, ನಾನು ತಾವು ಕೊಟ್ಟಿರತಕ್ಕಂಥ ಕಾಲವನ್ನು ಆದಷ್ಟು ಸದುಪಯೋಗ ಮಾಡಿಕೊಳ್ಳಬೇಕು ಎನ್ನತಕ್ಕ ವಿಚಾರವನ್ನಿಟ್ಟು ಕರ್ನಾಟಕ ರಾಜ್ಯದ ಜನತೆಗೆ ಸಾಧ್ಯವಿದ್ದರೆ ಯಾರಾದರೂ ರಾಜ್ಯದ ಹೊರಗಡೆ ಇರತಕ್ಕ ಜನ ರಾಜ್ಯದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಗಮನ ಇಟ್ಟರೆ ಅವರಿಗೂ ಕೂಡ ಗೊತ್ತಾಗಲಿ ಎನ್ನತಕ್ಕ ದೃಷ್ಟಿಯಿಂದ ನಾನು ಕೆಲವು ಅಂಕಿ ಅಂಶಗಳನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ನಾನು ಇಲ್ಲಿ ಹೇಳಿ ಇಡುತ್ತಿದ್ದೇನೆ. ಅಂಕಿ ಅಂಶಗಳನ್ನು ಬಿಟ್ಟರೆ ಬೇರೆ ಯಾವುದನ್ನೂ ನಾನು ಮಾತನಾಡುತ್ತಿಲ್ಲ. ಫ್ಯಾಕ್ಟ್ಸ್ ನೋ ಫಿಕ್ಷನ್. ಅದು ಬಿಟ್ಟು ಬೇರೆ ಮಾತನಾಡುವುದಕ್ಕೆ ನಾನು ಹೋಗುವುದಿಲ್ಲ. ಇವತ್ತು ನಾನು ಯಾವ ಅಂಕಿ ಅಂಶಕೊಟ್ಟು ಮಾತನಾಡುತ್ತೇನೆ, ಅದೇ ಅಂಕಿ ಅಂಶ ಇವತ್ತು ಸರ್ಕಾರದ ವಶದಲ್ಲಿದೆ. ಇವತ್ತು ಸರ್ಕಾರ ನಡೆಸುವವರು ನೋಡಿಕೊಳ್ಳಬಹುದು, ವಿರೋಧ ಪಕ್ಷದ ಮಾನ್ಯ ಸದಸ್ಯರು ನೋಡಿಕೊಳ್ಳಬಹುದು ಅಥವಾ ಯಾವುದೇ ಸಂಬಂಧಪಟ್ಟವರು ನೋಡುವುದಕ್ಕೆ ಸಾಧ್ಯ ಇರತಕ್ಕ ಅಂಕಿ ಅಂಶಗಳು ಅವು ಇವತ್ತು ನಾವು ವಿಚಾರ ಮಾಡೋಣ. ಒಂದು ಯೋಜನೆಯನ್ನು ತಯಾರು ಮಾಡಬೇಕಾದರೆ ಹಿಂದೆ ಥಿಂಕ್ ಟ್ಯಾಂಕ್ ಇತ್ಯಾದಿ ಇತ್ಯಾದಿ ಪದಗಳನ್ನು ನಾನು ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಕೇಳಿದ್ದೆ. ನಾನು ಒಂದು ಮಾತನ್ನು ಮುಖ್ಯಮಂತ್ರಿಯಾಗಿ ಹೇಳಿದ್ದೇನೆ. ಇವತ್ತು ಯಾರು ಬುದ್ಧಿವಂತರು, ಮಹಾ ಬುದ್ಧಿವಂತರು ಎಂದು ಅನಿಸಿಕೊಂಡವರು ಇದ್ದಾರೆ, ನಿಜವಾಗಿಯೂ ಅವರ ಸೇವೆ ಸದುಪಯೋಗ ಆಗುವುದಿದ್ದರೆ ಮಾಡಿಕೊಳ್ಳೋಣ. ನಾನು ಬೇಡ ಎಂದು ಹೇಳುವುದಿಲ್ಲ. ಆದರೆ ಅವುಗಳನ್ನು ಬಹಳ ವರ್ಷ ನೋಡಿ ಆಗಿದೆ, ಸ್ವಲ್ಪ ದಿವಸ ದೂರ ಇಡುವುದು ಒಳ್ಳೆಯದು ಎಂದು ಒಂದು ಮಾತನ್ನು ನಾನು ಆಡಿದ್ದೆ. ಇದು ಆಡುವುದಕ್ಕೆ ಏನು ಕಾರಣ ಎಂದರೆ ಒಂದೇ ಒಂದು ಕಾರಣ. ಸಾಮಾನ್ಯ ಪ್ರಜ್ಞೆ ಒಬ್ಬ ಮನುಷ್ಯನಿಗೆ ಇರಬೇಕು, ಅಥವಾ ಕಾಮನ್‌ಸೆನ್ಸ್ ಎಂದು ನಾವು ಏನು ಹೇಳುತ್ತೇವೆ ಅದು ಇರಬೇಕು. ಮುಖ್ಯಮಂತ್ರಿ ಆದ ಜೊತೆಯಲ್ಲಿ ನಾನೂ ಕೂಡ ರಾಜ್ಯದ ಹಣಕಾಸಿನ ಸಚಿವನಾಗಿ ಕೆಲಸ ಮಾಡಿದೇನೆ. I was never a student of economics at all during my college days. No. But I am a sheer student of sheer commonsense. ಅದನ್ನು ಬಿಟ್ಟರೆ ಇನ್ನು ಎಂತಹದೂ ಇಲ್ಲ. ನಾನು ಒಬ್ಬ ಸಾಮಾನ್ಯ ಹಳ್ಳಿಯಲ್ಲಿ ಹುಟ್ಟಿ ಬಂದಿರತಕ್ಕಂಥಹ ಸಾಮಾನ್ಯ ಒಬ್ಬ ರೈತನ ಮಗ. ತಾವು ಅನೇಕ ಜನ ಹೇಗಿದ್ದೀರೋ ನಾನು ಕೂಡ ಹಾಗೇಯೇ ಬಂದಂತಹವನು. ಅದರ ಹಿನ್ನೆಲೆಯಲ್ಲಿ ನೋವು ನಲಿವು, ಯಾತನೆ, ಪಡಬಾರದ ಕಷ್ಟ ಪಡತಕ್ಕಂತಹ ವರ್ಗದ ಮಧ್ಯೆ ಹುಟ್ಟಿ ಬಂದಿರತಕ್ಕಂಥಹ ಆ ಹಿನ್ನೆಲೆ ಏನು ಇದೆ, ಅದಕ್ಕೆ ಅನುಗುಣವಾಗಿ ನಮ್ಮ ಚಿಂತೆಯನ್ನು ರೂಪಿಸಿದ್ದೇವೆ ಎನ್ನುವ ನಂಬಿಕೆ ಇಟ್ಟು ಬಂದಿರತಕ್ಕವನು. ತಾವು ಅನೇಕ ಜನ ಕೂಡ ಹಾಗೆಯೇ ಇದ್ದೀರಿ. ಪಕ್ಷಭೇದ ಮರೆತು ನಾನು ಈ ಮಾತನ್ನು ಆಡುತ್ತಿದ್ದೇನೆ. ಬರೇ ನಾವೇ ಇದ್ದೀವೆ ಎನ್ನತಕ್ಕ ಮಾತನ್ನು ನಾನು ಆಡಲಾರೆ. ಆ ಹಕ್ಕು ತಮಗೂ ಇದೆ, ಅದಕ್ಕೆ ತಾವು ಬದ್ಧರಾಗಿದ್ದೀರಿ. ಆ ಕಮಿಟ್‌ಮೆಂಟ್ ನಿಜವಾಗಿಯೂ ಇದ್ದರೆ ನಿಜವಾಗಿಯೂ ಕೂಡ ಬಹಳ

ಮೆಚ್ಚತಕ್ಕ ಸಂಗತಿಯೂ ಹೌದು. ನಾನು ಈ ವರ್ಷದ ಇಂಗ್ಲೀಷ್ ಬಜೆಟ್ ಸ್ಪೀಚಿನಲ್ಲಿ ಒಂದು ಮಾತನ್ನು ನೋಡಿದೆ. ಇದರಲ್ಲಿ ಏನು ಇದೆ ಎಂದರೆ ಕೆಲವು ಪದಗಳು ಅಪರೂಪವಾಗಿ ಇರತಕ್ಕ ಪದಗಳು. ಸುಮಾರಾಗಿ ನನ್ನ ಕಾಲದಲ್ಲಿ ಇಂತಹ ಪದಗಳು ಬರುವುದಕ್ಕೆ ನಾನು ಬಿಡುತ್ತಾ ಇರಲಿಲ್ಲ. ಮತ್ತೆ ಅದೇ ಥಿಂಕ್ ಟ್ಯಾಂಕ್‌ಗಳು ಪ್ರಾರಂಭ ಆಯಿತೇವೋ ಎನ್ನುವ ಅನುಮಾನ ನನ್ನ ಮನಸ್ಸಿಗೆ ಬರುತ್ತಾ ಇದೆ. ಬಜೆಟ್ ಸ್ಪೀಚಿನಲ್ಲಿ ಮೆದಲನೆ ಪುಟದಲ್ಲಿ ಇರತಕ್ಕದ್ದು "ಸಮಾನ ಕಾರ್ಯನಿರ್ವಹಣಾ ಕ್ಷೇತ್ರ" "ಲೆವೆಲ್ ಪ್ಲೇಯಿಂಗ್ ಫೀಲ್ಡ್" I know this is a American phraseology. ಇವತ್ತು ಡಂಕೆಲ್ ವಿಚಾರದಲ್ಲಿ ಮಾನ್ಯ ನಂಜುಂಡಸ್ವಾಮಿಯವರು ತಮ್ಮ ಸ್ನೇಹಿತರು ಮಾತನಾಡುತ್ತಿದ್ದಾರೆ. ನಾನು ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗ್‌ನಲ್ಲಿ ಮುಖ್ಯ ಮಂತ್ರಿಯಾಗಿ ಮಾತನಾಡತಕ್ಕ ಕಾಲದಲ್ಲಿ ಆಗ ಏನು ಪೇಟೆಂಟ್ ಲಾಸ್ ಬಗ್ಗೆ ಯಾರೂ ಕೂಡ ಚಕಾರ ಶಬ್ದ ಎತ್ತದೇ ಇದ್ದ ಸಂದರ್ಭದಲ್ಲಿ ನಾನು ಇದನ್ನು ಎತ್ತಿದ್ದೇನೆ. ಗ್ಯಾಟ್, ಡಂಕಲ್ ವಿಚಾರದಲ್ಲಿ ಮಾತನಾಡುತ್ತೇವೆ. ಪೇಟೆಂಟ್ ಲಾ ಬಗ್ಗೆ I opposed that. I was only the Chief Minister who opposed this theory in the National development Council Meeting. ನಾನು ಮುಖ್ಯಮಂತ್ರಿಯಾಗಿ ಆಡಿರತಕ್ಕಂಥ ಮಾತುಗಳು ಮುದ್ರಣಗೊಂಡಿರತಕ್ಕಂಥಾದ್ದು ಇದೆ. ಅದನ್ನು ತಾವು ಯಾರಾದರೂ ಕೂಡ ನೋಡಬಹುದು. ನಾನು ಕಳೆದ ವರ್ಷ ಮಾಡಿರತಕ್ಕಂಥ ಭಾಷಣ ಅದಾಗಿದೆ. ಈ ವಿಚಾರದಲ್ಲಿ ನಾನು ಪ್ರೊ. ನಂಜುಂಡಸ್ವಾಮಿಯವರಿಗೆ ಸಂಪೂರ್ಣ ಬೆಂಬಲ ಕೊಡುತ್ತೇನೆ. ಅವರ ವಿಚಾರ ಧಾಟಿಯನ್ನು ನಾನು ಒಪ್ಪಿಕೊಂಡಿದ್ದೇನೆ. ಏಕೆಂದರೆ, ಸ್ವಾತಂತ್ರ್ಯದ ಹೆಸರಿನಲ್ಲಿ ನಾವು 45 ವರ್ಷಗಳನ್ನು ಕಳೆದರೂ ಕೂಡ ನಾವು ತಲೆ ಬಾಗತಕ್ಕಂಥ ವಿಚಾರ ಇದೆಯಲ್ಲಾ, ಇದು ನಮ್ಮಂಥ ಸಮಾಜಕ್ಕೆ, ದೇಶಕ್ಕೆ ನಿಜವಾಗಲೂ ಗೌರವ ತರತಕ್ಕಂಥ ವಿಷಯವಲ್ಲ. ನಮಗೆ ಅನ್ನವಿಲ್ಲದಿದ್ದರೂ ಚಿಂತೆಯಿಲ್ಲ, ಗೌರವದಿಂದ ಬಾಳತಕ್ಕಂಥ, ತಲೆ ಎತ್ತಿ ತಿರುಗಾಡತಕ್ಕಂಥ ವಿಚಾರವನ್ನು ನಾವು ಇಟ್ಟುಕೊಳ್ಳೋಣ. ಇದರಲ್ಲಿ ಮಾಡಿರುವ ಪದ ಪ್ರಯೋಗ level plain fields ಎಂಬ ಫ್ರೇಸಿಯಾಲಜಿ ಎಲ್ಲಿಂದ ಬಂತು? ಇದು ನನಗೆ ಅರ್ಥವಾಗದಿರತಕ್ಕಂಥ ವಿಚಾರ. ಈ phraseology level plain fields ಎನ್ನತಕ್ಕಂಥಾದ್ದು this is an American terminology ನನಗೆ ಎಲ್ಲಾ ಗೊತ್ತಿದೆ. ಇದರ ಬಗ್ಗೆ ನಿಮಗೆ ಬೇಕಾದರೆ ಪುಸ್ತಕದಲ್ಲಿ ನಾನು ತೋರಿಸಿಕೊಡುತ್ತೇನೆ. ಮತ್ತು ಈ ವಿಷಯದ ಪ್ರಸ್ತಾಪ ಸದನದಲ್ಲಿ ಹಾಗೂ ನಮ್ಮ ರಾಜ್ಯದಲ್ಲಿ ಪ್ರಾರಂಭವಾಗಿದೆ. ಈ ರೀತಿಯಾಗಿರತಕ್ಕಂಥ ವಿಚಾರಧಾರೆಯನ್ನು ಮೊದಲು ನಾವು ದೂರವಿಡಬೇಕು. ಏನೇ ಇದ್ದರೂ ಕೂಡ ನಾವು ತೆಗೆದುಕಳ್ಳೋಣ. ಆದರೆ ಯಾರೋ ಬೇರೆಯವರು ಬಂದು ನಮ್ಮ ಮೇಲೆ ಆಟ ಆಡತಕ್ಕಂಥ ಧೋರಣೆ ಇದೆಯೆಲ್ಲಾ, ಅದನ್ನು ಬದಿಗೊತ್ತಿ ನಮ್ಮ ನೋವು, ನಲಿವಿನ ವಿಚಾರದಲ್ಲಿ ಗಮನವಿಟ್ಟು ಆರ್ಥಿಕ ವಿಚಾರವನ್ನು ವಿಶ್ಲೇಷಣೆ ಮಾಡತಕ್ಕಂಥ ಸಮಯ ಸ್ಪೂರ್ತಿ, ಧೈರ್ಯ, ಚಿಂತನೆ, ಭವಿಷ್ಯದ ಬಗ್ಗೆ ಚಿಂತನೆಯ ವಿಚಾರಧಾರೆ ಇದರಲ್ಲಿ ಸ್ಪಷ್ಟವಾಗಿ ಅಡಗಿದೆ. ಅದರ ಬಗ್ಗೆ ಯಾರಿಗಾದರೂ ಕಾಳಜಿಯಿದ್ದರೆ ಅದನ್ನು ಮಾಡಬೇಕು. ಹಾಗೆ ಮಾಡಿದರೆ ಗೌರವ ಎಲ್ಲರಿಗೂ ಕೂಡ ಸಂದಾಯವಾಗುತ್ತದೆ ಎನ್ನತಕ್ಕಂಥ ವಿಷಯವನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ನಾನು ಕೆಲವು ವಿಚಾರಗಳನ್ನು 'ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಾನು ಮುಖ್ಯಮಂತ್ರಿಯಾಗಿದ್ದಂಥ ಕಾಲದಲ್ಲಿ ಎಂದು ಹೇಳಬೇಕಾಗಿದೆ. ಕ್ಷಮಿಸಬೇಕು. ನಾನು ಈ ಮಾತನ್ನು ಆಡಲೇಬಾಕಾಗಿದೆ. ಏಕೆದರೆ, ನಾನು ಮುಖ್ಯಮಂತ್ರಿಯಾಗಿದ್ದುದು ನಿಜ, ಎರಡು ವರ್ಷ

ಕಳೆದದ್ದೂ ನಿಜ. ಆ ಸಂದರ್ಭದಲ್ಲಿ ಒಂದು ವಾರ್ಷಿಕ ಯೋಜನಾ ಗಾತ್ರವನ್ನು ರೂಪಿಸತಕ್ಕಂಥ ಸಂದರ್ಭದಲ್ಲಿ ಅದು ಪಂಚವಾರ್ಷಿಕ ಯೋಜನೆಗೆ ಕೂಡ ಕಾಂಟ್ರಿಬೂಟ್ ಮಾಡುತ್ತದೆ ಎನ್ನತಕ್ಕಂಥ ದೃಷ್ಟಿಯಿಂದ ನಾನು ಈ ಮಾತನ್ನಾಡುತ್ತಿದ್ದೇನೆ. ನಾನು ಈ ಹಿಂದೆ ಯೋಜನಾ ಸಚಿವ ಕೂಡ ಆಗಿದ್ದೆ, ನನ್ನ ಜೊತೆಯಲ್ಲಿ ಹಿರಿಯ ಸದಸ್ಯರಾಗಿರತಕ್ಕಂಥ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರೂ ಸಹ ಸಚಿವರಾಗಿದ್ದರು. ನಾವೆಲ್ಲಾ ಚರ್ಚೆ ಮಾಡಿದಂಥ ಸಂದರ್ಭದಲ್ಲಿ ಪ್ರಾಮುಖ್ಯವಾಗಿ ಕೆಲವು ವಿಚಾರಗಳ ಬಗ್ಗೆ ಗಮನಕೊಟ್ಟಿದ್ದುದು ನಿಜ. ಮೆದಲು ಆರ್ಥಿಕ ಬೆಳವಣಿಗೆ ಅಥವಾ ಎಕನಾಮಿಕ್ ಗ್ರೋಥ್ ಅಥವಾ ರೇಟ್ ನಿಮಗೇನಾದರೂ ಜಾಸ್ತಿ ಸಿಗಬೇಕೆಂದಿದ್ದರೆ ಯೋಜನೆ ರೂಪಿಸುವುದರಿಂದ ಹಿಡಿದು, ಕಾರ್ಯಕ್ರಮ ಹಾಕುವುದರಿಂದ ಹಿಡಿದು ಜಾರಿಗೆ ಕೊಟ್ಟು ಅದರ ಫಲವನ್ನು ಪಡೆಯುವವರೆಗೆ ಗಮನಹರಿಸಿದರೆ ಮಾತ್ರ you can account something for the economic growth of astate of the country. This is all the main basic principle. ಅದನ್ನು ಬಿಟ್ಟರೆ ಯಾರೂ ಏನೂ ಮಾಡುವುದಕ್ಕೆ ಸಾಧ್ಯವಾಗದೆ ಇರತಕ್ಕ ವಿಚಾರ. ಯಾವ ಕ್ಷೇತ್ರದಲ್ಲಿ ರೆವಿನ್ಯೂ ಅಥವಾ ನಮ್ಮ ಸರ್ಕಾರದ ಖಜಾನೆಗೆ ಆದಾಯವನ್ನು ನಾವು ನಿರೀಕ್ಷಿಸುತ್ತೇವೆ, ನೀವು ಅಲ್ಲಿ ಯಾವಾಗಲೂ ಕಾನ್‌ಸೆಂಟ್ರೇಟ್ ಮಾಡಬೇಕು, ಅದು ಆಡಳಿತದ ಒಂದು ವಿಚಾರಧಾರೆ, ಅದು ಸರ್ಕಾರದ ಕಾರ್ಯ-ನಿರ್ವಹಣೆಯೂ ಹೌದು. ಸೋರಿಕೆಯಾಗಬಾರದು ಎನ್ನತಕ್ಕಂಥ ವಿಚಾರದ ಬಗ್ಗೆ ಅನ್ಯ ಮಾತಿಲ್ಲ. ಆದರೆ, ನೀವು ಎಷ್ಟೇ ಮಾಡಿದರೂ ಕೂಡ ಕೆಲವೊಮ್ಮೆ ಸೋರಿಕೆ ಇದ್ದೇ ಇರುತ್ತದೆನ್ನುವ ವಿಚಾರವನ್ನು ದಯವಿಟ್ಟು ಮರೆಯಬೇಡಿ. ಯಾವುದೇ ಪಕ್ಷದ ಸರ್ಕಾರವಿದ್ದರೂ ಕೂಡ ಅದು ಇರುತ್ತದೆ. ಸೋರಿಕೆಯಿರುವುದು ಸರಿ ಎಂದು ನನ್ನ ವಾದವಲ್ಲ. ಆಧರೆ, ಸೋರಿಕೆಯಾಗದಂತೆ ಮಾಡಬೇಕು. ತಮಗೆ ಗೊತ್ತಿರುವಂತೆ, In a laws of physics ನಲ್ಲಿ supposing a man takes up this much of stone and throws it away to reah the heigh of 100 feet. the amount of energy that is required to throw that particular size of the stone to reach the height of 100 feet. ಎಷ್ಟು ಬೇಕೋ ಅಷ್ಟು ಎನರ್ಜಿಗಿಂತ ಜಾಸ್ತಿ ಖರ್ಚು ಮಾಡುತ್ತೇವೆನ್ನುವುದನ್ನು ವಿಜ್ಞಾನಿಗಳು ಪತ್ತೆ ಹಚ್ಚಿದ್ದಾರೆ. ಅಂದರೆ, soppose this much of energy ಬೇಕು ಎಂದು ಇಟ್ಟುಕೊಳ್ಳೋಣ. ನನಗೆ ಗೊತ್ತಾಗುವುದಿಲ್ಲ. ನಾನು ವಿಜ್ಞಾನದ ವಿದ್ಯಾರ್ಥಿಯಲ್ಲ. ತಮಲ್ಲಿ ವಿಜ್ಞಾನ ವಿದ್ಯಾರ್ಥಿಗಳು ಯಾರು ಇದ್ದೀರೋ ನನಗೆ ಗೊತ್ತಿಲ್ಲ. ಎಷ್ಟು ಎನರ್ಜಿ ಖರ್ಚು ಮಾಡಬೇಕೋ ಅದಕ್ಕಿಂತ ಜಾಸ್ತಿ ಎನರ್ಜಿ ಖರ್ಚಾದರೆ, ಆ ರೀತಿ ಹೆಚ್ಚು ಖರ್ಚಾಗುವುದನ್ನು ನಿಲ್ಲಿಸಬೇಕೆನ್ನುವ ವಿಚಾರದ ಬಗ್ಗೆ ಇವೊತ್ತಿನವರೆವಿಗೂ ಕೂಡ ಬೇಕಾದಷ್ಟು ವಿಜ್ಞಾನಿಗಳು ಪತ್ತೆ ಹಚ್ಚುತ್ತಲೇ ಇದ್ದಾರೆ, ಕಡಿಮೆ ಮಾಡುತ್ತಿದ್ದಾರೆ. ಆಧರೂ ಕೂಡ ಆಗಿಲ್ಲ. ಅದೇ ರೀತಿಯಾಗಿ even develoed countryries like England, Italy, Japan, America and European countries. ನೀವು ಎಲ್ಲಿ ತೆಗೆದುಕೊಂಡರೂ ಕೂಡ ಈ ಸೋರಿಕೆ ಎನ್ನತಕ್ಕಂಥಾದ್ದು ಇದೆಯೆಲ್ಲ ಇದರ ಬಗ್ಗೆ ಲಂಡನ್ನಿನ ಹೌಸ್ ಆಫ್ ಕಾಮನ್ಸ್‌ನಲ್ಲೂ ಕೂಡ ಕೇಳಿ ಬಂದಿದೆ. ಸೋರಿಕೆ ತಡೆಗಟ್ಟುತ್ತೇವೆಂದು ಮಾತನಾಡಿ ನಾವು ಗಂಭೀರವಾಗಿರಬೇಕು, ಅದನ್ನು ನಾನು ಒಪ್ಪುತ್ತೇನೆ, ಇಲ್ಲವೆಂದು ನಾನು ಹೇಳುವುದಿಲ್ಲ. ಆಧರೆ, ಸೋರಿಕೆ ತಡೆಗಟ್ಟುತ್ತೇವೆಂದು ಹೇಳಿ ನೀವು ಸರ್ಕಾರದ ಖಜಾನೆಗೆ ಬರತ್ಕಂಥ ಆದಾಯವನ್ನು ತಡೆ ಹಿಡಿಯತಕ್ಕಂಥ, ಸೋರಿಕೆ ತಡೆ ಹಿಡಿಯತಕ್ಕಂಥ ವಿಚಾರದಲ್ಲಿ ನೀವೇನಾದರೂ ಕೈ ಹಾಕಿದರೆ ಆಗ ನಿಮ್ಮ treasury will have to start suffering a lot. ಬಹಳ ಎಚ್ಚರಿಕೆ ವಹಿಸಬೇಕಾಗುತ್ತದೆ. ಉದಾಹರಣೆಗೆ ನಮಗೆ ಯಾವ್ಯಾವುದರಿಂದ ಹೆಚ್ಚಾಗಿ ಆದಾಯ ಬರುತ್ತದೆಂದರೆ 4-5 ವಲಯಗಳನ್ನು ನಾವು

ಗಮನದಲ್ಲಿಟ್ಟುಕೊಳ್ಳಬೇಕು. ಮೊದಲನೆಯದಾಗಿ ಕಮರ್ಷಿಯಲ್ ಟ್ಯಾಕ್ಸ್‌ಸ್, ಇದರಿಂದ ನಮಗೆ ಹೆಚ್ಚಾಗಿ ಆದಾಯ ಬರುತ್ತದೆ. ಅದು ತಮಗೂ ಗೊತ್ತಿರಬಹುದು. ಇದು ನಮ್ಮ ಖಜಾನೆಗೆ ಹೆಚ್ಚು ಹಣವನ್ನು ತಂದುಕೊಡತಕ್ಕದ್ದು. Commercial Tax biggest one of the 4-5 lot. ಕಮರ್ಶಿಯಲ್ ಟ್ಯಾಕ್ಸ್‌ಸ್‌ನಲ್ಲಿ ಮನೋರಂಜನಾ ತೆರಿಗೆ ಇರಬಹುದು, ಸೇಲ್ಸ್ ಟ್ಯಾಕ್ಸ್ ಇರಬಹುದು. ಇವುಗಳು ಅದರಡಿಯಲ್ಲಿ ಬರುತ್ತವೆ. ನಾನು ಅಧಿಕಾರವನ್ನು ತೆಗೆದುಕೊಂಡಾಗ ಖಜಾನೆಯಲ್ಲಿ ಎಷ್ಟು ಹಣವಿತ್ತು, ನಾನು ಬರುವುದಕ್ಕಿಂತ ಮೊದಲು ಎಷ್ಟು ಇತ್ತು ಈಗ ಎಷ್ಟಿದೆ ಅದರ ಅಂಕಿಅಂಶಗಳನ್ನು ನಾನು ಕೊಡುತ್ತೇನೆ. ಅದಾದಮೇಲೆ ಎರಡನೆಯದಾಗಿ ಎಕ್ಸೈಜ್. ಮೂರನೆಯದು ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್. ನಾಲ್ಕನೆಯದು ಸ್ಟಾಂಪ್ಸ್ ಅಂಡ್ ರಿಜಿಸ್ಟ್ರೇಷನ್, ಮತ್ತೊಂದು ಯಾವುದೆಂದರೆ ಸ್ಮಾಲ್ ಸೇವಿಂಗ್ಸ್‌ನಲ್ಲಿ ನಾವು ಕಲೆಕ್ಷನ್ ಜಾಸ್ತಿ ಮಾಡುತ್ತೇವೆ. ಇದರ ಪಾಲನ್ನು ಭಾರತ ಸರ್ಕಾರದವರು ಕೊಡುತ್ತಾರೆ. There are 4-5 major areas where we can expect more revenue the State Treasury. ಇದು ನಾವು ಯಾವಾಗಲೂ ತಿಳಿದುಕೊಂಡಿರತಕ್ಕ ವಿಚಾರ. ಈಗ ನಾವು ಒಂದು ವರ್ಷಕ್ಕೆ ಹಣವನ್ನು ನಿಗದಿ ಮಾಡುತ್ತೇವೆ. ಇವತ್ತು 1993-94ರ ಆಯವ್ಯಯ ಪತ್ರ ನಮ್ಮ ಎದುರಿಗಿದೆ. ನಾವು ಹಿಂದಿನ ಯಾವುದೇ ವರ್ಷವನ್ನು ತೆಗೆದುಕೊಂಡರೂ ಕೂಡ ನಮ್ಮಲ್ಲಿ ವ್ಯವಸ್ಥೆ ಏನು ಇದೆ ಎಂದರೆ, ಹಣವನ್ನು ವಸೂಲಿ ಮಾಡಬೇಕು ಮತ್ತು ಅದೇ ಹಣವನ್ನು ಖರ್ಚು ಮಾಡಬೇಕು that is all the system with which we are trying to move forward. ಏಕೆಂದರೆ ಮೊನ್ನೆ ಒಂದು ದಿನ ನಾನು ಇಲ್ಲಿ ಬಂದು ಕುಳಿತಿದ್ದಾಗ ಮಾನ್ಯ ಮುಖ್ಯಮಂತ್ರಿಗಳು, ಅವರೇ ಈಗ ಹಣಕಾಸಿನ ಮಂತ್ರಿಗಳಾಗಿದ್ದಾರೆ, ಅವರು ಯಡಿಯೂರಪ್ಪನವರಿಗೋ ಅಥವಾ ಬೇರೆ ಯಾರಿಗೋ ಉತ್ತರವನ್ನು ಕೊಡುತ್ತಾ ಹೇಳಿದರು. ನಾನು ಎಲ್ಲವನ್ನು ಕೇಳಿಸಿಕೊಂಡು ಯಾವುದರ ಬಗ್ಗೆಯೂ ಮಾತನಾಡದೇ ಎಲ್ಲವನ್ನು ಬರೀ ನೆನಪಿನಲ್ಲಿ ಇಟ್ಟುಕೊಂಡು ಕುಳಿತಿದ್ದೆ. ಅದಕ್ಕೆ ನಾನು ಇವತ್ತು ಉತ್ತರವನ್ನು ಕೊಡುವುದು ಸೂಕ್ತವಾಗಿದೆ. ಅವತ್ತು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ನಾನು ಮುಖ್ಯಮಂತ್ರಿಯಾಗಿ ಅಧಿಕಾರವನ್ನು ವಹಿಸಿಕೆಂಡಾಗ ನಮ್ಮ ಖಜಾನೆಯಲ್ಲಿ 5 ಕೋಟಿ ಹಣ ಮಾತ್ರವಿತ್ತು, ಆದರೆ ಯಾರು ನೂರು ಕೋಟಿ ರೂಪಾಯಿಗಳ ಬಿಲ್ಲನ್ನು ಪಾವತಿ ಮಾಡಬೇಕಾಗಿರತಕ್ಕದ್ದು ಇತ್ತು ಎನ್ನತಕ್ಕ ಮಾತನ್ನು ಹೇಳಿದರು. ನಾನು ಒಂದೇ ಒಂದು ಮಾತನ್ನು ಹೇಳುತ್ತೇನೆ. ಯಾರಾದರೂ ಒಬ್ಬರು ಮುಖ್ಯಮಂತ್ರಿಗಳು ಹಣವನ್ನು ಖಜಾನೆಯಲ್ಲಿ ತುಂಬಿ ತುಂಬಿ ಮುಂದಿನ ಮುಖ್ಯಮಂತ್ರಿಗಳು ಖರ್ಚು ಮಾಡುವುದಕ್ಕೆ ಬಿಟ್ಟು ಹೋಗುವುದಿಲ್ಲ. ಏಕೆಂದರೆ ವೀರಪ್ಪ ಮೊಯಿಲಿಯವರು ಒಬ್ಬರೇ ಮುಖ್ಯಮಂತ್ರಿಯಾಗಿರುವುದಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆ ಇರುವವರೆಗೂ ಮುಂದೆ ಬೇರೆಯವರು ಬರುತ್ತಾರೆ. ಅದು ಯಾವುದೇ ಇದ್ದರೂ ಇದು ನೀತಿ ಪ್ರಶ್ನೆ. ನಾನು ಅವರ ಬಗ್ಗೆ ವೈಯಕ್ತಿಕವಾಗಿ ಏನೂ ಹೇಳುತ್ತಿಲ್ಲ. ಆದರೆ ಮುಂದೆ ಯಾರೇ ಮುಖ್ಯಮಂತ್ರಿಗಳಾಗಿ ಬಂದರೂ ಕೂಡ ಒಂದು ವಿಷಯವನ್ನು ತಿಳಿದುಕೊಳ್ಳಬೇಕು. ಅವರುಗಳು ತಮ್ಮ ಅಧಿಕಾರವನ್ನು ಬಿಟ್ಟುಕೊಡುವಾಗ ಖಜಾನೆಯಲ್ಲಿ ಹಣವನ್ನು ತುಂಬಿ, ತುಂಬಿ ನಿಮಗೆ ಮುಖ್ಯಮಂತ್ರಿಗಳಾಗಿ ಖರ್ಚ ಮಾಡಿ ಎಂದು ಯಾರೂ ಬಿಟ್ಟು ಕೊಡುವುದಿಲ್ಲ, ಬೇಕಾದರೆ ಇದನ್ನು ಬರೆದು ಇಟ್ಟುಕೊಳ್ಳಿ, it is a writing on the wall.. ಏಕೆಂದರೆ, ನಮ್ಮ ಪದ್ಧತಿ ಏನು ಇದೆ ಎಂದರೆ, ಹಣವನ್ನು ವಸೂಲಿ ಮಾಡಬೇಕು ಮತ್ತೆ ಅದೇ ಹಣವನ್ನು ಖರ್ಚು ಮಾಡಬೇಕು. that is all the system .. ಹಾಗೇನಾದರೂ ಇದ್ದರೆ ಸ್ವಾತಂತ್ರ್ಯ ಬಂದಮೇಲೆ ಮುಖ್ಯಮಂತ್ರಿಗಳಾಗಿದ್ದ ಕೆ.ಸಿ. ರೆಡ್ಡಿಯವರು ಮುಂದೆ ಮುಖ್ಯಮಂತ್ರಿಗಳಾದ ಹನುಮಂತಯ್ಯನವರಿಗೆ

ಏನಾದರೂ ಖಜಾನೆಯಲ್ಲಿ ಹಣವನ್ನು ತುಂಬಿ, ತುಂಬಿ ಕೊಟ್ಟರೆ? ಹನುಮಂತಯ್ಯನವರು ಮುಂದೆ ಮುಖ್ಯಮಂತ್ರಿಗಳಾದ ನಿಜಲಿಂಗಪ್ಪನವರಿಗೆ ಏನು ಭಾರಿ ಹಣವನ್ನು ತುಂಬಿ ಕೊಟ್ಟರೆ? ನಂತರ ಜತ್ತಿಯವರಿಗೆ ನಿಜಲಿಂಗಪ್ಪನವರು ಅಥವಾ ಕಂಠಿಯವರೇನಾದರೂ ಮುಖ್ಯಮಂತ್ರಿಗಳಿಗೆ ಹಣವನ್ನು ತುಂಬಿ ಕೊಟ್ಟರೆ? ನಾನು 1967ರಲ್ಲಿ ಈ ಸದನದಲ್ಲಿ ಕಾಲನ್ನು ಇಟ್ಟಿದ್ದೇನೆ. 1967 ರಿಂದ ನಾನು ಇದ್ದೇನೆ. ಇದುವರೆಗೆ ಯಾವ ಮುಖ್ಯಮಂತ್ರಿಗಳು ನಿಜವಾಗಿಯೂ ನಮ್ಮ ಹಿಂದೆ ಇದ್ದ ಮುಖ್ಯಮಂತ್ರಿಗಳು ಖಜಾನೆಯ ತುಂಬಾ ಹಣವನ್ನು ಇಟ್ಟು ಹೋಗಿದ್ದರೆಂದು ಹೇಳಿದ್ದಾರೆ? I think I can freely start spending all the money.. ಎಂದು ಎಲ್ಲಿದೆ? ಏಕೆಂದರೆ ಇಲ್ಲಿ ಹೇಳುವುದನ್ನು ನೋಡಿದರೆ ನಾವೇನು ಖಜಾನೆಯ ಕಸವನ್ನು ಗುಡಿಸುವುದಕ್ಕಾಗಿಯೇ ಮುಖ್ಯಮಂತ್ರಿಯಾಗಿದ್ದೇವೇನೋ ಎನ್ನತಕ್ಕ ಅರ್ಥ ಬರುವ ರೀತಿಯಲ್ಲಿ ಮಾತನಾಡತಕ್ಕದ್ದು ಯಾರಿಗೂ ಶ್ರೇಯಸ್ಸನ್ನು ತರತಕ್ಕ ವಿಚಾರವಾಗುವುದಿಲ್ಲ. ಅದು ಯಾರೇ ಇರಬಹುದು, ಸ್ವಲ್ಪ ಜವಾಬ್ದಾರಿಯನ್ನು ಇಟ್ಟು ಮಾತನಾಡುವುದು ಬಹಳ ಒಳ್ಳೆಯದು. ನಾನು ಇನ್ನೊಂದು ಮಾತನ್ನು ತಮಗೆ ಸ್ಪಷ್ಟಪಡಿಸುತ್ತೇನೆ. ತಮಗೆಲ್ಲ ಗೊತ್ತಿರುವ ಹಾಗೆ ಶ್ರೀಮಾನ್ ದೇವರಾಜ ಅರಸುರವರು 1972ರಲ್ಲಿ ಅಧಿಕಾರವನ್ನು ವಹಿಸಿಕೊಂಡರು. ಅವರಿಗೆ ಅವರ ಹಿಂದಿನವರು ಎಷ್ಟು ಹಣವನ್ನು ಕೊಟ್ಟು ಹೋಗಿದ್ದರು? ಶ್ರೀಮಾನ್ ವೀರೇಂದ್ರ ಪಾಟೀಲರು 1971ರಲ್ಲಿ ಮುಖ್ಯಮಂತ್ರಿಯಾಗಿದ್ದರು. ಅವರು ಎಷ್ಟು ಹಣವನ್ನು ಬಿಟ್ಟು ಹೋಗಿದ್ದರು? ದೇವರಾಜ ಅರಸುರವರು ಗುಂಡೂರಾವ್‌ರವರಿಗೆ ಎಷ್ಟು ಹಣ ಬಿಟ್ಟು ಹೋಗಿದ್ದರು? ಗುಂಡೂರಾವ್‌ರವರು ರಾಮಕೃಷ್ಣಹೆಗಡೆಯವರಿಗೆ ಎಷ್ಟು ಹಣವನ್ನು ಬಿಟ್ಟು ಹೋಗಿದ್ದರು? ರಾಮಕೃಷ್ಣ ಹೆಗಡೆಯವರು ಬೊಮ್ಮಾಯಿಯವರಿಗೆ ಎಷ್ಟು ಹಣ ಬಿಟ್ಟು ಹೋಗಿದ್ದರು? ಬೊಮ್ಮಾಯಿಯವರು ಮತ್ತೆ ಮುಖ್ಯಮಂತ್ರಿಗಳಾದ ವೀರೇಂದ್ರ ಪಾಟೀಲ್‌ರವರಿಗೆ ಎಷ್ಟು ಹಣವನ್ನು ಬಿಟ್ಟು ಹೋದರು? ಅದರ ಬಗ್ಗೆ ಲೆಕ್ಕ ತೆಗೆಯಿರಿ? ಹಾಗೆಯೇ ವೀರೇಂದ್ರ ಪಾಟೀಲರು ಖಜಾನೆಯಲ್ಲಿ ನನಗೆ ಎಷ್ಟು ಹಣವನ್ನು ಬಿಟ್ಟು ಹೋದರು? ವೀರೇಂದ್ರ ಪಾಟೀಲರ ಕಾಲದಲ್ಲಿ ಹಣವಿರಲಿಲ್ಲ, ಎಲ್ಲವನ್ನೂ ಖಾಲಿ ಮಾಡಿದ್ದರು ಎಂದು ಬರೇ ಇದನ್ನೇ ಹೇಳಿಕೊಂಡು ಕುಳಿತಿದ್ದರೆ ಈ ರಾಜ್ಯದಲ್ಲಿ ನಾನು ಮುಖ್ಯಮಂತ್ರಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತಿತ್ತೆ. ಇದು ನನಗೆ ಅರ್ಥವಾಗದ ವಿಚಾರ. ಆಮೇಲೆ ನಾನು ಮೊಯ್ಲಿಯವರಿಗೆ ಬಿಟ್ಟುಕೊಟ್ಟದ್ದು ನನಗೆ ಹಿಂದಿನವರು ಹೇಗೆ ಬಿಟ್ಟು ಕೊಟ್ಟಿದ್ದರೋ ಅದೇ ರೀತಿಯಲ್ಲಿ ಬಿಟ್ಟುಕೊಟ್ಟಿದ್ದೇನೆ. ಮುಂದೆ ಅವರೂ ಕೂಡ ಹೇಗೆ ಕೊಡುತ್ತಾರೆಂದು ಹೇಳುವುದಕ್ಕೆ ನನಗೆ ಆಸೆಯಿಲ್ಲ. ಹಾಗಾದರೆ ಮುಂದಿನ ಮುಖ್ಯಮಂತ್ರಿಗಳು ಯಾರೇ ಬರಲಿ ಅವರಿಗೆ ಬಿಟ್ಟುಕೊಡುವುದಕ್ಕೆ ಇವರು ಖಜಾನೆಯನ್ನು ತುಂಬುವ ಕೆಲಸವನ್ನು ಮಾಡಿದ್ದಾರೆಯೇ? ಈ ದೇಶದಲ್ಲಿ ನಾವು ವರಮಾನವನ್ನು ತೆಗೆದುಕೊಂಡು ಖರ್ಚು ಮಾಡಬೇಕು. ನೀವು ನೀರಾವರಿಗಾಗಿ, ವಿದ್ಯುತ್‌ಗಾಗಿ, ಬಡವರಿಗಾಗಿ ಕೆಲಸಗಳನ್ನು ಮಾಡಲು ವಿಚಾರ ಮಾಡಿ ಖರ್ಚು ಮಾಡಲು ಹಣವನ್ನು ವಸೂಲಿ ಮಾಡುತ್ತೀರೋ ಅಥವಾ ಖಜಾನೆಯನ್ನು ತುಂಬಿ ಮುಂದೆ ಬರತಕ್ಕ ಮುಖ್ಯಮಂತ್ರಿಗೆ ಬಿಟ್ಟು ಕೊಡುವುಗಕ್ಕೋಸ್ಕರ ಕೆಲಸ ಮಾಡುತ್ತೀರೋ? ನಾನು ಹೇಳುತ್ತೇನೆ ಖಜಾನೆಯಲ್ಲಿ ಹಣವಿಲ್ಲದಿದ್ದರೂ ಚಿಂತೆ ಇಲ್ಲ, ಹಣವನ್ನು ವಸೂಲಿ ಮಾಡಿ ಖರ್ಚು ಮಾಡಿ. ಆದರೆ ಯಾವುದಕ್ಕೆ, ಏತಕ್ಕೆ, ಹೇಗೆ ಖರ್ಚು ಮಾಡಬೇಕು ಎನ್ನುವುದನ್ನು ಗಮನಿಸಬೇಕು. ಆದುದರಿಂದ ನಿಮ್ಮ accoutability for economic growth ಏನು ಇದೆ ಅದಕ್ಕೆ what exactly is your contribution ಎಂಬುದನ್ನು ಯೋಚನೆ ಮಾಡಿ. This is all the yardstick. ಆ ಒಂದು ಮಹತ್ತರವಾದ

ವಿಚಾರವನ್ನು ನಾವು ಗಮನಿಸಬೇಕು. ಅವತ್ತು ನಾನು ನೋಡುತ್ತಿದ್ದೇನೆ. ಅವರು ಪ್ರಶ್ನೆ ಕೇಳುವುದು ಇವರು ಉತ್ತರವನ್ನು ಕೊಡುವುದು, ನನಗೆ ಇದು ಅರ್ಥವಾಗದೇ ಇರತಕ್ಕ ವಿಚಾರ. ಬಂಗಾರಪ್ಪನವರು ಅಧಿಕಾರವನ್ನು ಬಿಟ್ಟು ಹೋಗುವಾಗ 5 ಕೋಟಿ ಇತ್ತು ಎಂದು ಹೇಳಿದರು. ಬಂಗಾರಪ್ಪನವರು ಅಧಿಕಾರವನ್ನು ಬಿಟ್ಟು ಕೊಡುವಾಗ 5000 ಕೋಟಿ ಅಥವಾ 500 ಕೋಟಿ ಹಣವನ್ನು ಇಟ್ಟು ಹೋಗಬೇಕಾಗಿತ್ತೆಂದು ಕಾಣುತ್ತದೆ ಎನ್ನತಕ್ಕ ವಿಚಾರ ಮತ್ತೆ ಯಾರ ಮನಸ್ಸಿಗಾದರೂ ಬಂದೀತೇನೋ ಎನ್ನತಕ್ಕ ನೋವು ನನಗೆ ಬಂತು. ನನಗೆ ನೋವು ಬಂದರೆ ನಾಳೆ ಮುಖ್ಯಮಂತ್ರಿಗಳಾಗಿ ಬರುವವರಿಗೂ ಈ ನೋವು ಬರಬಾರದು. ಇದು ಪ್ರಜಾಪ್ರಭುತ್ವ, ಯಾರ ಮನಸ್ಸಿನಲ್ಲಿಯೂ ನೋವು ಬರುವುದು ಬೇಡ, ಯಾರಿಗೂ ಕೂಡ ಆ ವಿಚಾರ ಧಾರೆ ಇರುವುದು ಬೇಡವೆನ್ನತಕ್ಕ ದೃಷ್ಟಿಯಿಂದ ನಾನು ಮಾತನಾಡುತ್ತಿದ್ದೇನೆ. ನಾನು ಆಗಲೆ ಹೇಳಿದ ಹಾಗೆ ನಮಗೆ ಯಾವಾಗಲೂ ಹಣ ಬರತಕ್ಕ ಆರ್ಥಿಕ ವಲಯಗಳೆದಂರೆ ನನ್ನ ದೃಷ್ಟಿಯಲ್ಲಿ 4 ಸೆಕ್ಟಾರ್ರಗಳಿವೆ. ಕಮರ್ಶಿಯಲ್ ಟ್ಯಾಕ್ಸ್ ಇದೆ. ಇವತ್ತು ಎಷ್ಟು ಹಣ ಬರುತ್ತದೆ ಎನ್ನುವುದಕ್ಕಿಂತ ಮೊದಲು ಯೋಜನಾ ಗಾತ್ರ ಏನು ಇದೆ ಅದರ ಬಗ್ಗೆ ಬಹಳ ಮುಖ್ಯವಾಗಿ ವಿಚಾರ ಮಾಡತಕ್ಕದ್ದು ಇದೆ. ನಾನು ಮುಖ್ಯಮಂತ್ರಿಯಾಗಿ ಅಧಿಕಾರ ಬಿಡುವುದಕ್ಕಿಂತ ಮೊದಲು ಆರ್ಥಿಕ ವಿಚಾರ ಹಾಳಾಗಿದೆ, ಆಡಳಿತ ವ್ಯವಸ್ಥೆ ಹಾಳಾಗಿದೆ ಎನ್ನತಕ್ಕ ಮಾತನ್ನು ಬಹಳವಾಗಿ ಆಡಿದರು ಅಥವಾ ಪತ್ರಿಕೆಗಳಲ್ಲಿ ಬರೆಸಿದರು. ಅದಕ್ಕೆ ಉತ್ತರದ ರೂಪದಲ್ಲಿ ನಾನು ಇಂಡಿಯಾ ಗೇಜೆಟ್‌ನಲ್ಲಿ ಒಂದು ಪ್ರಕಟಣೆಯನ್ನು ಕೊಟ್ಟೆ. ಏಕೆಂದರೆ ಎಲ್ಲಾ ಪತ್ರಿಕೆಗಳಲ್ಲಿ ನನ್ನ ಮೇಲೆ ಬರುತ್ತಿತ್ತು, ರಾಜ್ಯದಲ್ಲಿ ಬರುತ್ತಿತು. ಆದ್ದರಿಂದ ಇದನ್ನು ಇಡೀ ದೇಶದ ಜನರು ತಿಳಿದುಕೊಳ್ಳಲಿ ಎನ್ನತಕ್ಕ ದೃಷ್ಟಿಯಿಂದ ಒಂದು facts and notification ಹಾಕಿ ನಾನು ಪ್ರಚಾರ ಕೊಟ್ಟಿದ್ದೇನೆ. ಸಣ್ಣಪುಟ್ಟ ವಿಚಾರವನ್ನು ಬಿಟ್ಟರೆ ಭಾರಿ ಪುಟಗಳ ಪ್ರಚಾರವನ್ನೇನು ನಾನು ಕೊಡುವುದಕ್ಕೆ ಹೋಗಲಿಲ್ಲ, ಅಷ್ಟು ಹಣವನ್ನು ಖರ್ಚು ಮಾಡುವುದಕ್ಕೆ ಹೋಗಲಿಲ್ಲ. ಅನಿವಾರ್ಯವೆಂದು ಕಂಡಾಗ ಮಾತ್ರ ಮಾಡಿರಬಹುದು. ಇದರ ಬಗ್ಗೆ ನಾನು ಯಾವಾಗಲೂ ಕಡಿವಾಣವನ್ನು ಹಾಕಿಕೊಂಡೆ ಇಟ್ಟುಕೊಂಡಿದ್ದೆ. ಈಗ ನಾವು ವಿಚಾರ ಮಾಡೋಣ. ಈಗ Annual plan size ಏನಿದೆ ಅದಕ್ಕಿಂತ ಮೊದಲು ನಾನು ಪಂಚವಾರ್ಷಿಕ ಯೋಜೆಯ ಗಾತ್ರದ ಬಗ್ಗೆ ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಾನು ಹಳೆಯದಕ್ಕೆ ಹೋಗುವುದಿಲ್ಲ. 1980 ರಿಂದ ತೆಗೆದುಕೊಳ್ಳುತ್ತೇನೆ. ದೇವರಾಜ ಅರಸುರವರು ಅಧಿಕಾರವನ್ನು ಗುಂಡೂರಾವ್‌ರವರಿಗೆ ಬಿಟ್ಟುಕೊಟ್ಟ ಕಾಲದಿಂದ ತೆಗೆದುಕೊಳ್ಳುತ್ತೇನೆ. ತಮಗೆ ಗೊತ್ತಿರುವ ಹಾಗೆ, 1980-85 ರವರೆಗೆ ಕರ್ನಾಟಕದ ಯೋಜನಾ ಗಾತ್ರ allocation by Planning Commission 2265 crores. ಇದು 6ನೇ ಯೋಜನೆ. 1985-90, ಇದು 7ನೇ ಯೋಜನೆ, ಇದರ ಯೋಜನಾ ಗಾತ್ರ 3575 ಕೋಟಿ. ನಾನು ಅಧಿಕಾರವನ್ನು ತೆಗೆದುಕೊಳ್ಳುವುದಕ್ಕಿಂತ ಮೊದಲು ಇದು ಇತ್ತು. ನಾನು ಅಧಿಕಾರವನ್ನು 1990-91ರ ಮಧ್ಯದಲ್ಲಿ ತೆಗೆದುಕೊಂಡೆ. Middle of the financial year of 1991. ಈ ವರ್ಷದ Fifth five year plan ಗೆ ಎಷ್ಟು ಫಿಕ್ಸಾಗಿದೆ? ಇವತ್ತು ಒಂದು ಪ್ಲಾನ್ ಸೈಜ್ ಗೊತ್ತುಮಾಡಬೇಕಾದರೆ. Whether it is annual plan size or five year plan size ಯಾವುದನ್ನು ನೋಡುತ್ತಾರೆಂದರೆ ನಿಮ್ಮ ARM capacity ನೋಡುತ್ತಾರೆ. Additional resource mobilisation capacity Commercial tax, Stamps and Registration, Excise, Motor Vehicle taxes. ನಾವು ಲ್ಯಾಂಡ್ ರೆವಿನ್ಯೂ ಬಗ್ಗೆ ಹೆಚ್ಚು ಮಾಡುವುದಿಲ್ಲ. ಆದರೆ ಹಿಂದಿನ ಕಾಲದಲ್ಲಿ ಅಂದರೆ ಮಹಾರಾಜರು ಇದ್ದ ಕಾಲದಲ್ಲಿ, ಸ್ವಾತಂತ್ರ್ಯದ ಪೂರ್ವದಲ್ಲಿ ಬರೀ

ಲ್ಯಾಂಡ್ ರೆವಿನ್ಯೂನಿಂದಲೇ ಒಂದು ಸರ್ಕಾರವನ್ನು ನಡೆಸುತ್ತಿದ್ದರು. ಆದರೆ ಇತ್ತೀಚೆಗೆ ನಮಗೆ ಬಂದಿರತಕ್ಕದ್ದು 4 ರಿಂದ 5 ಕೋಟಿ ಅಥವಾ 6 ಕೋಟಿ. ಅದು ಕೂಡ ಬರಗಾಲ ಬಿದ್ದಾಗ ನಾವೆಲ್ಲಾ ಅದನ್ನು ಬಿಟ್ಟು ಹಾಕಿಬಿಡುತ್ತೇವೆ. Hardly we are collecting Rs. 2-3 crores at best out of land Revenue from the land holders. ಇದನ್ನು ಲ್ಯಾಂಡ್ ಹೋಲ್ಡರ್ಸ್‌ನಿಂದ ನಾವು ತೆಗೆದುಕೊಳ್ಳತಕ್ಕಂಥದ್ದು. ಅದು ಬಿಟ್ಟರೆ ನಮಗೆ ಹೆಚ್ಚಾಗಿಲ್ಲ. The main soure of revenue to our Treasury is Commercial taxes. ನನ್ನ ಕಾಲದಲ್ಲಿ ಅಂದರೆ ನಾನು ಮುಖ್ಯಮಂತ್ರಿಯಾಗಿದ್ದಾಗ ಪ್ಲಾನಿಂಗ್ ಕಮಿಷನ್‌ರವರು ಎಷ್ಟು ಫಿಕ್ಸ್ ಮಾಡಿದ್ದಾರೆ ಎನ್ನುವುದನ್ನು ಹೇಳುತ್ತೇನೆ. ನನಗೆ ಯಾರೂ ಹೊಗಳುವುದು ಬೇಕಾಗಿಲ್ಲ. ಕರ್ನಾಟಕ ರಾಜ್ಯದ ಜನತೆ ಇದ್ದಾರೆ. ತಮ್ಮ ಗಮನದಲ್ಲಿಯೂ ಕೂಡ ಇರಬಹುದೆಂದು ಗೊತ್ತಿದೆ. ಎಷ್ಟು ಫಿಕ್ಸ್ ಮಾಡಿದ್ದಾರೆಂದರೆ 12,300 ಕೋಟಿ ರೂಪಾಯಿಗಳನ್ನು ಫಿಕ್ಸ್ ಮಾಡಿರತಕ್ಕಂಥದ್ದು. 8ನೇ ಪ್ಲಾನ್ ಈಗ ಪ್ರಾರಂಭವಾಯಿತು. ಇದನ್ನು ಹೇಗೆ ಮಾಡುತ್ತಾರೆ. ನಿಮ್ಮ ಎ.ಆರ್.ಎಂ. ಕೆಪಾಸಿಟಿ ಏನಿದೆ ಅದರ ಮೇಲೆ ಮಾಡತಕ್ಕಂಥ ವಿಚಾರ. 1990-91ರ ಮಧ್ಯೆ ನಾನು ಮುಖ್ಯ ಮಂತ್ರಿಯಾದಾಗ ಹಿಂದಿನ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲ್‌ರವರು ಶಕ್ತಿಮೀರಿ ಅವರ ಕೆಲಸವನ್ನು ಆ ವರ್ಷದಲ್ಲಿ ಮಾಡಿದ್ದಾರೆ. ಸೂನ್ ಆಫ್ಟರ್ ದಿ 1989 ಎಲೆಕ್ಷನ್, ಶ್ರೀಮಾನ್ ರಾಜಶೇಖರಮೂರ್ತಿಯವರು ಫೈನಾನ್ಸ್ ಮಿನಿಸ್ಟರ್ ಆಗಿದ್ದರು. ಶಕ್ತಿಮೀರಿ ಆ ವರ್ಷ ಅವರು ಮಾಡಿದ್ದು ಅಂಕಿ ಅಂಶಗಳನ್ನು ಆ ಸಂದರ್ಭದಲ್ಲಿ ಮುಖ್ಯಮಂತ್ರಿ ಇದ್ದಾಗಲು ಕೂಡ ನಾನು ಕೊಟ್ಟಿದ್ದೇನೆ. ಇನ್ನು ಉಳಿದಿರತಕ್ಕಂಥ ಅಕ್ಟೋಬರ್‌ಗೆ ನಾವು ತೆಗೆದುಕೊಂಡರೆ, ಅಕ್ಟೋಬರ್, ನವೆಂಬರ್, ಡಿಸೆಂಬರ್, ಜನವರಿ, ಫೆಬ್ರುವರಿ, ಮಾರ್ಚ್, ಅವರು 6 ತಿಂಗಳು, ನಾನು 6 ತಿಂಗಳು 1990-91ರಲ್ಲಿ ಮಾಡಿದ್ದು, ಮಾನ್ಯ ಸಭಾಧ್ಯಕ್ಷರೇ, ಸುಮಾರಾಗಿ ಎಆರ್‌ಎಂ ಮೆಶರ್ಸ್‌ನ್ನು ಎಷ್ಟು ಕಲೆಕ್ಟ್ ಮಾಡಿದ್ದುದು ಎಂಬುದರ ಅಂಕಿಅಂಶಗಳನ್ನು ನಾನು ಆವಾಗಲೇ ಕೊಟ್ಟಿದ್ದೇನೆ, ಮಂತ್‌ವೈಸ್ ಫಿಗರ್ಸ್‌ನ್ನು ಶಾಸನ ಸಭೆಯಲ್ಲಿ ನಾನು ಚೀಫ್ ಮಿನಿಸ್ಟರ್ ಆಗಿದ್ದಾಗ ಕೊಟ್ಟಿದ್ದೇನೆ. 11 ಸಾವಿರ ಕೋಟಿ ಮಾತ್ರ ಪ್ಲಾನಿಂಗ್ ಕಮಿಶನ್‌ರವರು ಫಿಕ್ಸ್ ಮಾಡಬೇಕೆಂದು ಮಾಡಿದ್ದರು. ಆದರೆ ಹಾಗೆ ಮಾಡುವುದಕ್ಕೆ ಆಗುವುದಿಲ್ಲವೆಂದು ನಾನು ಹೇಳಿದ್ದೆ. ಏತಕ್ಕೆಂದರೆ, ನಾವು ಪ್ಲಾನ್ ಸೈಜ್ ಮಾಡಿದಷ್ಟು ಅಂದರೆ ಪ್ಲಾನ್ ಸೈಜ್ ದೊಡ್ಡದು ಮಾಡುವುದು ಸುಲಭ. ಇವತ್ತು ಹೊಟ್ಟೆ ಸೈಜನ್ನು ದೊಡ್ಡದು ಮಾಡುವುದು ಸುಲಭ. ಆದರೆ ಹೊಟ್ಟೆ ತುಂಬಬೇಕಲ್ಲ. ಎ.ಆರ್.ಎಂ ಮೆಶರ್ಸ್ ಜೋರಾಗಿ ಮಾಡಿಕೊಳ್ಳಬೇಕು. ನೀವು ಅದಕ್ಕೆ ಇನ್‌ಕಮ್ ತೆಗೆಯಬೇಕು. ರೆವಿನ್ಯೂಸ್ ತೆಗೆಯಬೇಕು. ಹಾಗೆ ಮಾಡದೆ ಸುಮ್ಮನೆ ದೊಡ್ಡ ಸೈಜ್ ಮಾಡಿಕೊಂಡರೆ ಅದು ಉಪಯೋಗವಾಗುವುದಿಲ್ಲ. ಆದರೆ ಒಂದು ಕೈಪ್ಯಾಸಿಟಿ ಇದ್ದರೆ, ನೀವು ದೊಡ್ಡ ಸೈಜಿಗೆ ಕೈಹಾಕಬೇಕು. ದೊಡ್ಡ ಸೈಜಿಗೆ ಕೈಹಾಕಬೇಕಾದರೆ ನಿಮಗೆ ಅನುಮಾನವಿಲ್ಲದೆ ಕೈಹಾಕಬೇಕು. ಆಗಲೇ you have got that capacity to collect more revenue to the state so as to see that your collection is in consumance with the size of the plan, whether it is the annual plan or the Five year plan size. ಅದು ಯಾವುದಾದರೂ ಇರಬಹುದು. ಮಾನ್ಯ ಸಭಾಧ್ಯಕ್ಷರೇ 8ನೇ ಪ್ಲಾನಿಗೆ 11 ಸಾವಿರ ಕೋಟಿ ರೂಪಾಯಿಗಳನ್ನು ಫಿಕ್ಸ್ ಮಾಡಬೇಕೆಂದು ಇತ್ತು. ಆಗ ನಾನು ಪ್ಲಾನಿಂಗ್ ಕಮಿಷನರ ಹತ್ತಿರ ಮೊದಲು ಆಫೀಸರ್ಸ್ ತಂಡವನ್ನು ಕಳುಹಿಸಿ, ಆಮೇಲೆ ನಾನು ಹೋಗಿ ಮಾನ್ಯ ಪ್ರಣವ್‌ಮುಖರ್ಜಿ, ವೈಸ್ ಚೇರ್‌ಮನ್ ಆಫ್ ದಿ ಪ್ಲಾನಿಂಗ್ ಕಮಿಷನ್‌ರವರ ಜೊತೆಯಲ್ಲಿ ಎಲ್ಲಾ ಮಾತನಾಡಿದ ಮೇಲೆ we got that raised to Rs.

12,800 crores, for the 8th plan ಮಾನ್ಯ ಸಭಾಧ್ಯಕ್ಷರೇ, 7ನೇ ಪ್ಲಾನ್ ಸೈಜ್ 3,575 ಕೋಟಿ. ದಯವಿಟ್ಟು ತಾವು ಎಲ್ಲರೂ ಗಮನ ಕೊಡಬೇಕು. ಕರ್ನಾಟಕ ರಾಜ್ಯದ್ದು 3500 ಕೋಟಿ. 7ನೇ ಪ್ಲಾನ್‌ನಲ್ಲಿದ್ದರೆ, 8ನೇ ಪಂಚವಾರ್ಷಿಕ ಯೋಜನೆಗೆ 12,300 ಕೋಟಿ ಆಯಿತು. ಸ್ವಾಮಿ, ಇದು ಹೇಗೆ ಬಂತು? Do you know the percentage rise growth rate? It is 250%! On heard of in the financial annuals of Karnataka history. ಇವತ್ತು ನಾವು ಈ ಮಾತನ್ನಾಡುವುದಕ್ಕೆ ಏನು ಕಾರಣ. ಹಾಗಾದರೆ ಪ್ಲಾನ್‌ಸೈಜ್ ದೊಡ್ಡದು ಮಾಡಿಬಿಟ್ಟರೆ ನಾಳೆ ಹಣ ಎಲ್ಲಿಂದ ತರಬೇಕು. How to fill the big gap? ಇವೆಲ್ಲಾ ವಿಚಾರ ಅದಕ್ಕೆ ನಾನು ಹೇಗೆ ಮಾಡಿದೆ ಎಂದರೆ ಪಂಚವಾರ್ಷಿಕ ಯೋಜನೆಗೆ ಈ 250 ಪರ್ಸೆಂಟ್ ಗ್ರೋತ್ ರೇಟ್ ತೆಗೆದುಕೊಂಡರೆ, ಹಣವನ್ನು ಕೂಡ ಜೋಡಿಸತಕ್ಕಂಥ ಅಷ್ಟೇ ಶಕ್ತಿ ನಮಗಿದೆ ಎನ್ನತಕ್ಕಂಥ ಗ್ಯಾರಂಟಿ ಫೈನಾನ್ಸ್ ಮಿನಿಸ್ಟರ್ ನನ್ನ ಮನಸ್ಸಿನಲ್ಲಿತ್ತು. ಅದರ ಬಗ್ಗೆ ಅನುಮಾನವೇ ಇಲ್ಲ. ನಾನು ಏತಕ್ಕೆ ಈ ಮಾತನ್ನು ಹೇಳುತ್ತೇನೆಂದರೆ, ಆಕ್ಚುಯಲಿ ಇಡೀ ಇಂಡಿಯಾ ದೇಶದಲ್ಲಿ ಯಾವುದೇ ರಾಜ್ಯದ ಪಂಚವಾರ್ಷಿಕ ಯೋಜನೆಗಳು ಗ್ರೋತ್ ರೇಟನ್ನು ನೀವು ವಿಚಾರ ಮಾಡಿದರೆ ಕರ್ನಾಟಕ ಮೊದಲನೆಯದಾಗುತ್ತದೆ. ಇದು ಯೋಜನಾ ಆಯೋಗದವರು ಹೇಳಿರತಕ್ಕಂಥ ವಿಚಾರ. ಇದು 250 ಪರ್ಸೆಂಟ್ ಆಗಿದೆ. ನನಗೆ ಹೊಗಳಿಕೆ ಬೇಕಾಗಿಲ್ಲ. ಇವತ್ತು ನಾವೇ ನೋಡಿಕೊಳ್ಳೋಣ. ನಾನು 5ನೇ ವರ್ಷದ ಪ್ಲಾನ್ ಸೈಜ್ ಮಾತ್ರ ಹೇಳಿದ್ದೇನೆ. ಇದು ಹೇಗೆ ಬಂದಿತು? ನಾನು 1990-91 ಮತ್ತು 1991-92ನೇ ಸಾಲಿನ ಆನ್ಯುಯಲ್ ಪ್ಲಾನ್ ತೆಗೆದುಕೊಳ್ಳುತ್ತೇನೆ. 1992-93 ಎಂದರೆ ಅದು ಇದೇ ಮಾರ್ಚ್ ತಿಂಗಳೊಳಗೆ ಮುಗಿಯುತ್ತದೆ. ಏತಕ್ಕೆಂದರೆ, ಕಳೆದ ವರ್ಷ ಆಯವ್ಯಯ ಪತ್ರವನ್ನು ನಾನೇ ಮಂಡನೆ ಮಾಡಿದ್ದೇನೆ. ಈ ಮಾರ್ಚ್ ತಿಂಗಳ ಎಂಡ್ ಆಗಬೇಕು. ಇಷ್ಟು ಹಣ ನಮಗೆ ಬರುತ್ತದೆ, ಆನ್ಯುಯಲ್ ಪ್ಲಾನ್ ಸೈಜ್ ಮುಂದಿನ ವರ್ಷಕ್ಕೆ ಅಂದರೆ 1993-94ಕ್ಕೆ ಎಷ್ಟು ಇರಬೇಕೆನ್ನುವುದನ್ನು ನಾವು ಪ್ಲಾನಿಂಗ್ ಕಮಿಷನ್‌ಗೆ ಕೊಡಬೇಕು. ಇವತ್ತು ಆಯವ್ಯಯ ಪತ್ರದಲ್ಲಿ ಏನು ಹೇಳಿದ್ದಾರಲ್ಲ, ಉದಾಹರಣೆಗೆ ನೀರಾವರಿಗೆ 900 ಕೋಟಿ ರೂಪಾಯಿ ಎಂದು ಇದೆ. ಆಕ್ಚುಯಲಿ 850 ಕೋಟಿ ಎಂದು ಮಾನ್ಯ ಮೊಯಿಲಿಯವರು ಹೇಳಿದ್ದಾರೆ. ಇನ್ನೂ ಬೇಕೆಂದರೆ 50 ಕೋಟಿ ರೂಪಾಯಿ ಕೊಡುತ್ತೇವೆಂದು ಹೇಳಿದ್ದಾರೆ. ಹಾಗಲ್ಲ, ಪ್ಲಾನಿಂಗ್ ಕಮಿಷನ್ ಮುಂದೆ ಕೊಡಬೇಕಾದರೆ 900 ಕೋಟಿ ರೂಪಾಯಿ ಎಂದು ಕೊಟ್ಟು ಇರಿಗೇಷನ್‌ಗೆ ಹಾಕಿದ್ದೇವೆ. ಪವರ್‌ಗೆ ಇಷ್ಟು ಎಂದು ಹಾಕಿದ್ದೇವೆ. ನಿಜ ಹೇಳಬೇಕಾದರೆ ಅಧಿಕಾರ ಬಿಟ್ಟುಕೊಟ್ಟದ್ದು ನವೆಂಬರ್ 20. ಪ್ಲಾನಿಂಗ್ ಕಮಿಷನ್ ಜೊತೆ ಡಿಸ್‌ಕಷನ್‌ಗೆ ಡೇಟ್ ಫಿಕ್ಸ್ ಆದುದ್ದು ನವೆಂಬರ್ 16. 16ರಂದು ನಾನು ಮಾತುಕತೆಗೆ ಹೋಗಬೇಕಾಗಿತ್ತು. ಅರ್ಥಮಂತ್ರಿಯಾಗಿ ಹೋಗಬೇಕಾಗಿತ್ತು. ಮುಖ್ಯ ಮಂತ್ರಿಯಾಗಿ ಹೋಗಬೇಕಾಗಿತ್ತು, ಆದರೆ ನಾನು ಹೋಗುವುದಕ್ಕಾಗಲಿಲ್ಲ. ಏಕೆಂದರೆ ಪೊಲಿಟಿಕಲ್ ಡೆವಲಪ್‌ಮೆಂಟ್ಸ್ ಇತ್ತು. ಆ ವಿಚಾರ ಈ ಸದನಕ್ಕೆ ಸಂಬಂಧ ಬರುವುದಿಲ್ಲ. ನವೆಂಬರ್ 16ಕ್ಕೆ ನಾನೇ ಹೋಗಿದ್ದರೆ ಈ ಆನ್ಯುಯಲ್ ಫ್ಲಾನ್ ಸೈಜ್ ಆಫ್ 1993-94ರದ್ದು ಇವತ್ತು ಏನು ಡಿಸ್‌ಕಸ್ ಮಾಡುತ್ತಿದ್ದೇವೆ, ಇದನ್ನು ನಿಷ್ಕರ್ಷೆ ಮಾಡಿಕೊಂಡು ಬರುತ್ತಿದ್ದೆ. ಇದು ನೀರಾವರಿಗೆ ಹೇಳಿರತಕ್ಕದ್ದು. ಆಮೇಲೆ ವಿದ್ಯುತ್ ಉತ್ಪಾದನೆಗೆ ಹೇಳಿರತಕ್ಕದ್ದು ಬೋತ್ ಪ್ಲಾನ್ ಅಂಡ್ ನಾನ್ ಪ್ಲಾನ್ ಎಲ್ಲವೂ ಕೂಡ ಪ್ಲಾನಿಂಗ್ ಕಮಿಷನ್‌ಗೆ ನಾನು ಆರ್ಥಿಕ ಸಚಿವನಾಗಿದ್ದಾಗ ಬರೆದುಕೊಟ್ಟಿರತಕ್ಕದ್ದು, ಅದನ್ನು ಬದಲಾವಣೆ ಮಾಡುವುದಕ್ಕಾಗುವುದಿಲ್ಲ. Lightly you can touch it. ಆದರೆ ಆ ಫ್ರೇಂ ವರ್ಕ ಬಿಟ್ಟು ಯಾರೂ ಹೋಗುವುದಕ್ಕೆ ಬರುವುದಿಲ್ಲ. ಏಕೆಂದರೆ

ಪ್ಲಾನಿಂಗ್ ಕಮಿಷನ್ ಹೇಳಿದ ಮೇಲೆ You cannot think of having your own Planning Commission at the State level. Such a thing is not allowed under the statute. ಅದು ಬರುವ ಹಾಗೆ ಇಲ್ಲ. ಇವತ್ತು ಆದಷ್ಟೂ ಮಾಡಿರತಕ್ಕದ್ದು. ಆದರೆ ಇಲ್ಲಿ ಇಂಟರ್ನಲ್ ಅಡ್ಜಸ್ಟ್‌ಮೆಂಟ್ ಮತ್ತೊಂದು ಮಾಡತಕ್ಕ ಕಾಲದಲ್ಲಿ that you can play anything provided you know your limitations. ಅದು ಮಾತ್ರ ನಿಮ್ಮ ಗಮನದಲ್ಲಿರಬೇಕಾಗುತ್ತದೆ. ನಾನು ಹೇಳುತ್ತಿದ್ದೆ. ಪಂಚವಾರ್ಷಿಕ ಯೋಜನೆಯ ಗಾತ್ರವನ್ನು ಫಿಕ್ಸ್ ಮಾಡಬೇಕಾದರೆ ಆನ್ಯುಯಲ್ ಪ್ಲಾನ್ ಸೈಜ್ ನಮಗೆ ಎಷ್ಟೆಷ್ಟು ಬಂದಿದೆ ಅಂದರೆ 1989-90, 1990-91, 1991-92 ಮತ್ತು ಈ ವರ್ಷದ್ದು 1992-93 ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು ಮಾಡಿರತಕ್ಕದ್ದೂ ಹೌದು. ಈಗ ಆನ್ಯುಯಲ್ ಪ್ಲಾನ್ ಸೈಜ್ ತೆಗೆದುಕೊಳ್ಳೋಣ. ನಾನು ಯಾವುದನ್ನೂ ಕೂಡ ಇವತ್ತು ಹೊಗಳಿಕೆಗೆ ಮಾತನಾಡುತ್ತಿಲ್ಲ. ನಾನು ಶಾಸನಸಭೆಯಲ್ಲಿ ಹೇಳಿದ್ದೇನೆ, ಮುಖ್ಯ ಮಂತ್ರಿಯಾಗಿದ್ದಾಗಲೂ ಕೂಡ ಹೇಳಿದ್ದೇನೆ. ವಾಸ್ತವವಾಗಿ 198-085ರಲ್ಲಿ Annual plan size growth is 0.001%. ಆಗ ತಮ್ಮ ಸರ್ಕಾರ ಇತ್ತು, ಶ್ರೀ ರಾಮಕೃಷ್ಣ ಹೆಗಡೆಯವರು ಮುಖ್ಯ ಮಂತ್ರಿಯಾಗಿದ್ದರು. ಇದೆಲ್ಲ ರಿಕಾರ್ಡ್‌ನಲ್ಲಿರತಕ್ಕಂಥ ವಿಚಾರ. ಬರೀ 63-64 ಲಕ್ಷ ರೂಪಾಯಿ ಮಾತ್ರ ಜಾಸ್ತಿಯಾಗಿದೆ. ಹಿಂದಿನ ವರ್ಷಕ್ಕೂ 1983-84ಗೂ 1984-85ಗೂ ಇಷ್ಟು ಮಾತ್ರ ಜಾಸ್ತಿಯಾಗಿದೆ. ಆಗ ಬರಗಾಲ ಇತ್ತು, ತೊಂದರೆ ಇತ್ತು ಎನ್ನಬಹುದು. ಆ ಕಾಲದಲ್ಲಿ ಬರಗಾಲ ಇತ್ತು ಎನ್ನುವುದನ್ನು ನಾನೂ ಒಪ್ಪುತ್ತೇನೆ. ಆದರೆ Annual plan size did not increase much because of the drop in the revenue in the State Exchequer. ಏನಾಗಿದೆ ಎಂದರೆ, ಪ್ಲಾನ್ ಸೈಜ್ 1984-85ಕ್ಕೆ 0.001 ಇದೆ. ಬಹುಶಃ 1987-88 ಇರಬೇಕು. ಆಗ 0.01 ಇದೆ. Again plan size growth is 0.01% ಇದೆ. ನೀವು ದಯವಿಟ್ಟು ತೆಗೆದು ನೋಡಿ. ಆಗ ಬರಗಾಲ ಸಿಕ್ಕಾಬಟ್ಟೆ ಬಂತು, ಬರಗಾಲ ಬಂದದ್ದರಿಂದ ಕಲೆಕ್ಷನ್ ಹೆಚ್ಚಿಗೆ ಬರಲಿಲ್ಲವೆಂದು ತಾವು ಹೇಳಿಕೊಂಡಿದ್ದೀರಿ. ಕಾರಣ ಏನೇ ಇರಬಹುದು. ಆಗ ಆನ್ಯೂಯಲ್ ಪ್ಲಾನ್ ಸೈಜ್ ಬೆಳವಣಿಗೆಯಾಗುವುದಕ್ಕೆ ಸಾಧ್ಯವೇ ಆಗಿಲ್ಲ ಎನ್ನುವ ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ರೆವಿನ್ಯೂ ಕಲೆಕ್ಷನ್ ಮಾಡಬೇಕಾದರೆ ಕಮ್ಯುನಲ್ ಕಲಾಟೆಗಳು ನಡೆದವು, ಕಲೆಕ್ಷನ್ ಆಗಲಿಲ್ಲವೆಂದು ಆಡಳಿತ ನಡೆಸತಕ್ಕವರು ಸಬೂಬು ಹೇಳುವುದಕ್ಕೆ ಹೋಗಬಾರದು. ಆ ಸಬೂಬು ನಡೆಯುವುದಿಲ್ಲವೆಂದು ನಾನು ಸ್ಪಷ್ಟಪಡಿಸುತ್ತೇನೆ. ಏಕೆಂದರೆ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿದ್ದಾಗಲೂ ಕಮ್ಯುನಲ್ ಗಲಾಟೆಗಳು ಆದವು. ನಾನು ಮುಖ್ಯಮಂತ್ರಿಯಾಗಿದ್ದಾಗಲೂ ಇನ್ನೂ ನಡೆಯುತ್ತಿತ್ತು. ಇದು 1990-91ಕ್ಕೆ ಸಂಬಂಧಪಟ್ಟ ವಿಚಾರ ಹೌದು, ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಕಲೆಕ್ಷನ್ ಮಾಡತಕ್ಕ ವಿಚಾರದಲ್ಲಿ ನಿಮಗೆ ಅನುಮಾನ ಬೇಕಾಗಿಲ್ಲ. Source of revenue like, commercial taxes and other taxes and other main heads. ನೀವು ಸರಿಯಾಗಿ ಕಲೆಕ್ಷನ್‌ಗೆ ಗಮನ ಕೊಟ್ಟರೆ ಕಲೆಕ್ಷನ್ ಎಂದೂ ಕಡಿಮೆಯಾಗುವುದಕ್ಕೆ ಸಾಧ್ಯವಿಲ್ಲ. ಎಕ್ಸೈಜ್‌ನಲ್ಲಿ ಷಾರ್ಟ್‌ಫಾಲ್ ಎಲ್ಲಿ ಬರುತ್ತದೆ ಎಂದರೆ ಅಂಗಡಿಗಳನ್ನು ನಾವಾಗಿಯೇ ಅಂದರೆ ಸರ್ಕಾರದವರೇ ಮುಚ್ಚಿಸಿದರೆ ಆಗ ಎಕ್ಸೈಜ್ ಕಂಟ್ರಾಕ್ಟರ್ಸ್ ಕೋರ್ಟಿಗೆ ಹೋಗುವುದು, ಸ್ಟೇ ತರುವುದು, ಆಗುವುದು. ಆ ಟೈಂನಲ್ಲಿ ಎಲ್ಲಾದರೂ ಕಡಿಮೆ ಬೀಳಬೇಕೇ ಹೊರತು ಉಳಿದ ಟೈಂನಲ್ಲಿ ಕಡಿಮೆ ಬರುವುದಿಲ್ಲ. ಏಕೆಂದರೆ ಅದು ಓಪನ್ ಆಕ್ಷನ್ ಯಾರೂ ಮೋಸ ಮಾಡುವುದಕ್ಕೆ ಬರುವುದಿಲ್ಲ. ಹಣವನ್ನು ಕಟ್ಟಲೇಬೇಕು. ಆದ್ದರಿಂದ ಯಾವ ಎಕ್ಸೈಜ್ ಕಂಟ್ರಾಕ್ಟರ್ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲವೆಂಬ

ಮಾತನ್ನು ನಾನು ಪದೇಪದೇ ಹೇಳಿದ್ದೇನೆ. ಈಗ ಸ್ಟೇಟ್ ಪ್ಲಾನ್ ಇನ್ವೆಸ್ಟ್‌ಮೆಂಟ್ ಅಥವಾ ಪ್ಲಾನ್ ಸೈಜ್ ಎಷ್ಟು ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. 1985-86 ರಲ್ಲಿ ಆನ್ಯುಯಲ್ ಪ್ಲಾನ್ ಸೈಜ್ 651 ಕೋಟಿ ರೂಪಾಯಿ. ಅಷ್ಟಕ್ಕೇ ಮುಗಿಯಿತು. ಮುಂದಿನ ವರ್ಷ 1986-87 ರಲ್ಲಿ 765 ಕೋಟಿ ರೂಪಾಯಿಗಳು. ಹಿಂದಿನ ವರ್ಷಕ್ಕೆ ಹೋಲಿಸಿದರೆ ಬರೀ 100 ಕೋಟಿ ಚಿಲ್ಲರೆ ಮಾತ್ರ ಜಾಸ್ತಿಯಾಗಿದೆ. 1987-88ಕ್ಕೆ 870 ಕೋಟಿ ರೂಪಾಯಿ ಮತ್ತೆ 1988-89ಕ್ಕೆ 0.01 ಪರ್ಸೆಂಟ್ ಎಂದು ಇದನ್ನೇ ನಾನು ಹೇಳಿದ್ದು. 1987-88ಕ್ಕೆ 870 ಕೋಟಿ ಇದ್ದರೆ 1988-89ಕ್ಕೆ 900 ಕೋಟಿ ರೂಪಾಯಿ ಆಗಿದೆ. ಹಾರ್ಡ್‌ಲಿ 30 ಕೋಟಿ ಮಾತ್ರ ಜಾಸ್ತಿ ಆಗಿದೆ. ಇದರಲ್ಲಿ ಗ್ರೋತ್ ರೇಟ್ ಬರುವುದಿಲ್ಲ. ಯಾವಾಗ ರೆವಿನ್ಯೂ ಡ್ರಾಪ್ ಆಗುತ್ತದೆ ಆಗ ಪ್ಲಾನ್ ಸೈಜ್ ದೊಡ್ಡದಾಗುವುದಕ್ಕೆ ಸಾಧ್ಯವಿಲ್ಲ. ಎಂದರೆ ನಾನು ತಪ್ಪನ್ನು ಕಂಡುಹಿಡಿಯುತ್ತಿಲ್ಲ. ರೆವಿನ್ಯು ಜಾಸ್ತಿ ಮಾಡದಿದ್ದರೆ ಪ್ಲಾನ್ ಸೈಜ್, ಗ್ರೋತ್‌ರೇಟ್ ಹೆಚ್ಚು ಮಾಡುವುದಕ್ಕಾಗುವುದಿಲ್ಲ. 1989-90 ಅಂದರೆ ಎಲೆಕ್ಷನ್ ವರ್ಷದಲ್ಲಿ 1040 ಕೋಟಿ ರೂಪಾಯಿಗಳು ....

Dr. Jeevaraj Alva : If you can requote those figures. You said .001%. ತಾವು ಹೇಳುತ್ತಾ 830 ಕೋಟಿ ಎಂದೂ ಇನ್ನೊಂದು ವರ್ಷ 880 ಕೋಟಿ ಎಂದು ಹೇಳಿದಿರಿ. ಸಾವಿರದಲ್ಲಿ 50 ಆದರೆ 0.001 ಪರ್ಸೆಂಟ್ ಆಗುವುದಿಲ್ಲ. Statistics also lies, and lies. ಆದ್ದರಿಂದ ದಯವಿಟ್ಟು you must enlighten us.

ಶ್ರೀ ಎಸ್. ಬಂಗಾರಪ್ಪ : ಸಾವಿರ ಇರುವುದು ಅದರ ಮುಂದಿನ ವರ್ಷದ್ದು. ತಾವು ದಯವಿಟ್ಟು ಬರೆದುಕೊಳ್ಳಿ, ಪರ್ಸೆಂಟೇಜ್ ಲೆಕ್ಕ ಹಾಕಿ. ಪರ್ಸೆಂಟೇಜ್ ಏನಾದರೂ ತಪ್ಪು ಹಾಕಿದ್ದರೆ ಸರಿ ಮಾಡಿಕೊಳ್ಳುತ್ತೇನೆ. 1987-88ಕ್ಕೆ 870 ಕೋಟಿ ಮುಂದಿನ ವರ್ಷ 1988-89ಕ್ಕೆ 900 ಕೋಟಿ ರೂಪಾಯಿಗಳು. ಎಂದರೆ ಸುಮಾರು 30 ಲಕ್ಷ ಮಾತ್ರ ಜಾಸ್ತಿಯಾಗುತ್ತದೆ. ಕ್ಷಮಿಸಬೇಕು. 30 ಕೋಟಿ ರೂಪಾಯಿಗಳು ಮಾತ್ರ ಜಾಸ್ತಿ ಆಗುತ್ತದೆ. ಎಂದರೆ ಪರ್ಸೆಂಟೇಜ್‌ವೈಸ್ ಎಷ್ಟು ಆಗುತ್ತದೆ ಎಂದು ನೋಡಿ. ಇದು ಸ್ಮಾಲ್ ಪರ್ಸೆಂಟೇಜ್ ಎಂಬ ದೃಷ್ಟಿಯಿಂದ ನಾನು ಹೇಳಿದ್ದೇನೆ. 1989-90ಕ್ಕೆ 1,040 ಕೋಟಿ ರೂಪಾಯಿಗಳು. 1990-91 ಅಂದರೆ ನಾನು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ವರ್ಷ. ಇದನ್ನು ತಾವು ದಯವಿಟ್ಟು ನೋಡಬೇಕು. 1990-91ರಲ್ಲಿನ ವಿಚಾರದಲ್ಲಿ ನಾನು ವೀರೇಂದ್ರಪಾಟೀಲರಿಗೆ ಧನ್ಯವಾದ ಹೇಳಬೇಕಾಗುತ್ತದೆ. ಏಕೆಂದರೆ, ಅವರದು 6 ತಿಂಗಳ ಕಾಂಟ್ರಿಬ್ಯೂಷನ್ ಇದೆ. ನಾನು 6 ತಿಂಗಳು ತೆಗೆದುಕೊಂಡಿದ್ದೇನೆ. ಇದು ನನ್ನ ಒಬ್ಬನದೇ ಸಾಧನೆ ಎಂದು ಹೇಳುತ್ತಿಲ್ಲ. ಇದೆಲ್ಲಾ ನಮ್ಮ ಪಕ್ಷದ, ಸರ್ಕಾರದ ಸಾಧನೆ ಎಂದು ಹೇಳಬೇಕಾಗುತ್ತದೆ. ನಮ್ಮ ಪಕ್ಷ ಇರಬಹುದು ಅಥವಾ ತಮ್ಮ ಪಕ್ಷ ಇರಬಹುದು, ಪ್ರಣಾಳಿಕೆ ಮುಖಾಂತರ ನಾವು ವಿಚಾರಧಾರೆಯನ್ನು ಇಡುತ್ತೇವೆ. ಜನಗಳ ಒಪ್ಪಿಗೆ ಪಡೆದುಕೊಂಡು ನಾವೆಲ್ಲ ಬರುತ್ತೇವೆ. ನಾವು ಯಾವ ರೀತಿ ಮಾಡುತ್ತೇವೆಂದರೆ, ಹಣವನ್ನು ಶೇಖರಣೆ ಮಾಡುತ್ತೇವೆ, ಖರ್ಚು ಮಾಡುತ್ತೇವೆ. ಏಕೆಂದರೆ, ಪ್ಲಾನ್ ಇನ್‌ವೆಸ್ಟ್‌ಮೆಂಟ್ ಎಷ್ಟು ಇರುತ್ತದೋ ಅಷ್ಟೇ ಖರ್ಚೂ ಕೂಡಾ ಇರಬೇಕಾಗುತ್ತದೆ. Growth rate as far as expenditure is concerned that is also important. ನಮ್ಮ ಊರಿನಲ್ಲಿ ಹಳೇ ಪಂಚಾಯಿತಿಯಲ್ಲಿ ಒಬ್ಬರು ಛೇರ್ಮನ್ ಇದ್ದರು. ಅವರ ಹೆಸರು ರುದ್ರಪ್ಪ ಎಂದು. 400 ರೂಪಾಯಿ ಚಿಲ್ಲರೆ ಹಳೇ ಪಂಚಾಯಿತಿಯಲ್ಲಿ ಇತ್ತು. ಪಾಪ ಅವರು ದೊಡ್ಡ ಮನುಷ್ಯರು. ಈಗ ಅವರು ಇಲ್ಲ, ತೀರಿಕೊಂಡಿದ್ದಾರೆ. ನಾನು ಆಗ ಇನ್ನೂ ವಿದ್ಯಾರ್ಥಿ. ಅವರು ಎರಡು ಬೈ ಎಲೆಕ್ಷನ್‌ನಲ್ಲಿ ಗೆದ್ದು ಬಂದರು. ಅವರು ಬಂದು ಪೈಸೆಯನ್ನು ಮುಟ್ಟುತ್ತಿರಲಿಲ್ಲ. ಅವರು

ಹೇಳುತ್ತಿದ್ದರು. ನೋಡಿ 400 ಚಿಲ್ಲರೆ ಹಾಗೆಯೇ ಇದೆ. ಅದನ್ನು ಖರ್ಚು ಮಾಡಿಲ್ಲ ಹಾಗೇ ಇಟ್ಟಿದ್ದೇನೆ ಎಂದು ಹೇಳಿಕೊಂಡೇ 2-3 ಚುನಾವಣೆಗಳಲ್ಲಿ ಗೆದ್ದುಬಂದರು. ಆಮೇಲೆ ದರಿದ್ರ ಇವನು ಏನೂ ಖರ್ಚು ಮಾಡುವುದಿಲ್ಲ, ಬೀದಿಗೆ ಮಣ್ಣೂ ಹಾಕಿಸುವುದಿಲ್ಲ, ಕೆಲಸ ಕಾರ್ಯ ಮಾಡುವುದಿಲ್ಲವಾದರಿಂದ ಈತ ಏಕೆ ಇರಬೇಕು ಎಂದು ಹೇಳಿ ಮುಂದಿನ ಚುನಾವಣೆಯಲ್ಲಿ ಅವರನ್ನು ಸೋಲಿಸಿ ಬಿಟ್ಟರು. ಆತ ಖರ್ಚು ಮಾಡದೇ ಹಣ ಇಟ್ಟುಕೊಂಡಿದ್ದರಿಂದ ಏನು ಪ್ರಯೋಜನ ಬಂತು? 400 ಚಿಲ್ಲರೆ ಹಣ ಇದೆ ಎಂದು ಇಟ್ಟುಕೊಂಡರೆ ಉಪಯೋಗವಾಗುವುದಿಲ್ಲ. 400 ಚಿಲ್ಲರೆ ಹಣ ಇದೆ ಎಂದು ಪ್ರತಿ ಎಲೆಕ್ಷನ್‌ನಲ್ಲೂ ಅಷ್ಟೇ ಹಣ ಇರುತ್ತಿತ್ತು. ಇವತ್ತು 400 ರೂಪಾಯಿಗಳು ಇರುವುದು 1000 ರೂಪಾಯಿ ಆಗಬೇಕು, 1000 ರೂಪಾಯಿ ಇರುವುದು 2 ಸಾವಿರ ರೂಪಾಯಿ ಆಗಬೇಕು. ಆದಾಯದಲ್ಲಿ ಗ್ರೋತ್ ರೇಟ್ ಹೆಚ್ಚು ಆಗಬೇಕು. ಹಾಗೆಯೇ ಖರ್ಚಿನಲ್ಲೂ ಕೂಡ ಗ್ರೋತ್ ರೇಟ್ ಹೆಚ್ಚಾಗಿರಬೇಕು. ಇಲ್ಲಿ ಇನ್‌ಕಮ್‌ನಲ್ಲೂ ಗ್ರೋತ್ ರೇಟ್ ಇಲ್ಲ. ಎಕ್ಸ್‌ಪೆಂಡಿಚರ್‌ನಲ್ಲೂ ಗ್ರೋತ್ ರೇಟ್ ಇಲ್ಲ. Therefore, growth rate in the matter of revenue and expenditure, ಎರಡೂ ಕೂಡಾ ಇರಬೇಕಾಗುತ್ತದೆ. ಹಾಗಿದ್ದರೆ ಮಾತ್ರ ಸಾಧ್ಯವಾಗುತ್ತದೆ. ಇಲ್ಲದಿದ್ರೆ You cannot see any developmental activities. ಗ್ರೋತ್ ರೇಟ್ ಸಿಕ್ಕುವುದಿಲ್ಲ. ನೀವು ಜನರ ಯಾವ ಸಮಸ್ಯೆಗಳಿಗೂ ಸ್ಪಂದಿಸಲಿಕ್ಕೆ ಆಗುವುದಿಲ್ಲ ಅಥವಾ ಈ ಕೆಲಸ ಮಾಡಿಕೊಡುವುದಕ್ಕೆ ಒಬ್ಬರಿಗೂ ಕೂಡ ಸಾಧ್ಯವಾಗುವುದಿಲ್ಲ. ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರತಕ್ಕದ್ದು ಏನೆಂದರೆ, 1990-91ಕ್ಕೆ 1145 ಕೋಟಿ ರೂಪಾಯಿಗಳು. This is the plan investment for 1990-91. 1991-92 ಅಂದರೆ ಕಳೆದ ವರ್ಷ. ತಾವು ಇದನ್ನು ಗಮನಿಸಬೇಕು. 1558 ಕೋಟಿ ರೂಪಾಯಿ. ಗ್ರೋತ್ ರೇಟ್ ಪ್ಲಾನ್‌ಸೈಜ್ 37-38 ಪರ್ಸೆಂಟ್‌ಗೆ ಒಂದೇ ಸಾರಿ ನಾನು ಏರಿಸಿದ್ದೇನೆ. ಇದು ನನ್ನ ಕಾಲದಲ್ಲಿ ಮಾಡಿದ್ದುದು. ನಾನು ಹೊಗಳಿಕೆಯಿಂದ ಮಾತನಾಡುತ್ತಿಲ್ಲ. ಆ ಅಂಕಿ ಅಂಶಗಳನ್ನು ಹಿಂದೆಯೂ ಕೂಡ ಸದನಕ್ಕೆ ಕೊಟ್ಟಿದ್ದೇನೆ. ನಮ್ಮ ಕಾಲದಲ್ಲಿ ಪ್ಲಾನ್‌ಸೈಜ್ ದೊಡ್ಡದು. ಪ್ಲಾನಿಂಗ್ ಕಮಿಷನ್‌ರವರು ಅಪ್ರೂವ್ ಮಾಡಿದ್ದಾರೆದಂರೆ, the Revenue was flowing in a bigger size towards the State Exchequer. That goes without any argument. That is my point. ಇದನ್ನು ನಾವೆಲ್ಲರೂ ಗಮನಿಸಬೇಕಾಗುತ್ತದೆ. 1991-92ರಲ್ಲಿ 1558 ಕೋಟಿ ರೂಪಾಯಿ ಇದ್ದರೆ 1992-93ರಲ್ಲಿ ಅಂದರೆ ಇದೇ ವರ್ಷದಲ್ಲಿ ಮಾರ್ಚಿ ತಿಂಗಳ ಕೊನೆಯವರೆಗೆ ನಾವು ಪ್ಲಾನಿಂಗ್ ಕಮಿಷನ್‌ನಿಂದ ಎಷ್ಟು ಅಪ್ರೂವ್ ಮಾಡಿಸಿಕೊಂಡಿದ್ದು ಅಂದರೆ, 2258 ಕೋಟಿ. ಶ್ರೀಮಾನ್ ಮೊಯಿಲಿಯವರು, ಸಭಾ ನಾಯಕರು ಒಂದು ಮಾತನ್ನು ಆಡಿದ್ದಾರೆ. That is unheard of in the history of any State in the whole of the country. ನಮಗೆ 57 ಪರ್ಸೆಂಟ್ ಗ್ರೋತ್‌ರೇಟ್ ಸಿಕ್ಕಿದೆ ಎನ್ನುವ ಮಾತನ್ನು ಬಜೆಟ್ ಭಾಷಣದಲ್ಲಿ ಬರೆದಿದ್ದಾರೆ. ಅದು 57 ಪರ್ಸೆಂಟ್ ಬರುವುದಿಲ್ಲ. ನೀವು ಹೇಗೆ ಯೋಚನೆ ಮಾಡಿದಿರಿ ಅಂದರೆ 1900 ಕೋಟಿ ಚಿಲ್ಲರೆ ಮಾತ್ರ ಮೊದಲು ಪ್ಲಾನಿಂಗ್ ಕಮಿಷನ್‌ರವರು ಫಿಕ್ಸ್ ಮಾಡಿದ್ದರು. ದಯವಿಟ್ಟು ಫೈಲು ತರಿಸಿ ಓದಿ ನೋಡಿ. ಅದು ನನ್ನ ಬಾಯಲ್ಲಿದೆ. ಅದು ಮೊದಲು 1915 ಕೋಟಿ ರೂಪಾಯಿ ಇತ್ತು. ಆಮೇಲೆ ಅಡಿಶನಲ್ ರಿಸೋರ್ಸ್ ಮೊಬಲೈಸೇಷನ್ ಕ್ಯಪಾಸಿಟಿ ನಮ್ಮದು ಜಾಸ್ತಿ ಆದ ಮೇಲೆ that was fied at Rs. 2258 crores. The growth rate was for 1991-92ಕ್ಕೆ 36 ಪರ್ಸೆಂಟ್, 1992-93ಕ್ಕೆ ಅಂದರೆ ಈ ವರ್ಷಕ್ಕೆ ನಾವು ಮಾಡಿ ಇಟ್ಟುಕೊಂಡಿದ್ದು 38 ಪರ್ಸೆಂಟ್. 1915 ಕೋಟಿ ರೂಪಾಯಿಗೆ ಲೆಕ್ಕ ಹಾಕಿ ನೀವು 57 ಪರ್ಸೆಂಟ್ ಎಂದು ಹೇಳಿದ್ದೀರಿ. ಅದು ಅಷ್ಟು ಬರುವುದಿಲ್ಲ.

ಅದು ನನಗೆ ಗೊತ್ತಿದೆ. 2258 ಕೋಟಿ ರೂಪಾಯಿಗೆ ನೀವು ಲೆಕ್ಕ ಹಾಕಿದರೆ ಮತ್ತು ಈ ವರ್ಷದ್ದು 3025 ಕೋಟಿ ರೂಪಾಯಿಗೂ ಪರ್ಸೆಂಟೇಜ್ ಲೆಕ್ಕ ಹಾಕಿದರೆ ಒಂದು ಸಾವಿರ ಕೋಟಿ ರೂಪಾಯಿ ಜಾಸ್ತಿಯಾಗಿದೆ. ಅಲ್ಲಿಗೆ ಸುಮಾರು 40 ಪರ್ಸೆಂಟ್ ಬರುತ್ತದೆ ಎನ್ನುವುದು ನನ್ನ ಲೆಕ್ಕ. ಯಾರಾದರೂ ಪರ್ಸೆಂಟೇಜ್ ಲೆಕ್ಕ ಹಾಕಿದರೆ ಅದು ಗೊತ್ತಾಗುತ್ತದೆ. ಅದರ ಅರ್ಥ ಏನೆಂದರೆ, completely the financial position of the State as fas as revenue is concerned, it is on a upward trend. ಇದನ್ನು ತೆಗೆದುಕೊಂಡು ತಾವು ಹೇಗೆ ಲೆಕ್ಕ ಹಾಕಿದರೂ ಕೂಡ ಗೊತ್ತಾಗುತ್ತದೆ. ಸ್ವಾಮಿ ನಾನು ಕೇಳುತ್ತಿದ್ದೇನೆ, ಇವೆಲ್ಲ ಯಾರ ಕಾಲದಲ್ಲಿ ಆಯಿತು? ಇವತ್ತು ಮಾತನಾಡತಕ್ಕ ಕಾಲದಲ್ಲಿ ಓಹೋ ಏನೋ ಬಿದ್ದುಹೋಗಿದೆ, ಓಹೋ ಏನೋ ಹಾಳಾಗಿಹೋಗಿದೆ, ಏನೋ ಅನ್ಯಾಯ ನಡೆದುಹೋಗಿಬಿಟ್ಟಿದೆ ಎನ್ನುವ ಅಭಿಪ್ರಾಯ ಇಟ್ಟುಕೊಂಡು ಮಾತನಾಡುವುದು ಬಹಳ ಸುಲಭ. ಆದರೆ ಹಣಕಾಸಿನ ವಿಚಾರದಲ್ಲಿ ರೆವಿನ್ಯೂಸ್ ಆಧಾರದ ಮೇಲೆ ಪ್ಲಾನ್‌ಸೈಜ್ ಫಿಕ್ಸ್ ಮಾಡತಕ್ಕ ಕಾನೂನು ಪ್ಲಾನಿಂಗ್ ಕಮಿಷನ್ ಮುಂದೆ ಇದ್ದಾಗ nobody can escape, nobody can have a different kind of argument other than the one which I have now advanced as far as this is concerned. ಇದರಿಂದ ಯಾರೂ ಕೂಡ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. 38 ಪರ್ಸೆಂಟ್ ಈ ವರ್ಷದ್ದು. ಲೆಕ್ಕಹಾಕಿದರೆ ಮುಂದಿನ ವರ್ಷದ್ದು ಲೆಕ್ಕ ಹಾಕಿದರೆ ಪ್ಲಾನಿಂಗ್ ಕಮಿಷನ್ ಅಪ್ರೂವ್ ಮಾಡಿದ್ದುದು. ಪ್ಲಾನ್‌ಪೇಪರ್ಸ್ ರೆಡಿ ಮಾಡಿದ್ದು, ಇವತ್ತು ಏನು ಆಯವ್ಯಯ ಪತ್ರದ ಮೇಲೆ ಚರ್ಚೆ ನಡೆಯುತ್ತಿದೆ ಇದಕ್ಕೆಲ್ಲ ಪೂರ್ತಿ ಗ್ರಾಸ ಕೊಟ್ಟಿರತಕ್ಕವನು ನಾನೇ. ನಾನೇ ಪ್ಲಾನಿಂಗ್ ಕಮಿಷನ್ ಮುಂದೆ ಪೇಪರ್ ಸಬ್‌ಮಿಟ್ ಮಾಡಿದ್ದುದು. ಮಾನ್ಯ ಮೊಯಿಲಿಯವರು ಹೋಗಿ ಮಾತನಾಡಿಕೊಂಡು ಬಂದಿದ್ದಾರೆ, ನನಗೆ ಸಂತೋಷ ಇದೆ. ಆದರೆ ಪ್ರಶ್ನೆ ಅದಲ್ಲ, ಪ್ಲಾನಿಂಗ್ ಕಮಿಷನ್ ಮುಂದೆ ಕೊಡಬೇಕಾದರೆ ನಮ್ಮ ಎಆರ್‌ಎಂ ಕೆಪ್ಯಾಸಿಟಿ ಏನಿದೆ, ಮೇಷರ್ಸ್ ಏನಿದೆ ಅದನ್ನು ಯಾರೂ ಕೂಡ ಕೊಶ್ಚನ್ ಮಾಡುವುದಕ್ಕಾಗುವುದಿಲ್ಲ. ರೆವಿನ್ಯೂ ವಿಚಾರದಲ್ಲಿ Unheard of in the history of Karnataka state. ಎಂಬ ಮಾತನ್ನು ನಾವೆಲ್ಲ ಸ್ಪಷ್ಟವಾಗಿ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ನಾನು ಒಂದೊಂದೆ ವಿಚಾರಕ್ಕೆ ಬರುತ್ತೇನೆ. ತಮಗೆ ಗೊತ್ತಿರುವ ಹಾಗೆ, ಪ್ಲಾನ್‌ಸೈಜ್ ಫಿಕ್ಸ್ ಮಾಡುವುದಕ್ಕೆ ಇದು ಒಂದು ಕಾರಣವಾದರೆ, ಹಣ ಜಾಸ್ತಿ ಬರತಕ್ಕ ಯಾವ ಐಟಂಗಳು ಇವೆ ಎಂದರೆ, ಈಗ ಕಮರ್ಷಿಯಲ್ ಟ್ಯಾಕ್ಸ್ ಇದೆ. ಅದರಲ್ಲಿ ಬೇರೆ ಬೇರೆ ಬೇಕಾದಷ್ಟು ಐಟಂಗಳು ಇವೆ. ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಬರುತ್ತದೆ, ಸೇಲ್ಸ್‌ಟ್ಯಾಕ್ಸ್ ಬರುತ್ತದೆ. 1984-85ರಲ್ಲಿ 485 ಕೋಟಿ, 1985-86ರಲ್ಲಿ 596 ಕೋಟಿ, 1986-87 ರಲ್ಲಿ 647 ಕೋಟಿ. ಅಲ್ಲಿಗೆ ಡಿಫರೆನ್ಸ್ ಎಷ್ಟು ಬರುತ್ತದೆಂದರೆ, hardly this is about 60 ಕೋಟಿ, 70 ಕೋಟಿ, 100 ಕೋಟಿ ಮೇಲೆ ಯಾವ ವರ್ಷವೂ ಹೋಗಿಲ್ಲ. ಕಮರ್ಷಿಯಲ್ ಟ್ಯಾಕ್ಸಸ್ ವರ್ಷೇ ವರ್ಷೇ ಜಾಸ್ತಿಯಾಗಿಲ್ಲ. 1987-88ಕ್ಕೆ 776 ಕೋಟಿ, ಮತ್ತೆ 120 ಕೋಟಿ ಗ್ರೋತ್ ರೇಟ್ ಇದೆ. 1989ರಲ್ಲಿ ಎಲೆಕ್ಷನ್ಸ್ ಆಗಿವೆ. 1988-89ರಲ್ಲಿ 987 ಕೋಟಿ. ಇಲ್ಲಿ ಸ್ವಲ್ಪ ತಮ್ಮ ಕಾಲದಲ್ಲಿ ನಿಯರ್ಲಿ 200 ಕೋಟಿ ಜಾಸ್ತಿಯಾಗಿದೆ. 1989-90ರಲ್ಲಿ 1087 ಕೋಟಿ ಬಂದಿದೆ. ಅಲ್ಲಿಗೆ 987 ಮತ್ತು 1087, ಮತ್ತೆ 100 ಕೋಟಿ ಮಾತ್ರ ಜಾಸ್ತಿಯಾಗಿ ಮತ್ತೆ ಡ್ರಾಪ್ಟ್ ಆಗಿದೆ. ಆಮೇಲೆ 1990-91ರಲ್ಲಿ ಅಂದರೆ, ಶ್ರೀ ವೀರೇಂದ್ರ ಪಾಟೀಲರು ಮತ್ತು ನಾನು ಮುಖ್ಯಮಂತ್ರಿಗಳಾಗಿ ಇದ್ದಂಥ ಆರ್ಥಿಕ ವರ್ಷ. ಆಗ 1490 ಕೋಟಿಯಾಗಿದೆ. ಹಿಂದಿನವರ್ಷ 1087 ಕೋಟಿ ಇದ್ದರೆ, ನಾವು ಅಧಿಕಾರಕ್ಕೆ ಬಂದಮೇಲೆ 1490

ಕೋಟಿ, ಇದು ಹತ್ತಿರ ಹತ್ತಿರ 1500 ಕೋಟಿ ಎಂದರೆ, ಸುಮಾರಾಗಿ 450 ಕೋಟಿ ರೂಪಾಯಿಗಳ ಜಂಪ್ ಒಂದೇ ಸಾರಿಗೆ ಆಗಿದೆ. ಇನ್ನು 1991-92ರಲ್ಲಿ ಅಂದರೆ ಹಿಂದಿನ ವರ್ಷ 2015 ಕೋಟಿಯಾಗಿದೆ. ವಾಸ್ತವವಾಗಿ 1990-91ರ ಬಜೆಟ್‌ನಲ್ಲಿ ನಾನು ಇಟ್ಟಿದ್ದಲ್ಲ, ಶ್ರೀ ರಾಜಶೇಖರಮೂರ್ತಿಯವರು ಇಟ್ಟಿದ್ದು, 1805 ಕೋಟಿ ರೂಪಾಯಿಗಳು. 1805 ಕೋಟಿ ರೂಪಾಯಿಗಳಿದ್ದರೂ ಕೂಡ ನಾನು ಅಧಿಕಾರ ತೆಗೆದುಕೊಂಡ ಮೇಲೆ ಏನು ಮಾಡಿದೆ ಎಂದರೆ, ಕಮರ್ಷಿಯಲ್ ಟ್ಯಾಕ್ಸ್ ಆಫೀಸಿನ ಬಿಲ್ಡಿಂಗ್‌ಗೇ ಹೋಗಿ ಅಲ್ಲೇ ಮೀಟಿಂಗ್ ಮಾಡಿದೆ. 1800 ಕೋಟಿ ಆಗುವುದಿಲ್ಲ, ಜಾಸ್ತಿ ಮಾಡಬೇಕೆಂದು ಹೇಳಿದ ಮೇಲೆ ನಾವು ಕಲೆಕ್ಟ್ ಮಾಡಿದ್ದು 2015 ಕೋಟಿ ಎಂದರೆ ಸುಮಾರು 210 ಕೋಟಿಯಷ್ಟು. ಆ ವರ್ಷ ಜಾಸ್ತಿ ಕಲೆಕ್ಟ್ ಮಾಡಿದ್ದೇವೆ. ಅಂದರೆ ಎಷ್ಟು ಇತ್ತು, ಅದಕ್ಕಿಂತಲೂ ಜಾಸ್ತಿ ಮಾಡಿದ್ದೇವೆ. ಅಲ್ಲಿಗೆ growth rate as far as commercial tax is concerned, it is 35% as far as revenues are concered. ಸ್ವಾತಂತ್ರ್ಯ ಬಂದ ಮೇಲೆ ಈ ರೀತಿ ಪರ್ಸೆಂಟೇಜ್ growth rate ಎಂದೂ ಕೂಡ ಸಿಕ್ಕಿಲ್ಲ. 1992-93 ಏನಿದೆ, ಅದು ಈ ವರ್ಷ ಮಾರ್ಚ್ ಕೊನೆಗೆ ಮುಗಿಯುತ್ತಿದೆ. ನಾವು ಎಷ್ಟು ಗಮನದಲ್ಲಿಟ್ಟುಕೊಂಡಿದ್ದೆವು? ನನ್ನ ಹೋದ ವರ್ಷದ ಬಜೆಟ್ ಭಾಷಣವನ್ನು ತೆಗೆದು ನೋಡಿ. 2468 ಕೋಟಿ ರೂಪಾಯಿಗಳನ್ನು ಈ ಮಾರ್ಚಿ ತಿಂಗಳ ಕೊನೆಯೊಳಗೆ ಕಲೆಕ್ಟ್ ಮಾಡಬೇಕೆಂದು ನಾನು ಇಟ್ಟುಕೊಂಡಿರತಕ್ಕಂಥ ಗುರಿ. ಮೊಯಿಲಿಯವರ ಭಾಷಣದಲ್ಲಿದೆ. ಈ ಆರ್ಥಿಕ ವರ್ಷದಲ್ಲಿ ನೀವು 2300 ಕೋಟಿ ರೂಪಾಯಿಗಳನ್ನು ಕಲೆಕ್ಟ್ ಮಾಡತಕ್ಕಂಥ ಗುರಿಯನ್ನು ಇಟ್ಟುಕೊಂಡಿದ್ದೀರಿ. I am posing this question. Why have you reduced to 2300 crores. from 2468 crores. I want the reasons. You have not not assigned-any reasons-in your Budget speech. If you have got any reasoning, certainly I am going to accept it. Please put that point on the table of this House. 2468 ಕೋಟಿ ರೂಪಾಯಿಗಳನ್ನು ನಾವು ಕಲೆಕ್ಟ್ ಮಾಡಬೇಕೆಂದು ಇದೇ ಬಾಂಕ್ವೆಟ್ ಹಾಲ್‌ನಲ್ಲಿ ಇಡೀ ರಾಜ್ಯದ ಒಂದು ಸಾವಿರ ಜನ ಕಮರ್ಷಿಯಲ್ ಟ್ಯಾಕ್ಸ್ ಅಧಿಕಾರಿಗಳನ್ನು ಕರೆಸಿ ಮೀಟಿಂಗ್ ಮಾಡಿದ್ದೆ. ನಾನು ಅಧಿಕಾರವನ್ನು ಬಿಟ್ಟುಕೊಡುವುದಕ್ಕೆ ಒಂದು ಅಥವಾ ಒಂದೂವರೆ ತಿಂಗಳು ಮುಂಚೆ ಎಂದು ಕಾಣುತ್ತದೆ. ನಾನು ಅವರಿಗೆ ಹೇಳಿದ್ದೆ, ನಾವು ನೀರಾವರಿ ಮುಂತಾದ ಹಲವಾರು ಯೋಜನೆಗಳನ್ನು ತೆಗೆದುಕೊಂಡು ಬಿಟ್ಟದ್ದೇವೆ, ನಮಗೆ ಬಹಳ ತೊಂದರೆಯಾಗಿದೆ, ಹಣ ಜಾಸ್ತಿ ಬೇಕು. ಕಮರ್ಷಿಯಲ್ ಟ್ಯಾಕ್ಸ್ ಬಹಳ ಮುಖ್ಯವಾಗಿರುವುದು, ಆದ್ದರಿಂದ ಹಣ ಜಾಸ್ತಿ ಕಲೆಕ್ಟ್ ಮಾಡಿಕೊಳ್ಳಬೇಕಾಗುತ್ತದೆ ಎಂದು ಹೇಳಿದ್ದೆ. Thoughh we ave stated in the Budget speech that our target is Rs. 2400 and odd crores. ಇದ್ದರೂ ಕೂಡ I am sorry, we have to reach 3000 crores ಎನ್ನುವ ಮಾತನ್ನು ನಾನು ಆಡಿದ್ದೇನೆ. ಪೇಪರ್ ತುಂಬಾ ನನ್ನ ಹೇಳಿಕೆಯೆಲ್ಲಾ ಬಂದಿದೆ. ಅದು ನಾನು ಮುಖ್ಯಮಂತ್ರಿಯಾಗಿದ್ದ ಕಾಲ. ಮೂರು ಸಾವಿರ ಕೋಟಿಯೆಂದು ಲೆಕ್ಕಹಾಕಿದರೆ, ನೀವು 2300 ಕೋಟಿ ಎಂದು ಹೇಳಿದ್ದೀರಲ್ಲಾ, ಅದನ್ನು ಲೆಕ್ಕಹಾಕಿದರೆ 700 ಕೋಟಿ ಮಾಡುವುದಕ್ಕೆ ಆಗುವುದಿಲ್ಲವೆಂದು ನೀವು ಆರ್ಗ್ಯುಮೆಂಟ್ ಮಾಡಬಹುದು. ನಾನು ಹೇಳಿದಮೇಲೆ ಸಾಧನೆ ಮಾಡದೇ ಬಿಟ್ಟಿಲ್ಲ. 1805 ಕೋಟಿ ಇದ್ದುದನ್ನು ನಾನು 1991-92ರಲ್ಲಿ 2015 ಕೋಟಿಗೆ ಹೇಗೆ ಏರಿಸಿದೆ? ಹಾಗೆಯೇ ಈ ವರ್ಷವೂ ಕೂಡ ನಾನು ಏರಿಸುತ್ತಿದ್ದೆ. ಇವತ್ತು ನೀವು 2468 ಕೋಟಿ ಇದ್ದುದನ್ನು ಜಾಸ್ತಿ ಮಾಡುವ ಬದಲು 2300 ಕೋಟಿ ಎಂದು ಕಡಿಮೆ ಮಾಡಿದ್ದೀರಿ. ಇದನ್ನು ಏಕೆ ಹೇಳಿಕೊಂಡಿದ್ದೀರೋ ಅದು ನನಗೆ ಅರ್ಥವಾಗದ ವಿಚಾರ. ಇದನ್ನು ಸ್ವಲ್ಪ ಏಕ್ಸ್‌ಪ್ಲೈನ್

ಮಾಡುವುದು ಒಳ್ಳೆಯದು. ಈ ಸದನದ ಮೂಲಕ ಕರ್ನಾಟಕದ ಜನತೆಗೆ ಗೊತ್ತಾಗಲಿ. ಸ್ಟೇಟ್ ಟ್ರಜರಿಗೆ ರೆವಿನ್ಯೂ ಬರತಕ್ಕಂಥ ಮುಖ್ಯವಾಗಿ ಇರುವ ಮೂಲ ಈ ಕಮರ್ಷಿಯಲ್ ಟ್ಯಾಕ್ಸ್ ಹಣ. ಇದನ್ನು ಏನಾದರೂ ನೀವು ಕಡಿತಕ್ಕೊಳಪಡಿಸಿದರೆ- then you are doomed lot. I am cautioning you to be frank with you. You cannot take up any developmental activity in the State. You cannot do that. I know that ಏಕೆಂದರೆ ಮೇನ್ ರೆವಿನ್ಯೂ ಹೋದರೆ ಹಣವನ್ನು ಎಲ್ಲಿಂದ ತರುತ್ತೀರಿ? ನಮ್ಮ ಕಾಲದಲ್ಲಿ ಹೀಗಾಯಿತು ಎಂದು ಭಾರಿ ಹೊಗಳಿಕೆಯಿಂದ ನಾನು ಹೇಳುವುದಿಲ್ಲ. ನೀರಾವರಿಗೆ ಇನ್ನೂ ನೂರು ಕೋಟಿ ಜಾಸ್ತಿ ಕೊಡುತ್ತೇನೆ ಎಂದು ಹೇಳಿದ್ದೆ. ನೂರು ಕೋಟಿ ಏಕೆ ಜಾಸ್ತಿ ಕೊಡುತ್ತೇನೆಂದರೆ, ನಮ್ಮ A.R.M. measures ನಿಂದ ಕೆಪ್ಯಾಸಿಟಿ ಜಾಸ್ತಿ ಏರುತ್ತಾ ಇತ್ತು. ಹಣವನ್ನು ಜಾಸ್ತಿ ಕಲೆಕ್ಟ್ ಮಾಡುತ್ತೇವೆಂಬ ಧೈರ್ಯ ನನ್ನ ಮನಸ್ಸಿನಲ್ಲಿತ್ತು. ಅದಕ್ಕೆ ಕುಡಿಯುವ ನೀರಿನ ಯೋಜನೆಗಳ ಪಟ್ಟಿ ತರಿಸಿ, will you kindly place all those papers on the table of this House. I am demanding this ಕುಡಿಯುವ ನೀರು ಇರಬಹುದು, ನೀರಾವರಿ ಇರಬಹುದು, ಇವೆಲ್ಲವೂ ಕೂಡ ಹಿಂದಿನ ವರ್ಷಗಳ comparative study ಮಾಡಿ Comparative statement please place all those things on the table of the House. ಯಾರು ಯಾರ ಕಾಲದಲ್ಲಿ ಎಷ್ಟೆಷ್ಟು ಪರ್ಸೆಂಟೇಜ್‌ವೈಸ್ ಎಷ್ಟು revenue expenditure under each heading ಎಷ್ಟು ಬರಬೇಕೆಂಬುದನ್ನು ಇಟ್ಟರೆ, ನಿಜವಾಗಿಯೂ you are enlightening not only this House and through this House to the people of Karnataka ಈ ಸಂದರ್ಭದಲ್ಲಿ ನಾನು ಕೇಳುತ್ತಿದ್ದೇನೆ. 2300 ಕೋಟಿಗೆ ರೆವಿನ್ಯೂ ಕಮರ್ಷಿಯಲ್ ಟ್ಯಾಕ್ಸ್ ಇಳಿಸುವುದಕ್ಕೆ ಕಾರಣ ಏನೇನೂ ನಿಮಗಿರಲಿಲ್ಲ. 2,468 ಕೋಟಿ ಎಂದು ಕಳೆದ ವರ್ಷ ನಾನು ಟಾರ್ಗೆಟ್ ನಿಗದಿ ಮಾಡಿದ್ದೆ. ಅದಕ್ಕಿಂತ ಜಾಸ್ತಿ ಹೋಗುವ ಬದಲು ಕಡಿಮೆ ಇಟ್ಟಿರುವುದರಿಂದ ಏನಾಗುತ್ತದೆ, ನಿಮ್ಮ ಎ ಆರ್ ಎಂ ಕೆಪಾಸಿಟಿ ಬಗ್ಗೆ ನಿಮಗೇ ಅನುಮಾನ, you are not able to collect under commercial tax head ಎನ್ನತಕ್ಕಂತಾದ್ದು ಸ್ಪಷ್ಟವಾಗಿ ಗೊತ್ತಾಗುತ್ತದೆ. ನೀವು ಇದರ ಬಗ್ಗೆ ನಂಬಿಕೆ ಕಳೆದುಕೊಳ್ಳಬಾರದು. keep up your machinery ನಾನು ಕೇಳುತ್ತೇನೆ, ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ austerity measures ಎಲ್ಲಾ ಬಂತು. ಕೇಂದ್ರ ಸರ್ಕಾರದವರು ಪತ್ರ ಕಳುಹಿಸಿದರು, ಹೆಚ್ಚಿಗೆ ಹಣ ಅನ್ಯಾಯವಾಗಿ ಖರ್ಚು ಮಾಡಬೇಡಿ, ಆದಷ್ಟು ಕಡಿಮೆ ಮಾಡಿ ಎಂಬ ಮಾತನ್ನು ಹೇಳುತ್ತಾ ಬಂದರು. ನಿಜವಾಗಿಯೂ you were heading this cabinet sub-committee also. ನೀವೇ ಎಜುಕೇಷನ್ ಮಿನಿಸ್ಟರ್ ಆಗಿದ್ದಾಗ ಇಲ್ಲಿಯೇ ಹೇಳಿದ್ದೀರಿ. ಏನು ಹೇಳಿದ್ದೀರಿ ಎಂದರೆ, ನಾನು ಜಾಯಿಂಟ್ ಡೈರೆಕ್ಟರ್ಸ್, ಮತ್ತೊಂದು ಕಡಿಮೆ ಮಾಡಿದ್ದೇನೆ, ಇದರಿಂದ 1-2 ಕೋಟಿ ಕಡಿಮೆ ಖರ್ಚು ಮಾಡಿದ್ದೇನೆಂದು ಹೇಳಿದಿರಿ. ನಿಜವಾಗಿಯೂ I welcomed it; The entire House welcomed that. ನಾನು ಕೇಳುತ್ತಿದ್ದೇನೆ. Why did you create the additional post of commercial tax commissioner Why did-you post one more officer? You are coming down as far as collection is concerned, why? ಈಗ ಕಮರ್ಷಿಯಲ್ ಟ್ಯಾಕ್ಸ್ ಕಮಿಷನರ್ ಒಬ್ಬರು ಇದ್ದಾರೆ, ಅಡಿಷನಲ್ ಪೋಸ್ಟ್ ಮಾಡಿ, ಒಬ್ಬರನ್ನು ಪೋಸ್ಟ್ ಮಾಡಿದ ಮೇಲೆ, ಇದು ಕಡಿಮೆಯಾಗುವುದಕ್ಕೆ ಏನು ಕಾರಣ? ಖರ್ಚು ಜಾಸ್ತಿಯಾಗುತ್ತದೆ, ರೆವಿನ್ಯೂಸ್, ಕಮರ್ಷಿಯಲ್ ಟ್ಯಾಕ್ಸ್ ಕಡಿಮೆಯಾಗುತ್ತದೆ. I am posing this question.

ನೀವು ಹಣ ಕಳೆದುಕೊಂಡರೆ, ಹಣ ಎಲ್ಲಿಂದ ತರುತ್ತೀರಿ ಎನ್ನತಕ್ಕ ವಿಚಾರ. ನಾನು ವೈಯಕ್ತಿಕವಾಗಿ ಏನೂ ಮಾತನಾಡುತ್ತಾ ಇಲ್ಲ. ನನ್ನ ಮನಸ್ಸಿಗೆ ನೋವು ಇದೆ. ಕರ್ನಾಟಕ ರಾಜ್ಯದಲ್ಲಿ ರೆವಿನ್ಯೂಸ್ ಡ್ರಾಪ್ ಆದರೆ ನಾನು ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ, ನೀವು ಖರ್ಚು ಮಾಡುವುದಕ್ಕೆ ಹಣವನ್ನು ಎಲ್ಲಿಂದ ತರುತ್ತೀರಿ ಎಂಬ ಪ್ರಶ್ನೆಯನ್ನು ಕೇಳುತ್ತಿದ್ದೇನೆ. this is not a small thing. ನಿಜವಾಗಿಯೂ, ನೀವು ಮರದ ಮೇಲೆ ಕುಳಿತುಕೊಂಡು, ಬುಡವನ್ನು ನೀವೇ ಕತ್ತರಿಸಿಕೊಳ್ಳುತ್ತಿದ್ದೀರಿ. ಅಮಾವಾಸ್ಯೆ ಕತ್ತಲಿನಲ್ಲಿ ಅಂಗಾತ ಬಿದ್ದಹಾಗೆ. ನೀವು ಈ ಕೆಲಸ ಮಾಡುವುದಕ್ಕೆ ಯಾವಾಗಲೂ ಹೋಗಬಾರದು. ಇವತ್ತು ಪರಿಸ್ಥಿತಿ ಏನಾಗಿದೆ. ಕಮರ್ಷಿಯಲ್ ಟ್ಯಾಕ್ಸ್ ಪೂರ್ಣವಾಗಿ ಡ್ರಾಪ್ ಆಗುವುದಕ್ಕೆ ಇದರ ಬಗ್ಗೆ ನಿಮ್ಮ ಸ್ಟೇಟ್‌ಮೆಂಟ್‌ನಲ್ಲಿ ಬರಬಾರದಾಗಿತ್ತು. ಆಫೀಸರ್ಸ್ ಏನು ಮಾಡಿದರು, ಅವರಿಗೆ ಬಹಳ ಆರಾಮವಾಯಿತು. ಇವತ್ತು ಕಮರ್ಷಿಯಲ್ ಟ್ಯಾಕ್ಸ್ ಪ್ರತಿಯೊಂದಕ್ಕೂ A.R.M. measures ನಿಮ್ಮ ಕೆಪಾಸಿಟಿ ಬಗ್ಗೆ ಬಹಳ ಪ್ರಾಮುಖ್ಯವಾದ ಗಮನ ಕೊಡಬೇಕು. ಏಕೆಂದರೆ, ಒಂದು ಸಾರಿ, If there is drop out in your plan size, though it is approved, you cannot have a bigger size even if it is fixed by the planning commission in future. ಈ ಪಾಯಿಂಟ್ ಬಂದೇ ಬರುತ್ತದೆ. ಏಕೆಂದರೆ ನಮ್ಮ ಕಾಲದಲ್ಲಿ, ನಾನು ಹೊಗಳಿಕೆಗೆ ಹೇಳುತ್ತಿಲ್ಲ. ಪ್ಲಾನಿಂಗ್ ಕಮಿಷನ್‌ನವರು ಸರ್ಟಿಫಿಕೇಟ್ ಕೊಟ್ಟಿದ್ದಾರೆ. ನಾನು ಆ ಸರ್ಟಿಫಿಕೇಟ್ ಹಿಡಿದುಕೊಂಡು ಮಾತನಾಡುತ್ತಿಲ್ಲ, ಎಲ್ಲಾ ಪೇಪರಿನಲ್ಲೂ ಇದು ಬಂದಿದೆ. " As far as A.R.M. measures is concerned, Planning Commissioner praisied the resource mobilisation effect and fiscal management of the Karnataka Government. The State Government schemes for power and house sites to the weaker sections, Implementation of literacy and the population control schemes are highly commendable" ಸ್ವಾಮಿ, ಇದು ನಮ್ಮ ರಾಜ್ಯ ಒಂದಕ್ಕೆ ಮಾತ್ರ ಸಿಕ್ಕರತಕ್ಕಂಥಾದ್ದು. ಇದನ್ನು ಅವರೇ ಬರೆದು ಕಳುಹಿಸಿದ್ದಾರೆ, ನಾನೇನೂ ಕೇಳಲಿಲ್ಲ. ನೀವು ಸರ್ಟಿಫಿಕೇಟ್ ಕೊಡಿ ಎಂದು ಅಪ್ಲಿಕೇಷನ್ ಹಿಡಿದುಕೊಂಡು ಹೋಗುವವನು ನಾನಲ್ಲ.

ಡಾ. ಜೀವರಾಜ ಆಳ್ವ : ಈ ಸರ್ಟಿಫಿಕೇಟ್ ಕೊಟ್ಟಮೇಲೆ, ನಾನು ಪ್ಲಾನಿಂಗ್ ಕಮಿಷನ್ ವೈಸ್ ಚೇರ್ಮನ್‌ಗೆ, ಇಷ್ಟು ದೊಡ್ಡ ಸರ್ಟಿಫಿಕೇಟ್ ಕೊಟ್ಟಿದ್ದೀರಲ್ಲ ಎಂದು 12 ಪುಟಗಳ ಪತ್ರ ಬರೆದೆ. ಈ ಸರ್ಟಿಫಿಕೇಟ್ ಏಕೆ ಕೊಟ್ಟಿರಿ ಎಂದು ಕೇಳಿದೆ, ಆದರೆ, ಇದುವರೆಗೂ ಅವರಿಂದ ಉತ್ತರ ಬಂದಿಲ್ಲ.

ಶ್ರೀ ಎಸ್. ಬಂಗಾರಪ್ಪ : ಅದು ನನಗೆ ಸಂಬಂಧವಿಲ್ಲದ ವಿಚಾರ. ಅವರದು, ನಿಮ್ಮದು ಮಧ್ಯೆ ವ್ಯವಹಾರದ ವಿಚಾರ.

ಡಾ. ಜೀವರಾಜ ಆಳ್ವ : ಯಾವತ್ತೂ ಮಾಡದೇ ಇರುವಂಥ ಪ್ಲಾನಿಂಗ್ ಕಮಿಷನ್ It is a very highest body ಅದಕ್ಕೆ ಒಂದು ಸ್ಯಾಂಕ್ಟಿಟಿ ಇದೆ. ಈ ಸರ್ಟಿಫಿಕೇಟ್ ಕೊಡಬೇಕಾದರೆ, ಇಷ್ಟು ಉಲ್ಲಾಸ ಈ ಉಪಾಧ್ಯಕ್ಷರಿಗೆ ಏಕೆ ಬಂತು, ಇದಕ್ಕೆ ಕಾರಣಗಳೇನು, ಈ ಕಾಗದ ಬರುವುದಕ್ಕೆ ಕಾರಣ ಏನು ಎಂದು ಪ್ರಶ್ನೆ ಕೇಳಿದ್ದೆ. I had questioned the bonafides of the chairman but no reppply was received..

ಶ್ರೀ ವೈ. ಕೆ. ರಾಮಯ್ಯ : ಒಂದೇ ಒಂದು ನಿಮಿಷ, ಒಂದೇ ಇನ್‌ಫರ್‌ಮೇಷನ್ ಅವರು ಈ ಕಮಷಿಯಲ್ ಟ್ಯಾಕ್ಸಸ್‌ನ ರಿಸೋರ್ಸ್ ಮೊಬಲೈಜೆಶನ್ ಬಗ್ಗೆ ಮಾತನಾಡುತ್ತಿರುವಾಗ 2400

ಕೋಟಿ ನಾವು ಟಾರ್‌ಗೇಟ್ ಇಟ್ಟುಕೊಂಡಿದ್ದೆವು ಎಂದರು. ಈಗ ತಾನೇ ನನ್ನದೊಂದು ಪ್ರಶ್ನೆಗೆ ಸರ್ಕಾರದಿಂದ ಉತ್ತರ ಬಂದಿದೆ. ನಾನು ಆಯವ್ಯಯ ಪರಿಷ್ಕೃತ ಅಂದಾಜಿನಂತೆ 2314 ಕೋಟಿ. ಈ ಪರಿಷ್ಕೃತ ತಾವೇ ಮಾಡಿದರೋ ಇತ್ತೀಚೆಗೆ ಆಯಿತೋ which means, acccording to the revised estimates of the sources from the commercial tax department it is revised to 2314 crores. I want to know when it has been revised ?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಅದಕ್ಕಾಗಿಯೇ ನಾನು ಹೇಳಿದೆ 1805-10 ಕೋಟಿ ಇದ್ದಂತಹ ಕಾಲದಲ್ಲಿ 2315 ಕೋಟಿಗೆ ಹೋಯಿತು ಮಾನ್ಯ ರಾಮಯ್ಯನವರೇ ತಾವು ಕೂಡ ಅದರಲ್ಲಿ ಹೇಳಿದ್ದೀರಿ. ನಾವು ಯಾವಾಗಲೂ ರಿವೈಸ್ಡ್ ಎಸ್ಟಿಮೇಟ್ಸ್ ತಯಾರಿಸಬೇಕಾದರೆ as ar as the revenue to the state treasury is concerned, ರಿವೈಸ್ಡ್ ಎಸ್ಟಿಮೇಟ್‌ನಲ್ಲಿ ನೀವು ಡೌನ್‌ವರ್ಡ್ ಟ್ರೆಂಡ್ ತೆಗೆದುಕೊಳ್ಳಬಾರದು. ಅದಕ್ಕೆ ನಾನು ಕಾಶನ್ ಮಾಡುತ್ತಿರುವುದು. ಹಾಗಾಗಬಾರದು. ನೀವು ಇನ್ನೂ ಅಪ್ಪರ್ ಟ್ರೆಂಡ್ ಕೊಡಬೇಕಾಗಿತ್ತು. 1800 ಕೋಟಿ ಇದ್ದರೂ ಕೂಡ 2015 ಕೋಟಿಗೆ ನಾವು ಹೊರಟು ಹೋಗಿದ್ದೇವೆ. ನಾವು ಅಲ್ಲಿಗೆ 210 ಕೋಟಿ ಜಾಸ್ತಿ ಮಾಡಿದ್ದೇವೆ. 1992-93ರಲ್ಲಿ 2468 ಕೋಟಿ ರೂಪಾಯಿಗಳು ಎಂದು ಇಟ್ಟರೂ ಕೂಡ 3 ಸಾವಿರ ಕೋಟಿ ರೂಪಾಯಿ ಮಾಡಬೇಕೆಂದು ನಾನು ಅಲ್ಲಿ ಆಫೀಸರ್ಸ್‌ಗೆ ಹೇಳಿದ್ದೇನೆ. ನೀವು ರಿವೈಜ್ಡ್ ಎಸ್ಟಿಮೇಟ್ why did you bring this down from 2468 crores. ಎನ್ನತಕ್ಕಂಥ ಪ್ರಶ್ನೆಯನ್ನು ಅದಕ್ಕಾಗಿ ನಾನು ಕೇಳುತ್ತಿರುವುದು. ಆ ರಿವೈಜ್ಡ್ ಎಸ್ಟಿಮೇಟ್ ನಾನು ಮಾಡಿದವನಲ್ಲ, ನಾನು ಏಕೆ ಮಾಡುವುದಕ್ಕೆ ಹೋಗಲಿ. ಅದನ್ನು ನಾನು ಮಾಡುವುದಕ್ಕೆ ಕಾರಣವೇ ಇಲ್ಲ, ನಾನು ಇನ್ನೂ ಜಾಸ್ತಿ ಮಾಡಿದವನು. Those papers are not at all my papers. ಅದು ಯಾವುದಾದರೂ ಇದ್ದರೆ table of the House ಇರಲಿ, ಆಮೇಲೆ ಅದಕ್ಕೆ ನಾನು ಉತ್ತರ ಕೊಡುತ್ತೇನೆ.

ಛೇರ್ಮನ್: ತಾವು ಇನ್ನೂ ಎಷ್ಟು ಕಾಲ ತೆಗೆದುಕೊಳ್ಳುತ್ತೀರಿ ಏಕೆಂದರೆ 1-20 ನಿಮಿಷ ಆಗಿದೆ, ಇನ್ನೂ ಎಷ್ಟು ಕಾಲ ಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ : ಅಯ್ಯೋ ತಾವು ಸಾಕು ಅಂದರೆ ನಾನು ಕುಳಿತುಕೊಳ್ಳುತ್ತೇನೆ.

ಛೇರ್ಮನ್ : ಸಾಕು ಎನ್ನುವ ಪ್ರಶ್ನೆ ಅಲ್ಲ. ಏಕೆಂದರೆ, ಬೇರೆಯವರಿಗೂ ಕಾಲಾವಕಾಶ ಮಾಡಬೇಕು. ತಮಗೆ ಇನ್ನೂ ಎಷ್ಟು ಸಮಯ ಬೇಕು ಎಂದು.

ಶ್ರೀ ಎಸ್. ಬಂಗಾರಪ್ಪ : ನನಗೆ ಇನ್ನು ಒಂದು ಗಂಟೆ ಬೇಕಾಗಬಹುದೋ ಏನೋ ಅನಿಸುತ್ತದೆ.

ಅಧ್ಯಕ್ಷರು : ಒಂದು ಗಂಟೆ ಸಾಧ್ಯವಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾಜಿ ಮುಖ್ಯಮಂತ್ರಿಗಳು ದಿನಾ ಒಬ್ಬೊಬ್ಬರು ಈ ರೀತಿ ಗಂಟೆಗಟ್ಟಲೆ ತೆಗೆದುಕೊಂಡರೆ ಪರಿಸ್ಥಿತಿ ಹೇಗೆ?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಆಮೇಲೆ

Dy. Chairman of the Planning Commission further states ;

" I also appreciate the efforts you have put on towards the additional resource mobilisation & increased utilisation of the central support for the externally aided project given the resilence of the Indian Economic System; The inovativeness of our peope and your dynamic leadership I have no doubt that you will be able to show increase in the growth rate during the 8th Five Year Plan period".

ಮಾನ್ಯ ಅಧ್ಯಕ್ಷರೇ, ಈ ಮಾತನ್ನು ಹೇಳುವುದಕ್ಕೆ ಪ್ಲಾನಿಂಗ್ ಕಮಿಷನ್‌ನವರು ಸುಮ್ಮ ಸುಮ್ಮನೆ ಹೇಳತಕ್ಕಂಥ ಜನ ಅಲ್ಲ. ಬಹಳ ಜವಾಬ್ದಾರಿ ಇದೆ, ಸ್ಟ್ಯಾಟುಟರಿ ಬಾಡಿ. ಅಷ್ಟು ಸುಲಭವಾಗಿ ಹೇಳತಕ್ಕಂಥವರಲ್ಲ ಮಾನ್ಯ ಅಧ್ಯಕ್ಷರೇ, ಇನ್ನೊಂದು ಮಾತು ಈ ವರ್ಷ ಮಾನ್ಯ ಮುಖ್ಯಮಂತ್ರಿಗಳು ಪ್ಲಾನಿಂಗ್ ಕಮಿಷನ್ ಡಿಸ್‌ಕಷನ್‌ಗೆ ಹೋಗಿ ಬಂದ ಮೇಲೆ when the annuall plan size of 1993-94 was fixed at the rate of ಅಥವಾ ಅವರು ಹೇಳಿದ ಹಾಗೆ 57 ಪರ್ಸೆಂಟೊ 40 ಪರ್ಸೆಂಟೊ ಏನಾದರೂ ಇಟ್ಟುಕೊಳ್ಳಿ. ಆಗ ಅವರು ಏನು ಮಾಡಿದರು ಎಂದರೆ 10-15 ಕೋಟಿ ರೂಪಾಯಿಗಳ ಬೋನಸ್ ಕೊಟ್ಟಿದ್ದಾರೆ. We are the first state to get it in the whole of the country. Please don't forget that ಇಡೀ ಇಂಡಿಯಾ ದೇಶದಲ್ಲಿ ನಮ್ಮದು ಮೊದಲನೆಯ ರಾಜ್ಯ. ಅವರು ಬೋನಸ್ ಕೊಟ್ಟಿದ್ದುದು ನಮಗೆ ಸರ್ಟಿಫಿಕೇಟ್ ಎಂದು ಅಲ್ಲ. ನಾನು ಏತಕ್ಕೆ ಹೇಳುತ್ತೇನೆಂದರೆ, ನಮ್ಮ ಎ.ಆರ್.ಎಂ. ಎಫರ್ಟ್ಸ್ ಇದೆಯಲ್ಲಾ it is completely on the right track on the right direction ಎನ್ನತಕ್ಕಂಥ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಅಲ್ಲಿಗೆ ಹೋಗಿ ಬಂದ ಮೇಲೆ ಬೆಂಗಳೂರಿನಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಪತ್ರಿಕಾ ಮಿತ್ರರು ಕೇಳಿದರು. Annual plan size of 1993-94 38 ಪರ್ಸೆಂಟೊ 40 ಪರ್ಸೆಂಟೊ ಫಿಕ್ಸ್ ಮಾಡಿದ್ದಾರಲ್ಲ ಎಂದು. Is it not the achievement. ಏಕೆಂದರೆ ನೀವು ಮೊನ್ನೆ ಮೊನ್ನೆ ಮುಖ್ಯಮಂತ್ರಿಯಾಗಿದ್ದೀರಿ. Is it not the achievement of Mr. Bangarappa's Government during his time ಅವರು ಮಾಡಿರತಕ್ಕಂಥ ಸಾಧನೆ ಎಂದು ಅವರು ಕೇಳಿದರು. ಅದಕ್ಕೆ ಅವರು ಹೇಳಿದರು. No, No, No, it is the achievement of the people of Karnataka state. I donot want enter into an argument ಎಂದರು. I am sorry, I do not want to any kind of argument too. ನಾನು ಕೂಡ ಆರ್ಗ್ಯುಮೆಂಟ್‌ಗೆ ತಯಾರಾಗಿಲ್ಲ. But the fact remains. ಜನರು ಇರುತ್ತಾರೆ, ಜನರು ಹಿಂದೂ ಕೂಡ ಇರಲಿಲ್ಲ ಎಂದಲ್ಲ. ಹಿಂದೆ ಎ.ಆರ್.ಎಂ. ಮೆಷರ್ಸ್ ಕಂಪ್ಲೀಟ್ ಡೌನ್‌ವರ್ಡ್ ಟ್ರೆಂಡ್ ತೆಗೆದುಕೊಂಡಾಗ ಕರ್ನಾಟಕ ರಾಜ್ಯದಲ್ಲಿ ಜನರು ಇರಲಿಲ್ಲವೇನು? ಅಥವಾ ಹಿಂದೆ ಆನ್ಯುಯಲ್ ಪ್ಲಾನ್ ಸೈಜ್ ಕಡಿಮೆ ಫಿಕ್ಸ್‌ಮಾಡಬೇಕಾದರೆ ಕರ್ನಾಟಕ ರಾಜ್ಯದ ಜನತೆ ಇರಲಿಲ್ಲವೇನು? ಲೀಡರ್‌ಶಿಪ್ ಇರಲಿಲ್ಲವೇನು? ನನ್ನ ಕಾಲದಲ್ಲಿ ಭಾರಿ ಇತ್ತು ಎನ್ನುವ ಪ್ರಶ್ನೆ ಅಲ್ಲ. ಕರ್ನಾಟಕ ರಾಜ್ಯದ ಜನತೆಯ ಶುಭ ಆಶೀರ್ವಾದದಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ.

I am able to collect this much of revenue to the State treasury with this kind of percentage of revenue ಅದಕ್ಕೆ ನಾನು ಕರ್ನಾಟಕ ರಾಜ್ಯದ ಜನತೆಯನ್ನು ಅಭಿನಂದಿಸುತ್ತೇನೆ. ಇನ್ನು ಮುಂದೆ ನಾನು ಕೆಲವು ಅಂಕಿ ಅಂಶಗಳನ್ನು ಕೊಡುತ್ತೇನೆ. ಇವತ್ತು ನನಗೆ

ಯಾವ ಸರ್ಟಿಫಿಕೇಟೂ ಬೇಡ, ನನ್ನನ್ನು ಹೊಗಳುವುದೂ ಬೇಡ. ಕರ್ನಾಟಕ ರಾಜ್ಯದ ಜನತೆ ಇದ್ದಾರೆ, ಮುಂದೆ ಕೂಡಾ ನೋಡಿಕೊಳ್ಳುತ್ತಾರೆ. ನಾನು ಅದರ ಬಗ್ಗೆ ಯೋಚನೆ ಮಾಡುವುದಿಲ್ಲ. One should be true to his conscience first. As far as I am concerned I have to discharge my duties. ಏನು ಮಾಡಬೇಕು ಎನ್ನುವ ಜವಾಬ್ದಾರಿ ನನಗಿರಬೇಕಾಗುತ್ತದೆ. ಆ ಜವಾಬ್ದಾರಿ ಹಿನ್ನಲೆಯ ಮೇಲೆ ನಾನು ಮಾತನಾಡುತ್ತಿದ್ದೇನೆ. ಈಗ ಕಮರ್ಷಿಯಲ್ ಟ್ಯಾಕ್ಸಸ್‌ಗೆ ನಾನು ಬರುತ್ತಿದ್ದೇನೆ. ಪರಿಸ್ಥಿತಿ ಏನಾಗಿದೆ ಎನ್ನತಕ್ಕ ವಿಚಾರಕ್ಕೆ ನಾನು ಬರುತ್ತೇನೆ. ನಾನು ಹೇಳುವುದು as a note of caution to the Hon'ble Chief Minister who is also holding the portfolio of finance of the State. ನಾನು ಅವರಿಗೆ ಹೇಳತಕ್ಕಂಥಾದ್ದು, ಇದನ್ನು ಎಚ್ಚರಿಕೆ ಅಥವಾ ಮತ್ತೊಂದು, ಏನಾದರೂ ತಿಳಿದುಕೊಳ್ಳಿ. ಇದರ ಬಗ್ಗೆ ನೀವು ಗಮನ ಕೊಟ್ಟರೆ ಮುಂದಿನ Annual plan size ಗೆ ಮೀಟ್ ಮಾಡುವುದಕ್ಕೆ ಸಾಧ್ಯ ಆಗುತ್ತದೆ. ಪ್ರೋಗ್ರಾಂ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ, you will be in utter failure ನಾನು ಈಗಲೇ ಹೇಳಿಬಿಡುತ್ತೇನೆ, ನಾಳೆ, ಕರ್ನಾಟಕ ರಾಜ್ಯದಲ್ಲಿ ಡೆವಲಪ್‌ಮೆಂಟ್ ಆಕ್ಟಿವಿಟೀಸ್‌ನ್ನು ಯಾರೂ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ಆ ದೃಷ್ಟಿಯಿಂದ ಆ ಮಾತನ್ನು ಹೇಳುತ್ತಿದ್ದೇನೆ. ಮಾನ್ಯ ಸಭಾಧ್ಯಕ್ಷರೆ, ಈಗ ನಾವು ವಿಚಾರ ಮಾಡೋಣ. ಕಮರ್ಷಿಯಲ್ ಟ್ಯಾಕ್ಸಸ್ ಇವತ್ತು ಏನಾಗಿದೆ ಎನ್ನತಕ್ಕಂಥಾದ್ದಕ್ಕೆ ನಾನು ತಮ್ಮ ಗಮನವನ್ನು ಸೆಳೆಯುತ್ತೇನೆ. ಇನ್ನೊಂದು ವಿಷಯ ಹೇಳುತ್ತೇನೆ, Annual Plan Size ಹೇಳುತ್ತಾ ಬಂದೆ, ಇದರಲ್ಲಿ total outlay for 22 States ನಲ್ಲಿ ನಮ್ಮದು 7.1% as against 4.4% from the 7th Plan ನಾವು 8th plan ಗೆ ಕಾಲು ಇಡುವ ಹೊತ್ತಿಗೆ, from four point something to 7 point something ಗೆ ಹೋಗಿದ್ದೆವು. ಆಮೇಲೆ, ಈ 8th Plan size 12000 crores ಎಂದು ಹೇಳಿದ್ದೇನೆ. The percentage of growth rate is 250% ಎನ್ನುವ ಮಾತನ್ನು ನಾನು ಆಗಲೇ ಹೇಳಿದ್ದೇನೆ. ಇಲ್ಲಿ ಏನಾಗಿದೆ ಎಂದರೆ, ನಾವು ಒಂದು ಬಜೆಟ್ ಇಡಬೇಕಾದರೆ ಯಾವಾಗಲೂ, ಆಬ್ಜೆಕ್ಟೀವಾಗಿ ಇರಬೇಕು. ನಮ್ಮ philosophy ಏನು ಎನ್ನತಕ್ಕಂಥಾದ್ದು ಬಹಳ ಕರೆಕ್ಟಾಗಿ ಇರಬೇಕು. ಮತ್ತು ಡೈರಕ್ಷನ್ ಯಾವಾಗಲೂ ಬಹಳ ಪರ್‌ಫೆಕ್ಟಾಗಿರಬೇಕು. ಅದು ಏನಾದರೂ ಹೋಗಿ Directionless and objectiveless ಆದರೆ then revenues will start falling down. ನೀವು ಬಹಳ ಎಚ್ಚರಿಕೆಯಿಂದ ಯಾವಾಗಲೂ ಇಟ್ಟುಕೊಳ್ಳಬೇಕಾಗುತ್ತದೆ. ಇವತ್ತು ನಾವು ವಿಚಾರ ಮಾಡೋಣ. ನೀವು ಯಾವಾಗಲೂ ನೋಡಬೇಕಾದರೆ public debt, ಆಮೇಲೆ Government expenditure on salaries. ನಾನು ಸ್ಯಾಲರಿ ವಿಚಾರದ ಬಗ್ಗೆ ಒಂದು ಹೇಳಬೇಕಾಗಿದೆ. ಇವತ್ತು ಕೇರಳ ರಾಜ್ಯ ನೋಡಿಕೊಂಡು ಬಿಟ್ಟರೆ ನನಗನಿಸುತ್ತದೆ, Major portion of the total revenues goes to the salaries of the Government employees in Kerala State. To our lack, I shoud say ನಾವು ನಮ್ಮ ಕರ್ನಾಟಕ ರಾಜ್ಯದಲ್ಲಿ ಇನ್ನೂ ಕೂಡ ಆ ಮಟ್ಟಕ್ಕೆ ಹೋಗಿಲ್ಲ. ಹಿಂದಿನ ಪಕ್ಷದ ಸರ್ಕಾರ ಇರಬಹುದು, ತಮ್ಮದೇ ಇರಬಹುದು, ಯಾರದೇ ಇರಬಹುದು. ಆದರೆ ಒಂದು, the percentage on salaries out of the total revenues plan size ನಲ್ಲಿ ಯಾವಾಗ employees ಗೆ ಜಾಸ್ತಿ ಹೋಗುತ್ತದೆ ಎಂದರೆ, ಯಾವಾಗ ನಿಮ್ಮ revenues drop ಆಗುತ್ತದೆ ಆಗ ಇಮ್ಮಿಡಿಯೇಟ್ ಆಗಿ percentage will shot up like anything. ಬಹಳ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ.

ಈಗ ನಾವು plan size ಜಾಸ್ತಿ ಮ್ಹಾಡಿಕೊಳ್ಳುವುದಕ್ಕೆ ಸಾಧ್ಯ ಇದ್ದುದರಿಂದ do you know the percentage of salary to the employees, it is 20 and odd.

ಮೊದಲು 30 and odd ಇತ್ತು. I have brought it down 20 and odd. ಏತಕ್ಕೆಂದರೆ, ನಾವು ಜಾಸ್ತಿ ರೆವಿನ್ಯೂವನ್ನು ನಮ್ಮ State treasury ಗೆ ಜಾಸ್ತಿ ಮಾಡಿಕೊಂಡಿದ್ದೇವೆ. D.A. ದು ನಮಗೆ ಯಾವಾಗಲೂ ತಲೆ ನೋವಿನ ಕೆಲಸ. Govt. of India ದವರು ಕೊಡುತ್ತಾರೆ. ಅದು ತಮ್ಮ ಕಾಲ ಇರಬಹುದು ನಮ್ಮ ಕಾಲ ಇರಬಹುದು. ಯಾವಾಗ ಕೊಟ್ಟರೂ ಕೂಡಾ ನಾವು D.A. ಕೊಡತಕ್ಕಂಥಾದ್ದು ಪದ್ಧತಿ. employees ಅವರದ್ದೂ ತಪ್ಪಲ. ನಾವು ಇದ್ದಾಗಂತೂ ಯಾವಾಗಲೂ employees ಗೆ ಒಂದು ಸ್ವಲ್ಪ, ಜಾಸಿ ಮುಂದೆ ಹೋಗಿಯೇ ಕೊಟ್ಟಿದ್ದೇವೆ. ಏಕೆಂದರೆ ನಮ್ಮ revenues ಕೂಡಾ ಚೆನ್ನಾಗಿತ್ತು. ಅವರೂ ಕೂಡ ಚೆನ್ನಾಗಿರಲೆಂದು ನಾವು D.A. ಕೂಡ ಕೊಟ್ಟಿದ್ದೇವೆ. Even Pay Commission ಇದ್ದು, ಅವರ report filal ಆಗಿ ಬರುವುದಕ್ಕಿಂತ ಮುಂಚೆ Addl. D.A. ಕೂಡಾ ನಾವು ಕೊಟ್ಟಿರತಕ್ಕಂಥಾದ್ದು ಇದೆ. ಅದನ್ನು ಕೂಡ ನಾವು ಮಾಡಿದ್ದೇವೆ. ಮಾನ್ಯ ಸಭಾಧ್ಯಕ್ಷಣಿಯವರೆ, ನಾನು ಈ ಸಂದರ್ಭದಲ್ಲಿ ಹೇಳತಕ್ಕಂಥಾದ್ದು, ಇಷ್ಟೇ. ಪೂರ್ತಿಯಾಗಿ ಇವತ್ತು ಕಮರ್ಷಿಯಲ್ ಟ್ಯಾಕ್ಸಸ್ ಮತ್ತೊಂದು ಎಲ್ಲಾ ಜಾಸ್ತಿ ಮಾಡುತ್ತಾ ಹೋಗಬೇಕು. ಈಗ 100 days ಕಾರ್ಯಕ್ರಮವಿದೆ. ನೂರು ದಿವಸದಲ್ಲಿ ನನ್ನ ಸಾಧನೆ ಇಷ್ಟು ಎಂದು ಹೇಳತ್ಕಂಥಾದ್ದು ತಮಗೆ ಬಿಟ್ಟಿರತಕ್ಕಂಥ ವಿಚಾರ. ನಾನು ಬೇಡ ಎನ್ನುವುದಿಲ್ಲ. ಅದರಲ್ಲಿ ಫೈಲ್ ಕ್ಲಿಯರೆನ್ಸ್, ನೀರಾವರಿ ಎಲ್ಲಾ ಇದೆ. ಅದರ ಬಗ್ಗೆ ನಾನು comment ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ನೀವು ಹೇಳಿದ್ದು ಎಷ್ಟು, ಅಚೀವ್ ಮಾಡಿದ್ದು ಎಷ್ಟು ಎನ್ನುವುದರಲ್ಲಿ ಯಾರೂ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಅದು ಬಜೆಟ್ ಇದ್ದಹಾಗೆ, ಅದೊಂದು ರೀತಿ, 100 days achievement. ಆದರೆ, ಒಂದು ವಿಷಯ. ಈ 100 days ನಲ್ಲಿ your collection of commercial taxes has completely dropped down considerably. ಅದು ಹೇಗೆ ಎನ್ನುವುದರ ಬಗ್ಗೆ ನಾನು ಅಂಕಿಅಂಶ ಕೊಡುತ್ತೇನೆ. ಏಕೆಂದರೆ, Am I to take that this is your achievement? ಹಾಗೆಂದು ನಾವು ತೆಗೆದುಕೊಳ್ಳಬಹುದೇನು? ಗತಿ ಏನಾಗುತ್ತದೆ? ಏಕೆಂದರೆ ನಾವು ಯಾವಾಗಲೂ ಫಿಕ್ಸಪ್ ಮಾಡಿಕೊಳ್ಳಬೇಕಾದರೆ, ನಮ್ಮ ಕೆಪಾಸಿಟಿ ಏನು? ಅಫಿಷಿಯಲ್ ಮೆಷನರಿ ಏನು? ಏಕೆಂದರೆ ಬ್ಯೂರಕ್ರಸಿಯನ್ನು ನಂಬಿಕೆ ತೆಗೆದುಕೊಂಡು ಹೋಗಬೇಕು. ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ರೆವಿನ್ಯೂ ಡಿಪಾರ್ಟ್‌ಮೆಂಟಿನಲ್ಲಿ ಮಾತ್ರ, ಬಹಳ ಎಚ್ಚರಿಕೆ ವಹಿಸಬೇಕು. ರೆವಿನ್ಯೂ ಡಿಪಾರ್ಟ್‌ಮೆಂಟ್ ಅಲ್ಲ ಟ್ರಜರಿಗೆ ಬರತಕ್ಕಂಥ ರೆವಿನ್ಯೂ ಬಗ್ಗೆ ಗಮನ ಹರಿಸುವುದು ಬಹಳ ಹೆಚ್ಚಾಗಿದೆ. ನೀವು ತೆಗೆದುಕೊಳ್ಳಿ. ನಾನು ಈಗ ಕಂಪ್ಯೂಟರೈಸ್ಡ್ ನಿಮ್ಮ ಡಿಪಾರ್ಟ್‌ಮೆಂಟಿನಿಂದ ಬಂದಿರುವ ಸ್ಟೇಟ್‌ಮೆಂಟ್‌ನ್ನು ಇಲ್ಲಿ ಓದಿ ಹೇಳುತ್ತೇನೆ. ಲೇಟೆಸ್ಟ್ ಫಿಗರ್ಸ್ ಕೂಡ ನನ್ನ ಹತ್ತಿರವೇ ಇವೆ. ಸ್ವಾಮಿ, ಫೆಬ್ರುವರಿ, 23 ಲಾಸ್ಟ್ ಮಂತ್, ತಾವು 22ಕ್ಕೆ ಬಜೆಟ್ ಇಟ್ಟಿರತಕ್ಕಂಥಾದ್ದು, 23ನೇ ತಾರೀಖಿಗೆ ಎಷ್ಟು ಕಲೆಕ್ಟ್ ಮಾಡಿದ್ದೀರೆಂದರೆ 1740 ಕೋಟಿ ಚಿಲ್ಲರೆ ಇದೆ. ಫೆಬ್ರುವರಿಯಲ್ಲಿ 28 ದಿವಸ ಮಾತ್ರ. 4-5 ದಿವಸದ್ದು 6-7 ಕೋಟಿ ಅಥವಾ 10 ಕೋಟಿಯೋ ಸೇರಿಸಬಹುದು. 1760 ಕೋಟಿ ಆಗಬಹುದು. ಈ ಮಾರ್ಚ್ ತಿಂಗಳು ಕಲೆಕ್ಷನ್ ಜಾಸ್ತಿಯಾಗುತ್ತದೆ. We were able to collect somewhere between 200 to 300 crores during the month of March. ಫೆಬ್ರುವರಿಯಲ್ಲಿ 200

ಕೋಟಿಯವರೆಗೆ ಹೋಗಿರಬಹುದು ಇದೆ. ಅಥವಾ ನಾನವು 150 ಕೋಟಿ ಮಾಡಿದ್ದರೂ ಕೂಡ, ಈ ಟ್ರ್ಯಾಕ್ ಯಾವಾಗಲೂ ಹೇಗೆ ಹೋಗಬೇಕು ಎಂದರೆ, ಜನವರಿ, ಫೆಬ್ರವರಿ, ಮಾರ್ಚ್, ಫೈನಾನ್ಷಿಯಲ್ ಇಯರ್ ಎಂಡಿಂಗ್ ಇದರಲ್ಲಿ ನೀವು ಜಾಸ್ತಿ ಮೇಲಕ್ಕೆ ಹೊರಟುಹೋಗಿಬಿಡಬೇಕು. ಈಗಲೂ ಕೂಡ ನೀವು ಜಾಸ್ತಿ ಗಮನ ಕೊಡಿ. ಏಕೆಂದರೆ ಮಾರ್ಚ್ ತಿಂಗಳೂ ಇನ್ನು ಮುಗಿದಿಲ್ಲ. ನಾನು ಈಗಲೇ ನೆನಪು ಮಾಡಿಕೊಡುತ್ತಿದ್ದೇನೆ. ಉಳಿದಿರತಕ್ಕಂಥ ದಿವಸಗಳನ್ನು ನೀವು ಕಳೆದುಕೊಳ್ಳಬೇಡಿ. We are already on 9th. Hardly we have 20-21 days. ಈ 20 ದಿವಸದಲ್ಲಿ ಕಲೆಕ್ಟ್ ಮಾಡತಕ್ಕಂಥದ್ದೇ ನಿಮಗೆ ಕೆಪಾಸಿಟಿ ಬರುತ್ತದೆ. ಪ್ಲಾನಿಂಗ್ ಕಮಿಷನ್‌ಗೆ ಉತ್ತರ ಕೊಡುವುದಕ್ಕೆ ಬರುತ್ತದೆ. ಇಲ್ಲದಿದ್ದರೆ you will be a doomed lot. I am cautioning you ನಾಳೆ ಎಲ್ಲಾ ಕಿತ್ತುಕೊಂಡು ಹೊರಟು ಹೋಗಿಬಿಡುತ್ತದೆ. ನಾನು ಈಗಲೇ ಹೇಳಿಬಿಡುತ್ತೇನೆ. ಸ್ವಾಮಿ, ನೀವು ಹೆಚ್ಚು ಎಂದರೆ ಎಷ್ಟು ಕಲೆಕ್ಟ್ ಮಾಡಬಹುದೆಂದು ಅದನ್ನೂ ನಾನು ಹೇಳಿಬಿಡುತ್ತೇನೆ. I know the capacity of the Government. ಏಕೆಂದರೆ 1990-91, 1991-92 ರಲ್ಲಿ ನಾನು ಹ್ಯಾಂಡಲ್ ಮಾಡಿದ್ದೇನೆ. 1992-93 also till I came out of the power ನಾನು ನೋಡಿದ್ದೇನೆ. ಹೆಚ್ಚು ಅಂದರೆ It is between 250 crores round about for the month of March. ನೀವು 1750'ಕೋಟಿ, ಅಂದರೆ, ಇದೊಂದು 250 ಕೋಟಿ. ಸ್ವಾಮಿ ಎಷ್ಟಾಯಿತು? 2050 ಕೋಟಿ ಅಷ್ಟೇ ನೀವು ಮಾಡುವುದು. At best you can reach 2100 crores ಬಜೆಟ್ ಸ್ಪೀಚ್‌ನಲ್ಲಿ ನೀವು ಹೇಳಿದ್ದು 2300 ಕೋಟಿ. Still there will be a difference of 200 crores. How? You have to explain. 2468 ಕೋಟಿಗೆ ನಾವು ಹೋಲಿಸಿಬಿಟ್ಟರೆ ಅದರಲ್ಲಿ ಸುಮಾರು 400 ಕೋಟಿ ಶಾರ್ಟ್‌ಫಾಲ್ ಇದೇ ಮಂತ್‌ನಲ್ಲಿ ಕಾಣಿಸುತ್ತದೆ. ಇದು ನಾಳೆ ಏನಾಗುತ್ತದೆ? Where is the money for the irrigation, Power generation, plan and non-plan expenditure? ತಾವು ಇದಕ್ಕೆಲ್ಲಾ ಹಣ ಎಲ್ಲಿಂದ ತರುತ್ತೀರಿ? ಇವತ್ತು 100 days ನಿಮ್ಮ ಅಚೀವ್‌ಮೆಂಟ್‌ನಲ್ಲಿ, ನೀವು ರೆವಿನ್ಯೂ ಕಲೆಕ್ಷನ್ ಜಾಸ್ತಿ ಮಾಡುವ ವಿಚಾರ ಇಡುವ ಬದಲು Additional Commissioner post create ಮಾಡಿದ್ದೀರಿ. ಆಫೀಸರ್ ಹೇಗೆ ಕೆಲಸ ಮಾಡುತ್ತಾರೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಸಾಯಂಕಾಲ ಐದೂವರೆ ಗಂಟೆಯವರೆಗೂ ಪೇಪರ್ ಓದಿಕೊಂಡು ಹೋಗುವವರು ನಿಮ್ಮ ಸರ್ಕಾರದಲ್ಲಿದ್ದಾರೆ. ಇಂಥವರನ್ನು ಇಟ್ಟುಕೊಂಡು ನೀವು ಕೆಲಸ ಮಾಡಿ ಹಣ ಮಾಡುವುದಕ್ಕಾಗುತ್ತದೆಯೇ? ರಾತ್ರಿ ಹಗಲು ಕೆಲಸ ಮಾಡುತ್ತಿದ್ದ ಅಲೆಕ್ಸಾಂಡರ್ ಬಗ್ಗೆ ಅನೇಕ ಜನ ಮಾತನಾಡಿದರು. I think that gentleman was working with the tax offices, sit till late in the night 10-11 ಗಂಟೆಯವರೆಗೂ ಮೀಟಿಂಗ್ ಮಾಡಿ ಸೆಕ್ಟಾರ್‌ವೈಸ್ ಎಷ್ಟೆಷ್ಟು ಬಂತು? ಏನೇನು ಬಂತು, ಇದನ್ನೆಲ್ಲಾ ಮಾಡುತ್ತಿದ್ದರು. ನೀವು 6 ಗಂಟೆಮೇಲೆ ನಿಮ್ಮ ಆಫೀಸುಗಳಿಗೆ ಹೋಗಿ, ಒಂದು ಜೀಪ್ ಇರುವುದಿಲ್ಲ, ಎಲ್ಲಾ ಬಾಗಿಲು ಹಾಕಿಕೊಂಡು ಹೋಗಿರುತ್ತಾರೆ. ಅದಕ್ಕೇ ನಾನು ಹೇಳಿದ್ದುದು. ಈ ಮಂತ್‌ನ್ನು ಮಾತ್ರ ಕಳೆದುಕೊಳ್ಳಬೇಡಿ. ಇನ್ನು 20 ದಿವಸ ಉಳಿದುಕೊಂಡಿದೆ. ಈ 20 ದಿವಸದಲ್ಲಿ ಆ ಕೆಲಸವನ್ನು ತಾವು ಮಾಡಬೇಕು. ಆಮೇಲೆ 1991-92ರ ಮಾರ್ಚ್ ತಿಂಗಳಲ್ಲಿ 345 ಕೋಟಿ ರೂಪಾಯಿ ಬಂತು ಎಂದು ಹೇಳಿದ್ದೀರಿ. ಆ್ಯಕ್ಚುಯಲ್ ಇದು 443.14 ಕ್ರೋರ್ಸ್. ಇದು ನಮ್ಮ ಕಾಲದಲ್ಲಿ ಆಗಿರತಕ್ಕಂಥಾದ್ದು. ಇದನ್ನು ನಾನು ತಿದ್ದಿದ್ದೇನೆ. ನಿಮ್ಮ ಕಂಪ್ಯೂಟರ್ ಸ್ಟೇಟ್‌ಮೆಂಟ್ ಸರಿಯಿಲ್ಲ. ಇದೇ ರೀತಿ ಕಮರ್ಶಿಯಲ್ ಟ್ಯಾಕ್ಸಸ್ ವಿಚಾರವಾಗಿ

ಮಂತ್‌ವೈಸ್ ಫಿಗರ್ ತೆಗೆದುಕೊಂಡರೂ ಕೂಡ ಕೆಲವು ಸಲ ಬಿಗಿನಿಂಗ್‌ನಲ್ಲಿ ಮಾತ್ರ ಕಡಿಮೆ ಇರುತ್ತದೆ. Revenue collection, so far commercial taxes are concerned, will be very much less in the beginnig of the financial year, every year. ಇರುತ್ತದೆ. ಆದರೆ ಮುಂದೆ ಬರುವ ವರ್ಷದಲ್ಲಿ soon after November, December ನಾನಿದ್ದಾಗ ಏನು ಮಾಡಿದ್ದೆ ಅಂದರೆ, ಜೂನ್, ಜುಲೈನಿಂದಲೇ ಸ್ಟಾರ್ಟ್ ಮಾಡಿಸಿದ್ದೆ. ಆದರೆ ಕೊನೆಯ ಘಳಿಗೆಗೆ ನಮ್ಮ ಗ್ರೋತ್ ರೇಟ್ ಇಷ್ಟು ಬರಲೇಬೇಕು ಎಂದು ನಾನು ಸ್ಪಷ್ಟವಾಗಿ ಇಟ್ಟುಕೊಂಡಿದ್ದೆ. ಅದೇನೆ ಇರಲಿ, ಈಗ ನಾನಿಲ್ಲ, ತಾವಿದ್ದೀರಿ, ಒಳ್ಳೆಯ ಕೆಲಸ ಮಾಡಿ. ವೀರೇಂದ್ರ ಪಾಟೀಲ್ ಮತ್ತು ನನ್ನ ಕಾಲದಲ್ಲೂ ಘಟನೆಗಳಿತ್ತು. ಮಾನ್ಯ ಅಧ್ಯಕ್ಷರೇ, ನನ್ನ ಕಾಲದಲ್ಲಿ ಒಂದು ರೂಪಾಯಿ ನಾನು O.D. ತೆಗೆದುಕೊಳ್ಳಲಿಲ್ಲ. ನೀವು ಸರ್ಕಾರಿ ರೆಕಾರ್ಡ್‌ನನ್ನು ತೆಗೆದುನೋಡಿ. ರಿಸರ್ವ್ ಬ್ಯಾಂಕಿಗೆ ಒಂದು ಸಾರಿಯೂ ನಾನು ಸಾಲಕ್ಕೆ ಅಪ್ಲಿಕೇಷನ್ ಹಾಕಿಲ್ಲ, ಹಾಕಬಾರದು, ರೆವಿನ್ಯೂಸ್ ನಾವೇ ಕಲೆಕ್ಟ್ ಮಾಡಿಕೊಳ್ಳಬೇಕೆಂಬ ಹಠ, ಛಲ, ನಮ್ಮದು. ಸರ್ಕಾರಿ ಸ್ಯಾಲರೀಸ್ ನಾನು ನಿಲ್ಲಿಸಿಲ್ಲ. ಏಕೆಂದರೆ, ನನ್ನ ಕಾಲದ ಬಗ್ಗೆ ಭಾರಿ ಭಾಷಣಗಳು ನಡೆದಿವೆ. ಆ ದೃಷ್ಟಿಯಿಂದ ನಾನು ಹೇಳುವುದು ಆಮೇಲೆ Payment of the Government Bills or Treasury Bills, will you kindly check up? ನನ್ನ ಕಾಲದಲ್ಲಿ ಒಂದು ಸಾರಿಯೂ ಕೂಡ ನಿಲ್ಲಿಸಬೇಕು ಎಂದು ಆರ್ಡರ್ ಮಾಡಿ ಕಳಿಸಿಲ್ಲ. ತಾವೆಲ್ಲ ಅನೇಕ ಪಕ್ಷಗಳ ಮಾನ್ಯ ಸದಸ್ಯರು ಈ ಕಡೆ ಆ ಕಡೆ ಕುಳಿತಿದ್ದೀರಿ. Will you kindly enlighten me? Did I issue such an order to the Treasury or something like that? ನಾನು ಅಂತಹ ಆರ್ಡರನ್ನು ಯಾವಾಗಲಾದರೂ ಇಶ್ಯೂ ಮಾಡಿದ್ದೇನೆಯೇ? ನೊ, ಏಕೆಂದರೆ, ನಾನು ಅಧಿಕಾರ ತೆಗೆದುಕೊಂಡ ತಕ್ಷಣವೇ ರೆವಿನ್ಯೂ ಜಾಸ್ತಿ ಮಾಡಿಕೊಂಡುಬಿಟ್ಟಿದ್ದೆ. Our facts and figures speak, I need not speak at all. My performance will speak as far as revenues are concered. ಅಧ್ಯಕ್ಷರೇ, ಇದಲ್ಲದೆ ಇವತ್ತು ಗತಿಯೇನಾಗಿದೆ? ತಾವು ಬಂದಿರಿ, ಬಂದ ತಕ್ಷಣವೇ Treasury ban. Why? LOC is not issued, I cannot understand this.

ಅನೇಕ ಜನ ಶಾಸಕರು ಆ ಕಡೆ ಈ ಕಡೆ ಕುಳಿತಿರುವವರು ಯಾರೇ ಇರಬಹುದು, ಬಿಲ್ಸ್ ಪೇಮೆಂಟ್‌ಗಾಗಿ ಕಂಟ್ರಾಕ್ಟರ್ಸ ಬೊಂಬಡ ಹೊಡೆದುಕೊಳ್ಳುತ್ತಿದ್ದಾರೆ, ಒದ್ದಾಟ ಮಾಡುತ್ತಿದ್ದಾರೆ. ಯಾವ ಡಿಪಾರ್ಟ್‌ಮೆಂಟಿಗೂ ಕೂಡ ಹಣ ಹೋಗುತ್ತಿಲ್ಲ. 30-40 ಜನ ಸಚಿವರನ್ನು ಮಾಡಿಟ್ಟಿದ್ದೀರಿ. ಇವತ್ತು ಹಣ ಇಲ್ಲದೆ ಸಚಿವರು ಕೂಡ ಹೇಗೆ ಮಾಡಬೇಕು. ಇದು ನನಗೆ ಅರ್ಥವಾಗುವುದಿಲ್ಲ. ಟ್ರೆಜರಿಬ್ಯಾನ್ ನೀವು ಏಕೆ ಹಾಕಿರುವುದು? ಅದೇನು ತೋರಿಸುತ್ತದೆ ಅಂದರೆ, You are not certain about you own performance as far as getting revenues to the State Treasury is concerned from out of these areas like commercial taxes, excise, stamps & Registration and motor vehicle tax. ನೀವು ಎಲ್‌ಓಸಿ ಬ್ಯಾನ್ ಮಾಡಿದ್ದೇಕೆ? ನನ್ನ ಕಾಲದಲ್ಲಿ ಬ್ಯಾನ್ ಮಾಡಲಿಲ್ಲ. ನಿಮ್ಮ ಕಾಲದಲ್ಲಿ ಬ್ಯಾನ್ ಮಾಡಿದ್ದೀರಿ. ಅದರರ್ಥ, ನಿಮ್ಮ ಹತ್ತಿರ ಹಣ ಇಲ್ಲ, ಎಂದು. ಹಣ ನಿಲ್ಲುವುದಕ್ಕೆ ಏನು ಕಾರಣ ಬಂತು? ನಾನು ಹೇಳುತ್ತೇನೆ, ಇದು ಎಂದಿಗೂ ಯಾರಿಗೂ ಸರ್ವಥಾ ಗೌರವ ತರುವಂಥದಲ್ಲ. Please remove that treasury ban. ಮಾರ್ಚಿ ಎಂಡ್‌ನಲ್ಲಿ ಪೇಮೆಂಟ್‌ಗಳಾಗಬೇಕು. ಅಲ್ಲಿ ಇರಿಗೇಷನ್ ನಿಂತುಕೊಂಡಿದೆ, ಬೇರೆ ಕೆಲಸ ಕಾರ್ಯಗಳು ನಿಂತುಹೋಗಿವೆ. ಸದಸ್ಯರು ಅವರ ಕ್ಷೇತ್ರಗಳಿಗೆ ಹೋಗಿ ಉತ್ತರ ಕೊಡುವುದಕ್ಕೆ ಆಗುತ್ತಿಲ್ಲ. ಇಲಾಖೆ ಕೂಡ ಏತಕ್ಕೂ ಬರುತ್ತಿಲ್ಲ,

This Government is here. During the course of last hundred days, why did you not pay the salaries to the Government employees, I cannot understand. What for this Government? Why a Government like this should be there, I cannot understand. ಆದ್ದರಿಂದ ಮೊದಲು ಅದನ್ನು ತೆಗೆದುಹಾಕಿ ಹಣವನ್ನು ನೀವು ಬಿಡುಗಡೆ ಮಾಡಬೇಕೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನೂ ಅನೇಕ ವಿಚಾರಗಳು ಇವೆ. ನೀವು ತೆಗೆದುಕೊಂಡು ಹೋಗಿ ಎಲ್ಲಿಗಾದರೂ ಮಾಡಿಬಿಟ್ಟರೆ, ಎಲ್ಲಿಗೆ ಮಾಡಿದ್ದೀರಿ ಎನ್ನತಕ್ಕ ಮಾತು ಅಲ್ಲ. ಅಗ್ಗದ ಕಾಸಿಗೆ ಮುಗ್ಗಲು ಹುರುಳಿ ಎಲ್ಲಿ ಸಿಗುತ್ತದೆ? ಅಗ್ಗದ ಕಾಸಿಗೆ ಮುಗ್ಗುಲು ಹುರುಳಿ, 5-6 ರೂಪಾಯಿಯನ್ನು ಕೊಟ್ಟು ಮಾಡಿದ ಹಾಗೆ ಅದನ್ನು ಮಾಡಿದರೆ ಯಾರಿಗೂ ಕೂಡ ಒಳ್ಳೆಯದಾಗುವುದಿಲ್ಲ. ಇವತ್ತು ಯಾರು ಒಬ್ಬ ವ್ಯಕ್ತಿ ಹೋಗಿ ಕೆಲಸ ಮಾಡುತ್ತಾನೆ ಅವನಿಗೆ ಬೆಂಬಲವನ್ನು ಕೊಡಬೇಕು. ಈಜು ಬರಲಾರದವನನ್ನು ತೆಗೆದುಕೊಂಡು ಹೋಗಿ ಈಜುವವನ ಕಾಲನ್ನು ಹಿಡುದು ಹಿಂದಕ್ಕೆ ಎಳೆದಿದ್ದನಂತೆ. ಈಜು ಬರಲಾರದವನು ಈಜುವವನ ಕಾಲನ್ನು ಹಿಡುದು ಎಳೆದಿದ್ದನಂತೆ. ಆ ಕೆಲಸ ಎಂದೂ ಕೂಡ ಆಗಬಾರದು. ರೆವಿನ್ಯೂ ಬರತಕ್ಕಂಥ ಕಾಲದಲ್ಲಿ ಅದನ್ನು ಹಿಂದಕ್ಕೆ ಎಳೆಯಬಾರದು. ಮುಂದಕ್ಕೆ ಹೋಗುವುದನ್ನು ಯಾವಾಗಲೂ ಕೈಬಿಡಬೇಕು. ಅದಕ್ಕೆ ಮನುಷ್ಯರಿಗೆ ಧೈರ್ಯ ಇರಬೇಕು. ಅದು ಅತಿರಥ ಎನ್ನತಕ್ಕ ಮಾತನ್ನಾಡಿಕೊಂಡರೂ ಅದು ಗತಿಗೆಡಬಾರದು. ಅತಿರಥ ಎಂದುಕೊಂಡವರು ಎಂದೂ ಕೂಡ ಗತಿಗೆಡಬಾರದು. ಧರ್ಯದಿಂದ ನುಗ್ಗಬೇಕು ಸಾಧನೆಯನ್ನು ಮಾಡಬೇಕು ಎನ್ನುವುದು ನನ್ನನ್ನು ಸ್ಪಷ್ಟವಾಗಿರತಕ್ಕ ಅಭಿಪ್ರಾಯ. ನಾನು ಈ ಸಂದರ್ಭದಲ್ಲಿ ಅಧಿಕಾರಿಗಳ ಬಗ್ಗೆ ಒಂದೇ ಒಂದು ಮಾತನ್ನು ಹೇಳತಕ್ಕಂಥದ್ದು. ಅಧಿಕಾರಿಗಳನ್ನು ತಹಬಂದಿಗೆ ತಂದು ಈ ವಿಚಾರ ಇಡದಿದ್ದರೆ ನಿಮ್ಮ ಸಾಧನೆ ಸೊನ್ನೆ. ಈಗಲೇ ನಾನು ಇದರ ಬಗ್ಗೆ ಎಚ್ಚರಿಕೆಯನ್ನು ಕೊಡುತ್ತೇನೆ. ಅಧಿಕಾರಿಗಳನ್ನು ಇಟ್ಟುಕೊಂಡು ಬ್ಯುರೊಕ್ರಾಟಿಕ್ ಅಪ್ರೋಚ್ ಮೂಲಕ, ಬ್ಯುರೋಕ್ರಸಿ ತಯಾರು ಮಾಡತಕ್ಕಂಥ ಬಜೆಟ್, ತೆಗೆದುಕೊಂಡರೆ ಅವರೇ ನಡೆಸತಕ್ಕಂಥ ಆಡಳಿತ ಇದಾಗುತ್ತದೆ. ಬಹಳಷ್ಟು ಜನ ಈ ದೇಶದಲ್ಲಿ ಟೈ ಕಟ್ಟಿಕೊಂಡು ಅಡ್ವೈಸ್ ಕೊಡುವವರು ಇದ್ದಾರೆ. ಅದು ನನಗೆಲ್ಲಾ ಗೊತ್ತಿದೆ, ನಿಮಗೂ ಕೂಡ ಗೊತ್ತಿದೆ. ಕ್ಷಮಿಸಬೇಕು, ಟೈ ಕಟ್ಟುವುದು ತಪ್ಪು ಎಂದಲ್ಲ. ಆದರೆ ಟೈ ಯಜಮಾನಿಕೆ ನಡೆಸುವುದಕ್ಕೆ ಬಿಡಬಾರದು. ನಾವು ಪ್ರಾಕ್ಟಿಕಲ್ ಆಗಿ ಇರಬೇಕು. ನಾವು ನೋವು ನಲಿವಿನಿಂದ ಬಂದಂತಹ ರೈತರ ವರ್ಗದಿಂದ ಬಂದಿದ್ದೇವೆ. ಜನ ಸಾಮಾನ್ಯರ ಎಲ್ಲಾ ಹುಟ್ಟು ಜಾತಿ, ಕರ್ನಾಟಕ ರಾಜ್ಯದ ಎಲ್ಲಾ ಭಾಗಗಳಿಂದ ಬಂದಿದ್ದೇವೆ. ಬಜೆಟ್‌ನಲ್ಲಿ ಏತಕ್ಕೆ ಮಲೆನಾಡು ಅಭಿವೃದ್ಧಿ ಮಂಡಳಿಯನ್ನು ಕೈಬಿಟ್ಟಿದ್ದೀರೆಂದು ಕೇಳುತ್ತೇನೆ. ನಮ್ಮ ಕಾಲದಲ್ಲಿ ನಾವು ಅನೌನ್ಸ್ ಮಾಡಿದ್ದೆವು. 40 ಕೋಟಿ ರೂಪಾಯಿ ಹಿಂದಿನ ವರ್ಷದ್ದು 1990-91. 10 ಕೋಟಿ ರೂಪಾಯಿ ಬಾಕಿ ಇದ್ದಿದ್ದನ್ನು ನಾವು ಕ್ಯಾರಿ ಓವರ್ ಮಾಡಿದ್ದೇವೆ. ಮಾನ್ಯ ಯಡಿಯೂರಪ್ಪನವರು ನಿನ್ನೆ ಭಾಷಣ ಮಾಡುತ್ತಿದ್ದಾಗ ನನಗೆ ಸಂತೋಷವಾಯಿತು. ಆದರೆ ನಾನು ಅಧ್ಯಕ್ಷರನ್ನು ನೇಮಕ ಮಾಡಲು ಆಗಲಿಲ್ಲ. for so many reasons. ಆದರೆ ಮಂಡಲಿಯ ರಚನೆಯ ಬಗ್ಗೆ ಹೇಳಿದ್ದೇನೆ. inlcuding your own District of South Kanara. ಅದೂ ಕೂಡ ಸೇರಿದೆ. ಬಜೆಟ್‌ನಲ್ಲಿ ನೀವು ಮಲೆನಾಡು ಅಭಿವೃದ್ಧಿ ಆಗಬಾರದೆಂದು ವಿಚಾರ ಮಾಡಿದ್ದೀರಾ? ಅದಕ್ಕೆ ಹಣ ಏತಕ್ಕೆ ತೆಗೆದು ಇಟ್ಟಿಲ್ಲ?

ಶ್ರೀ ಎಂ. ವೀರಪ್ಪ ಮೊಯಿಲಿ : ಮಲೆನಾಡು ಅಭಿವೃದ್ಧಿ ಮಂಡಲಿಗೆ ಬಹುಶಃ 36 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ, ಕೈಬಿಟ್ಟಿಲ್ಲ. ಬಜೆಟ್ ಭಾಷಣದಲ್ಲಿ ಅದು ಬಂದಿಲ್ಲ. ಆದರೆ ಡಾಕ್ಯುಮೆಂಟ್‌ನಲ್ಲಿ ಇದೆ. ಏಕೆಂದರೆ ಈ ಕಾರ್ಯಕ್ರಮ ಹೊಸದಲ್ಲ. ಹೊಸ ಕಾರ್ಯಕ್ರಮವನ್ನು

ಹೆಚ್ಚಾಗಿ ಬಜೆಟ್ ಭಾಷಣದಲ್ಲಿ ಹಾಕುತ್ತೇವೆ. ಹಿಂದಿನ ಕಾರ್ಯಕ್ರಮಕ್ಕೆ ನಾವು ಹಣವನ್ನು ಒದಗಿಸಿದ್ದೇವೆ. ಅದು Continuing work. ಆದರೆ ಅದು ಕೈತಪ್ಪಿಲ್ಲ.

ಶ್ರೀ ಎಸ್ ಬಂಗಾರಪ್ಪ : ನಾನು ಒಂದೇ ಒಂದು ಹೇಳುವುದು. ನಿಮ್ಮ ಮನಸ್ಸಿನಲ್ಲಿ ಅದು ಹುದುಗಿದ್ದರೆ, ಸ್ವಲ್ಪ ಅದನ್ನು ಕೆಣಕಿ ಮೇಲುಗಡೆಗೆ ತಂದರೆ ನಮಗೆ ಅರ್ಥವಾಗುತ್ತದೆ, ಇಲ್ಲದಿದ್ದರೆ ನಮಗೆ ಗೊತ್ತಾಗುವುದಿಲ್ಲ. ನಾನು ಮಾನ್ಯ ಮುಖ್ಯಮಂತ್ರಿಗೆ ಒಂದೇ ಒಂದು ಮಾತನ್ನು ಹೇಳುತ್ತೇನೆ. ನೀವು ಬಜೆಟ್ ಭಾಷಣದಲ್ಲಿ ಒಂದೇ ಒಂದು ವಾಕ್ಯವನ್ನು ಬರೆದುಬಿಡಿ. ಏನೆಂದರೆ, ನೋಡಿ ನಾವು ಯಾವುದನ್ನು ಇಲ್ಲಿ ಬರೆದಿಲ್ಲ ಆ ಹಿಂದಿನವು ಮುಂದುವರಿದಿದೆ ಎಂದು ಎಂದು ವಾಕ್ಯ ಬರೆದಿದ್ದರೂ ನಮಗೆ ಸಾಕಾಗಿತ್ತು. ಕೊನೆಯಪಕ್ಷ ಅಷ್ಟಾದರೂ, ಬರೆಯಬೇಕು ಮಾನ್ಯ ಮೊಯಿಲಿಯವರೆ, ನೀವು ಅದನ್ನು ಕೂಡ ಬರೆಯದಿದ್ದರೆ ಬಹಳ ಕಷ್ಟವಾಗುತ್ತದೆ. ಏನಾಗುತ್ತದೆ ಎಂದರೆ, ನೋಡಿ ಮಲೆನಾಡು ಅಭಿವದ್ಧಿ ಮಂಡಲಿ is now completely given a go-bye, ಎನ್ನತಕ್ಕಂಥ ಅರ್ಥ ಬರುತ್ತದೆ. ನೀವು ಹಣವನ್ನು ಎಷ್ಟಾದರೂ ಇಡಿ. ನಿಮ್ಮ ಕೆಪಾಸಿಟಿ ಕಡಿಮೆ ಆಗುತ್ತದೆ ಎಂದು ಹೇಳಿದ್ದೇನೆ. ಅದರ ಪ್ರಕಾರ ಕೊನೆಯ ಪಕ್ಷ ಹಣವಿಡಿ, ಅಷ್ಟಾದರೂ ಇಡಬೇಕಲ್ಲ, ನೀವು ಅದೂ ಇಡದಿದ್ದರೆ ಗತಿ ಏನಾಗುತ್ತದೆ ಎನ್ನತಕ್ಕ ಮಾತು. ಇನ್ನು ಈ ವರ್ಷ ಇಟ್ಟಿದ್ದೀರಿ ಎಂದು ನನ್ನ ಭಾವನೆ. ದಯವಿಟ್ಟು ಅದಕ್ಕೆ ಅಧ್ಯಕ್ಷರನ್ನು ಮಾಡಿ, ಮಂಡಲಿಯನ್ನು ರಚನೆ ಮಾಡಿ, ಹಣ ಜಾಸ್ತಿ ಬಿಡುಗಡೆ ಮಾಡಿ, ಆ ಭಾಗಗಳು ಅಭಿವೃದ್ಧಿಯಾಗಲಿ, ಅದಕ್ಕೆ ಇಡೀ ಸದನವೇ ನಾವೆಲ್ಲ ಒಕ್ಕೊರಲಿನಿಂದ ಕಾನೂನನ್ನು ಎರಡೂ ಸದನದಲ್ಲಿ ಪಾಸ್ ಮಾಡಿದ್ದೇವೆ ಎನ್ನತಕ್ಕ ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದು ಅಲ್ಲದೆ, ಇನ್ನು ಹಿಂದುಳಿದಿರತಕ್ಕಂತಹ ಪ್ರದೇಶವಾದ ಹೈದರಾಬಾದ್-ಕರ್ನಾಟಕದ ಭಾಗವಾದ ಬೀದರ್, ಗುಲ್ಬರ್ಗ, ರಾಯಚೂರ್, ಬಳ್ಳಾರಿ ಒಳಗೊಂಡಿರತಕ್ಕಂಥ ಭಾಗಕ್ಕೆ..

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ತಾವು ಹಿಂದೆ ಮುಖ್ಯಮಂತ್ರಿಗಳಾಗಿದ್ದಿರಿ, ಅನೇಕ ಸಂಗತಿಗಳು ಗೊತ್ತಿದೆ, ಎನ್‌ಲೈಟ್‌ನ್ ಮಾಡುತ್ತಿದ್ದೀರಿ. ಆದರೆ ಮಾನ್ಯ ವೀರಪ್ಪ ಮೊಯಿಲಿಯವರು ಎದ್ದು ನಿಂತುಕೊಂಡು 36 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂದು ಹೇಳಿದರು ಅದಕ್ಕೆ ತುಂಬ ಸಂತೋಷ ಇಡಿ. ಆದರೆ ನೀವು ತಪ್ಪು ತಿಳಿದುಕೊಳ್ಳದೇ ಇದ್ದರೆ ತಮ್ಮದೇ ಕಾರ್ಯಕ್ರಮ, ಶಿವಮೊಗ್ಗ ಜಿಲ್ಲೆಯವರು, ಮಲೆನಾಡು ಅಭಿವೃದ್ಧಿ ಮಂಡಲಿ ಮಾಡಿದ್ದೀರಿ, ನೀವು ಇದ್ದಾಗ ಎಷ್ಟು ಹಣವನ್ನು ಕೊಟ್ಟಿರಿ, ಎಷ್ಟು ಖರ್ಚು ಮಾಡಿದಿರಿ?

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ಆ ಕಡೆ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್, ಈ ಕಡೆ ಮಲೆನಾಡು ಡೆವಲಪ್‌ಮೆಂಟ್ ಬೋರ್ಡ್ ಇದೆ. ನಮ್ಮ ಗತಿ ಏನು ಸ್ವಾಮಿ? ತುಮಕೂರು, ಬೆಂಗಳೂರು ಬಗ್ಗೆ ದೇವರೇ ಕಾಪಾಡಬೇಕು. ನಮಗೆ ತಿರುಪತಿ ಹತ್ತಿರ ಇದೆ. ನಮ್ಮನ್ನು ತಿರುಪತಿಯ ವೆಂಕಟೇಶ್ವರನೇ ಕಾಪಾಡಬೇಕು.

ಶ್ರೀ ಬಿ.ಹೆಚ್. ಬನ್ನಿಕೋಡ್ : ಇವು ಎರಡಕ್ಕೂ ದುಡ್ಡನ್ನು ಕೊಟ್ಟಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ನಾವು ಮುಖ್ಯಮಂತ್ರಿಗಳಾಗುವುದಕ್ಕೆ ಟ್ರೈ ಮಾಡಬೇಕು.

ಶ್ರೀ ಎಂ. ಮಹದೇವ್ : ನಮ್ಮದು ಪರದಾಟದ ಬೋರ್ಡ್.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಯಡಿಯೂರಪ್ಪನವರಿಗೂ ಹೇಳಿದೆ. ನಾನು

ಉತ್ತರದಲ್ಲಿಯೂ ಕೊಟ್ಟಿದ್ದೇನೆ. ಹಲವಾರು ಕಾರಣಗಳಿಂದ ಅದನ್ನು ಮಾಡಲಿಕ್ಕೆ ಆಗಲಿಲ್ಲ ಎನ್ನುವಂತಹ ಮಾತನ್ನು ನಾನು ಹೇಳಿದ್ದೇನೆ. ತಾವು ಕೂಡ ಅಂದರೆ ತಮ್ಮ ಪಕ್ಷವೂ ಸೇರಿಕೊಂಡಂತೆ ಮೇಲ್ಗಡೆ ಸರ್ಕಾರವನ್ನು ನಡೆಸಿದ್ದೀರಿ. ನೀವು ಎಷ್ಟೋ ಸಾಧನೆಯನ್ನು ಮಾಡಬೇಕೆಂದು ಇದ್ದರೂ ಕೂಡ on account of so many political developments ಒಂದೊಂದು ಸಾರಿ ನೀವು ಮಾಡುವುದಕ್ಕಾಗುವುದಿಲ್ಲ. ಆ ಸಿಸ್ಟಂ ಜೊತೆಗೆ ನಾವೆಲ್ಲ ಇದ್ದೇವೆ ಎನ್ನುವ ಮಾತನ್ನು ಮರೆಯಬಾರದು. ಇವತ್ತು ಹೈದರಾಬಾದ್-ಕರ್ನಾಟಕ ಏರಿಯಾ ಬೀದರ್, ಗುಲ್ಬರ್ಗ, ರಾಯಚೂರು ಮತ್ತು ಬಳ್ಳಾರಿ, ತಮಗೆ ಗೊತ್ತಿರುವ ಹಾಗೆ, I must thank Sri veerendra Patilji. I thinks He had, given 40 crores during 1990-91 budget. ಆಮೇಲೆ ಮತ್ತೆ 10 ಕೋಟಿ ರೂಪಾಯಿಗಳನ್ನು ಕೂಡ ಅವರೇ ಕೊಟ್ಟಿದ್ದರು. ಅವರು ನಿನ್ನೆ ಭಾಷಣದಲ್ಲಿ ಕೂಡ ಹೇಳಿದ್ದಾರೆ. Total 50 crores was meant for 1990-91. ನಾನು ಬಂದಮೇಲೆ ತಮಗೆ ಗೊತ್ತಿರುವ ಹಾಗೆ, 60 ಕೋಟಿ ಈ ವರ್ಷಕ್ಕೆ ಎಂದು ಕಾಣುತ್ತದೆ. 1992-93 ಗೆ 60 ಕೋಟಿ ರೂಪಾಯಿ ನಾವು ಹಣವನ್ನು ಕೊಟ್ಟಿರುವುದು. ಕಡಿಮೆ ಬಿದ್ದರೆ ನಾವು ಮತ್ತೆ ಇನ್ನೊಂದು ಸ್ವಲ್ಪ ಕೊಡುತ್ತೇನೆ ಎಂದು ಎರಡೂ ಸದನಗಳಲ್ಲೂ ಹೇಳಿರತಕ್ಕಂಥ ವಿಚಾರ. ನಾನು ಕೇಳುತ್ತೇನೆ, ಹೈದರಾಬಾದ್-ಕರ್ನಾಟಕಕ್ಕೆ ಎಷ್ಟು ಹಣವನ್ನು ಈ ವರ್ಷ ಇಟ್ಟಿದ್ದೀರಿ? ಪರ್‌ಸೆಂಟೇಜ್ ಆಫ್ ಗ್ರೋಥ್ ರೇಟ್ ಎಲ್ಲಿದೆ ಮತ್ತೆ, ಹಿಂದುಳಿದ ಪ್ರದೇಶಗಳು ಹತ್ತೆಂಟು ನಾವು ಹೇಳುತ್ತಿದ್ದೇವೆ. ಜೊತೆಗೆ ಗಡಿ ಭಾಗದ ಡೆವಲಪ್‌ಮೆಂಟ್ ಅಂದರೆ ಬಾರ್ಡರ್ ಏರಿಯಾ ಡೆವಲಪ್‌ಮೆಂಟ್ ಸ್ಕೀಮ್ಸ್‌ಗೆ ಹಣವನ್ನು ಕೂಡ ಇವತ್ತು ಜಾಸ್ತಿ ಇಡಬೇಕಾಗುತ್ತದೆ. ಪರ್ಸೆಂಟೇಜ್ ಲೆಕ್ಕೆ ಇಡಬೇಕಾಗುತ್ತದೆ. ಅದೂ ಕಡಿಮೆ ಇದೆ. ಹೈದರಾಬಾದ್-ಕರ್ನಾಟಕ ಏರಿಯಾದಲ್ಲಿ ಗ್ರೋಥ್ ರೇಟ್ ಬರುತ್ತಿಲ್ಲ. ಬೀದರ್, ಗುಲ್ಬರ್ಗ, ರಾಯಚೂರು ಬಳ್ಳಾರಿಗೆ ನೀವು ಹಣ ಕೊಡದಿದ್ದರೆ ಆ ಭಾಗಗಳ ಗತಿಯೇನು? ಅದು ಬಾರ್ಡರ್ ಏರಿಯಾ. ಮಾನ್ಯ ವಾಟಾಳ್‌ರವರದೇ ಗಡಿ ಭಾಗ ಇದೆ. ಉದಾಹರಣೆಗೆ ಮೈಸೂರು ಜಿಲ್ಲೆಯ ಬಾರ್ಡರ್ ಏರಿಯಾ ಬರುತ್ತದೆ. ಚಾಮರಾಜನಗರ ಆ ಕಡೆ ಭಾಗದಲ್ಲಿ ಬರುತ್ತದೆ, ಸುತ್ತಮುತ್ತಲೂ ಬರುತ್ತದೆ. ಗೋವಾ ಗಡಿ, ಮತ್ತೊಂದು ಗಡಿ ಇವೆಲ್ಲವೂ ಕೂಡ ಬರುತ್ತದೆ. ಗಡಿ ಭಾಗಳ ಅಭಿವೃದ್ಧಿ ಬಗ್ಗೆ ನೀವು ಜಾಸ್ತಿ ಹಣವನ್ನು ಇಡದಿದ್ದರೆ ನಾಳೆ ಗತಿಯೇನಾಗುತ್ತದೆ? ಇದು ಸ್ಪೆಸಿಫಿಕ್ ಆಗಿರಬೇಕು, ಹಣವನ್ನು ಜಾಸ್ತಿ ಇಡಬೇಕು. ರಿಲೀಸ್ ಮಾಡಬೇಕು. ಅದನ್ನು ಖರ್ಚು ಮಾಡುವುದಕ್ಕೆ ಅವಕಾಶ ಮಾಡಿ ಕೊಡದಿದ್ದರೆ ಜನರಲ್ ಆದ ಭಾಷಣ ಇದರಲ್ಲಿ ಏತಕ್ಕೆ ಬಂದಿದೆ ಗೊತ್ತೇನು? This is nothing but a classic statement of bureaucratc version. It is a classic statement of bureaucratic version. This should not be allowed. I don't want to see such a classic statement of bureaucratic version on the floor of this a august House. ನಾನು ಎಂದೂ ಕೂಡ ಇಷ್ಟ ಪಡುವುದಿಲ್ಲ. ನಾನು ಬ್ಯುರೋಕ್ರಸಿಗೆ ಎಗೆನಸ್ಟ್ ಎನ್ನುವ ಪ್ರಶ್ನೆ ಅಲ್ಲ. ಬ್ಯುರಾಕ್ರಟಿಕ್ ವರ್ಷನ್ ನಮ್ಮ ಹತ್ತಿರ ಬರಕೂಡದು. ಅದನ್ನು ಯಾರೂ ಕೂಡ ಒಪ್ಪುವುದಿಲ್ಲ. ಅಷ್ಟಾದರೂ ಕೂಡ ಅಪ್ಪಿತಪ್ಪಿ ನುಸುಳಿಕೊಂಡು ಬಂದುಬಿಡುತ್ತವೆ. ನಾವು ಅದನ್ನು ತಡೆಹಿಡಿಯಬೇಕು. ಆ ಪದ್ಧತಿ ಎಂದೂ ಕೂಡ ಒಳ್ಳೆಯದಲ್ಲ. ಇವೇ ಥಿಂಕ್ ಟ್ಯಾಂಕ್ ಬರುವುದು. ನೀವು ಥಿಂಕ್ ಟ್ಯಾಂಕ್ ಬಿಡುತ್ತೀರಿ, ಅವು ಸ್ಟಾರ್ಟ್ ಆಗುತ್ತವೆ. ಇದನ್ನು ಬಿಡಬಾರದು ಎನ್ನತಕ್ಕಂಥ ದೃಷ್ಟಿಯಿಂದ ಕೂಡ ನಾನು ಹೇಳಿದ್ದುದು. ಆಮೇಲೆ ನನಗೆ ಗೊತ್ತಿರುವ ಹಾಗೆ ಇದನ್ನು ನೋಡಿದರೆ, ಇದು ultimately this accounts for less diligence and without any

direction and without any proper ahcievement percentage wise also. ನಾಳೆ ಫೇಲ್ ಆಗುತ್ತೀರಿ. ನೀವು ಇರಬಹುದು ಮತ್ತೊಬ್ಬರು ಇರಬಹುದು, ಯಾರಿದ್ದರೂ ಕೂಡ All of us are accountable for all thes things ನಾಳೆ ಗತಿಯೇನಾಗುತತದೆ ಎನ್ನತಕ್ಕಂಥ ದೃಷ್ಟಿಯಿಂದ ಈ ಮಾತನ್ನು ನಾನು ಹೇಳಿದ್ದೇನೆ. ನನ್ನ ಮೇಲೆ ಹೇಳಿದರು ಆ ಲಾಬಿ ಈ ಲಾಬಿ ಎಂದರು. ನಾನು ಕೇಳಿತ್ತಿದ್ದೇನೆ. ಇವತ್ತು ಇವೆಲ್ಲಾ ಕಂಪ್ಲೀಟ್ ಆಗಿ ಬಿದ್ದುಹೋಗಿರುವುದರಿಂದ ನೀವೆಲ್ಲ ಟ್ಯಕ್ಸೇಸಸ್ ಲಾಬಿಗೆ ಒಳಗಾಗಿದ್ದೀರಾ ಎನ್ನತಕ್ಕಂಥ ಪ್ರಶ್ನೆಯನ್ನು ನಾನು ಕೇಳುತ್ತಿದ್ದೇನೆ. ನನ್ನ ಕಾಲದಲ್ಲಿ ಎಕ್ಸೈಜ್ revenue, upward trend again. ನಾನು ಅಂಕಿಅಂಶ ಕೊಟ್ಟಿದ್ದೇನೆ. ಎಕ್ಸೈಜ್ ವಿಚಾರಕ್ಕೆ ನಾನು ಆಮೇಲೆ ಬರುತ್ತೇನೆ. ಇವತ್ತು ಏನಾಗಿದೆ, ಟ್ಯಾಕ್ಸೇಷನ್ ಲಾಬಿಗೆ ತಲೆಬಾಗಿದ್ದೀರಾ, ಹಾಗಾದರೆ ಏತಕ್ಕೆ ಕಲೆಕ್ಷನ್ ಆಗಿಲ್ಲ? ಇವತ್ತು ಸ್ಟೇಟ್ ರೆವಿನ್ಯೂಸ್ ಗತಿ ಏನಾಗುತ್ತದೆ ಎನ್ನತಕ್ಕಂಥ ದೃಷ್ಟಿಯಿಂದ ಈ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಆಮೇಲೆ ನನಗೆ ಇನ್ನೊಂದು ಅರ್ಥವಾಗಲಿಲ್ಲ. for paucity of funds, I cannot understand why did you take Rs. 50 crore as advance from the Government of India. ನಾನು ನನ್ನ ಕಾಲದಲ್ಲಿ ಅಡ್ವಾನ್ಸ್ ತೆಗೆದುಕೊಂಡಿದ್ದೇನೆಯೇ? ದಯವಿಟ್ಟು ಸ್ವಲ್ಪ ತೆಗೆದುನೋಡಿ. ಪೇಪರ್ಸ್ ತೆಗೆದುನೋಡಿ. ಏತಕ್ಕೆ ನೀವು 50 ಕೋಟಿ ರೂಪಾಯಿ ಅಡ್ವಾನ್ಸ್ ತೆಗೆದುಕೊಂಡಿದ್ದು? that shows the instability of the financial affairs of the State. ಅದನ್ನು ಎಂದೂ ಕೂಡ ಮಾಡಬಾರದು. ನೀವು ಟ್ಯಾಕ್ಸೇಷನ್ ಕಲೆಕ್ಷನ್ ವಿಚಾರದಲ್ಲೂ ಕೂಡ ಅಡ್ವಾನ್ಸ್ ಟ್ಯಾಕ್ಸ್ ಕಲೆಕ್ಟ್ ಮಾಡಬಾರದು. ಏಕೆಂದರೆ ಮುಂದಿನ ವರ್ಷಕ್ಕೆ ಅಂದರೆ 1993-94ಕ್ಕೆ ಅದು ಪೆಟ್ಟು ಬೀಳುತ್ತದೆ. I had givn a specific direction to the Officers not to collect advance taxes, ಏಕೆಂದರೆ ಮುಂದಿನ ವರ್ಷ ಬ್ಯಾಲೆನ್ಸ್ ಮಾಡುವುದಕ್ಕೆ ಬರುವುದಿಲ್ಲ ಎನ್ನತಕ್ಕಂಥ ದಷ್ಟಿಯಿಂದ. ನೀವು 50 ಕೋಟಿ ಅಡ್ವಾನ್ಸ್ ತೆಗೆದುಕೊಳ್ಳುವುದರಿಂದ ಕೊನೆಗೆ ಗತಿಯೇನಾಗುತ್ತದೆ ಎನ್ನುವುದನ್ನು ವಿಚಾರ ಮಾಡಿದ್ದೀರಾ? ನೀವು ಹೇಳಬಹುದು, ನೋಡಿ 6-7 ಜಿಲ್ಲೆಗಳಲ್ಲಿ ನಮಗೆ ಮಳೆ ಪ್ರವಾಹ ಬಂತು, ಧಾರವಾಡ ಜಿಲ್ಲೆ,ರಾಯಚೂರು, ಬಳ್ಳಾರಿ, ಶಿವಮೊಗ್ಗ, ಚಿಕ್ಕಮಗಳೂರು, ಸೌತ್ ಕೆನರಾ, ಕಾರವಾರ ಇತ್ಯಾದಿ ಜಿಲ್ಲೆಯಲ್ಲಿ ಬಂತು, ನಮಗೆ ಹಣ ಬೇಕಾಗಿತ್ತು ಎನ್ನತಕ್ಕಂಥ ದೃಷ್ಟಿಯಿಂದ ಹೇಳಹುದು. ನನಗನ್ನಿಸುತ್ತದೆ, I was heading the Care-Taker Government then. ನಾನು ರಾಜೀನಾಮೆಯನ್ನು 10-11ನೇ ತಾರಿಖಿಗೂ ಕೊಟ್ಟೆ. 20 ನೇ ತಾರೀಖಿನವರೆಗೂ ಕೇರ್ ಟೇಕರ್ ಗೌರ್ನಮೆಂಟ್‌ನ ಮುಖ್ಯಮಂತ್ರಿಯಾಗಿದ್ದೆ. ನಾನು ರಾಜೀನಾಮೆ ಕೊಟ್ಟಮೇಲೆ ಆ ಕಾಲದಲ್ಲೇ ಪ್ರವಾಹ ಬಿತ್ತು. ನಾನು ಈಗ ಮೂರವರೆ ಕೋಟಿ ಅಥವಾ ನಾಲ್ಕು ಕೋಟಿ ರೂಪಾಯಿ ಇಮ್ಮಡಿಯೇಟ್ ಆಗಿ ರಿಲೀಸ್ ಮಾಡಿದೆ. ಅದು ಇನ್ನೂ ಕೂಡ ವರದಿ ಬರುತ್ತಾ ಇತ್ತು. ಡ್ಯಾಮೇಜ್ ಎಷ್ಟು, ಏನು ಎಂದು ನನಗೆ ಐಡಿಯಾ ಬರುತ್ತಾ ಇರಲಿಲ್ಲ. ಎಲ್ಲಾ ಜಿಲ್ಲೆಗಳಲ್ಲೂ ಬರುತ್ತಾ ಇತ್ತು. ಮೂರು, ಮೂರೂವರೆ ಕೋಟಿ ರೂಪಾಯಿ ಕೊಟ್ಟಿದ್ದೆವು. ನೀವು ಕೇಂದ್ರದ ಹಣ ತೆಗೆದುಕೊಳ್ಳುತೇವೆಂದು ಹೇಳಿದ್ದೀರಲ್ಲ ಸ್ವಾಮಿ, ಇದೇ ಹಣವೇ 50 ಕೋಟಿ ರೂಪಾಯಿ advance by Government of India. I cannot understand your approach. ಇದು ಎಂದೂ ಕೂಡ ಒಳ್ಳೆಯದಲ್ಲ. ಗವರ್ನಮೆಂಟ್ ಆಫ್ ಇಂಡಿಯಾದವರು ನಮಗೆ ಸಹಾಯ ಮಾಡತಕ್ಕದ್ದು ಅವರ ಪ್ರೋಗ್ರಾಮ್ ಪ್ರಕಾರ ಎಷ್ಟು ಎನ್ನುವುದನ್ನು ನೀವು ನಮಗೆ ಹೇಳಿ. 50 ಕೋಟಿ ರೂಪಾಯಿ ತೆಗೆದುಕೊಂಡು ಇವರಿಗೆ ಮಾಡಿದರೆ ನಾಳೆ ನೆಕ್ಸ್ಟ್ ಇಯರ್ ನಿಮ್ಮ ಪ್ಲಾನ್ ಸೈಜಿಗೆ ಪೆಟ್ಟಾಗುತ್ತದೆ ಎನ್ನತಕ್ಕ ಮಾತನ್ನು ದಯವಿಟ್ಟು ಮರೆಯಬೇಡಿ. ಇದು ನಾವು ಮುಖ್ಯವಾಗಿ ನೋಡತಕ್ಕ ವಿಚಾರ. ಆಮೇಲೆ ನೀವು

ಯಾವಾಗಲೂ ಕೂಡ ಅಧಿಕಾರ ವಹಿಸಿಕೊಂಡ ಮೇಲೆ ಅಧಿಕಾರಿಗಳು it is your choice. After all, you are the administrator. ನೀವು ಯಾರನ್ನು ಇಷ್ಟ ಬಂದರೂ ಹಾಕಿಕೊಳ್ಳಿ. ನಾನು ಆಗ ಇಷ್ಟ ಬಂದವರನ್ನು ಹಾಕಿಕೊಂಡೆ, ನೀವೂ ಹಾಕಿಕೊಳ್ಳಿ. ನಾಳೆ ನೀವು ಬಂದರೆ ಅದೇ ಮಾಡಿತ್ತೀರಿ, ನಾಳೆ ಮತ್ತೊಬ್ಬರು ಬಂದರೆ ಅವರಿಗೆ ಇಷ್ಟಬಂದವರನ್ನು ಹಾಕಿಕೊಳ್ಳುತ್ತಾರೆ. ನನಗೆಲ್ಲಾ ಗೊತ್ತಿದೆ, ನಮಗೆಲ್ಲರಿಗೂ ಗೊತ್ತಿರುವಂತಹ ವಿಚಾರ. ನನಗೆ ಅದರದ್ದಲ್ಲ. ಆದರೆ ಹಾಕಬೇಕಾದರೆ ರೆವಿನ್ಯೂಸ್ ಅಂಡ್ ಎಕ್ಸ್‌ಪೆಂಡಿಚರ್. ಎಕ್ಸ್‌ಪೆಂಡಿಚರ್ ಕೂಡ It should yield the economic growth. ಅದಕ್ಕೆ ಅಕೌಂಟ್ ಮಾಡತಕ್ಕ ಎಕ್ಸ್‌ಪೆಂಡಿಚರ್ ಕಡಿಮೆ ಕೊಡತಕ್ಕ ಅಧಿಕಾರಿಗಳನ್ನು ನಾವು ಯಾವಾಗಲೂ ಇಟ್ಟುಕೊಳ್ಳಬೇಕು. ಆಸ್ಟೆರಿಟೀಸ್ ಮೆಷರ್ಸ್ ಬಗ್ಗೆ ಫೈಲ್ ತೆಗೆಸಿ ನೋಡಿ ನಾನೇ ಆರ್ಡರ್ ಮಾಡಿದ್ದೆ. ಉದಾಹರಣೆಗೆ ಕರ್ನಾಟಕ ಪವರ್ ಕಾರ್ಪೊರೇಷನ್. Though it is th company constituted under the Companies law, of which the Chairman is the Chief Minister himself, ಅಲ್ಲಿ ಅಡಿಷನಲ್ ಪೋಸ್ಟ್ ಆಗಿ Chief Engineer ಬೇಡ ಎಂದು ನಾನೇ ಬರೆದು ಬಿಸಾಕಿದ್ದೇನೆ. ಏಕೆಂದರೆ, ಆಸ್ಟೆರಿಟೀಸ್ ಮೆಷರ್ಸ್ ಬಗ್ಗೆ ಗವರ್ನಮೆಂಟ್ ಆಫ್ ಇಂಡಿಯಾ ಗೈಡ್‌ಲೈನ್ಸ್ ಕೊಟ್ಟು ನಾವೆಲ್ಲ ಸರ್ಕಾರದವರು ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿದ್ದೇವೆ. ಇಲ್ಲಿ ಅಸೆಂಬ್ಲಿಯಲ್ಲಿ ಕೂಡ ಹೇಳಿರತಕ್ಕ ವಿಚಾರ ಇದೆ. ಅದೇ ರೀತಿಯಾಗಿ ಪಿಡಬ್ಲ್ಯುಡಿನಲ್ಲಿ ಕೂಡ ಇಷ್ಟು ಚೀಫ್ ಇಂಜಿನಿಯರ್ಸ್ ಏಕೆ? ಹೊಸದಾಗಿ ಅಡಿಷನಲ್ ಪೋಸ್ಟ್ ಫಿಲಪ್ ಮಾಡುವುದು ಬೇಡ ಎಂದು ನಾನೇ ಫೈಲ್‌ನಲ್ಲಿ ಬರೆದ್ದಿದ್ದೇನೆ. ಇರುವವರೇ ಸಾಕು ಎಂದು ಹೇಳಿದ್ದೇನೆ. ನಾವು ಇದನ್ನು ಮಾಡುತ್ತಾ ಹೋಗೋಣ, ರೆವಿನ್ಯೂ ಜಾಸ್ತಿ ಮಾಡಿಕೊಳ್ಳೋಣ, ಎಕ್ಸೆಪೆಂಡಿಚರ್ ಕಡಿಮೆ ಮಾಡೋಣ. ಇರುವ ಎಕ್ಸ್‌ಪೆಂಡಿಚರ್ ಹಣವನ್ನು ಡೆವಲಪ್‌ಮೆಂಟ್‌ಲ್ ಆಕ್ಟಿವಿಟೀಸ್‌ಗೆ ಹಾಕೋಣ, We should afford for economic growth. ಎನ್ನತಕ್ಕ ವಿಚಾರವನ್ನು ಕೂಡ ಇಟ್ಟು ಹೇಳಿದ್ದೇನೆ. ಆದರೆ ನನಗೆ ಆ ವಿಚಾರ ಕಾಣುತ್ತಾ ಇಲ್ಲ. ನೀವು ಅನೇಕ ಜನ ಆಫೀಸರ್ಸನ್ನು ವರ್ಗ ಮಾಡಿದರೂ ಕೂಡ the yield is either it is in the form of negative or no result at all on the positive side or the plus side. ಇದು ಏಕೆ ಬರುತ್ತಾ ಇಲ್ಲ. ಹಾಗಿದ್ದರೆ ಅಧಿಕಾರಿಗಳನ್ನು ಏಕೆ ವರ್ಗಾವಣೆ ಮಾಡಬೇಕು. ಅಧಿಕಾರಿಗಳನ್ನು ವರ್ಗಾವಣೆ ಮಾಡುತ್ತೀರೋ ನಮಗೆ ಯಿಲ್ಡ್ ಈ ರೀತಿ ಬರಬೇಕು. ಆ net ರಿಸಲ್ಟ್ ನಮಗೆ ಬರಬೇಕು. ಇಲ್ಲದೇ ಇದ್ದರೆ for some other reason, transfer has taken place ಎನ್ನುವ ತೀರ್ಮಾನಕ್ಕೆ ನಾವು ಅನಿವಾರ್ಯವಾಗಿ ಬರಬೇಕಾಗುತ್ತದೆ.

ಛೇರ್ಮನ್ : 40 ನಿಮಿಷ ಜಾಸ್ತಿ ಆಯಿತು. You have taken 40 minutes more than the time allotted. Please complete by 10 minutes.

Sri S. Bangarappa : I am sorry, Madam, I don't think I can complete this. Better I stop there. I am sorry, I cannot. ಏಕೆಂದರೆ, ನಾನು ಇನ್ನೂ ಇರಿಗೇಷನ್ ಪವರ್ ಬಗ್ಗೆ ಮಾತನಾಡಬೇಕು.

ಛೇರ್ಮನ್ : ಆದಷ್ಟು ಬೇಗ ಮುಗಿಸಿ.

Sri S. Bangarappa : I am sorry. ಬೇಡ ಎಂದರೆ ಬೇಡ ಬಿಡಿ. I don't want to

take the precious time of the other Hon. Members. ಬೇರೆ ಮಾನ್ಯ ಸದಸ್ಯರ ಸಮಯವನ್ನು ತೆಗೆದುಕೊಳ್ಳಬೇಕೆಂದು ನನಗೆ ಆಸೆ ಇಲ್ಲ. ಅಷ್ಟಕ್ಕೆ ಕ್ಲೋಸ್ ಮಾಡಿಬಿಡುತ್ತೇನೆ. ಕ್ಷಮಿಸಿ ನಾನು ಜಾಸ್ತಿ ಸಮಯ ತೆಗೆದುಕೊಳ್ಳುತ್ತೇನೆ. ಹೋಗಲಿ ಬೇರೆ ಬೇರೆ ದಿವಸ ನಾನು ಮಾತನಾಡಿದರೆ ಎಷ್ಟು ಟೈಮ್ ತೆಗೆದುಕೊಳ್ಳುತ್ತಿದ್ದೆ ಅದನ್ನೆಲ್ಲಾ ಟೋಟಲ್ ಮಾಡಿ ಕೊಟ್ಟು ಬಿಡಿ.

ಛೇರ್ಮನ್ : ಆಯಿತು, ಆದಷ್ಟು ಬೇಗ ಮುಗಿಸಿ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ನಾನು ತಮ್ಮ ಗಮನಕ್ಕೆ ತರುವ ಹಾಗಿದ್ದರೆ ಪವರ್ ಜನರೇಷನ್‌ಗೆ ಬಜೆಟ್ ಅಲೋಕೇಷನ್ ಮಾಡಿರುವ ಬಗ್ಗೆ ನಾನು ಹೇಳುವುದು ಬಹಳ ಒಳ್ಳೆಯದು. 1990-91 ರಲ್ಲಿ 270 ಕೋಟಿ, 1991-92ರಲ್ಲಿ 373 ಕೋಟಿ. 1992-93ರಲ್ಲಿ 495 ಪ್ಲಸ್ 89 ಕೋಟಿ. 89 ಏಕೆಂದರೆ ಪವರ್ ಬಗ್ಗೆ ಕೆಇಬಿಗೆ ಕೂಡ ಹಣ ನಾವು ಕೊಟ್ಟಿದ್ದೇವೆ. 120 ಕೋಟಿ ರೂಪಾಯಿ ಹಣ ಕೆಇಬಿಗೆ ಕೊಟ್ಟಿದ್ದೇವೆ. Because K.E.B. always runs under loss. ಅದನ್ನು ಶಕ್ತಿಯುತವಾಗಿ ಮಾಡದಿದ್ದರೆ IP sets energisation ಮತ್ತೊಂದು ಮಾಡುವುದಕ್ಕೆ ನಮಗೆ ಒಬ್ಬರಿಗೂ ಸಾಧ್ಯವಾಗುತ್ತಿರಲಿಲ್ಲ. ಆ ಶಕ್ತಿ ತೆಗೆದುಕೊಂಡು ಹೋಯಿತು? ನಮಗೆ ಹಣ ಎಲ್ಲಿಂದ ಬಂತು ಎಂದರೆ ಕಮರ್ಷಿಯಲ್ ಟ್ಯಾಕ್ಸಸ್ ಮತ್ತು ಇತರ ಕಡೆಯಿಂದ ನಮಗೆಲ್ಲಾ ಬರಲು ಸಾಧ್ಯವಾಯಿತು. 1993-94ರ ಬಜೆಟ್ ಸ್ಪೀಚ್‌ನಲ್ಲಿ ತಾವು ಹೇಳಿದ್ದೀರಿ. ನಾನೇ ಪ್ಲಾನಿಂಗ್ ಕಮಿಷನ್ ಮುಂದೆ ಫಿಕ್ಸ್ ಮಾಡಿದ್ದುದು. 699 ಕೋಟಿ ರೂಪಾಯಿ ಅಂದರೆ ಒಂದು ಕೋಟಿ ರೂಪಾಯಿ ಕಡಿಮೆ 700 ಕೋಟಿ ರೂಪಾಯಿಗಳು. ಅಂದರೆ ನೀವು ಗ್ರೋತ್ ರೇಟ್ ನೋಡಿಕೊಳ್ಳಿ. ಆದರೆ ಇದರಲ್ಲಿ 89 crores was given to KEB during February and March, 1992 so as to enable KEB to get World Bank assistance also. ತೆಗೆದುಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಮಾಡಿದ್ದೇವೆ. ನಾನು ಒಂದು ವಿಷಯ ಕೇಳುತ್ತೇನೆ. ಸಮಾಜದಲ್ಲಿ ತುಳಿತಕ್ಕೆ ಸಿಕ್ಕಿರತಕ್ಕ ಹರಿಜನ ಕೇರಿಗಳು, ಮತ್ತೊಂದು ಅವರಿಗೆಲ್ಲಾ ದೀಪ ಕೊಡಬೇಕು ಎನ್ನುವ ದೃಷ್ಟಿಯಿಂದ, ಬಡವರಿಗೆ ಕೊಡಬೇಕು ಎಂಬ ದೃಷ್ಟಿಯಿಂದ ಮಾನ್ಯ ವಿಧಾನ ಸಭಾ ಸದಸ್ಯರ ಕ್ಷೇತ್ರಗಳು ಯಾವುದೇ ಪಕ್ಷ ಇರಬಹುದು ನಾನೇ ಅನೌನ್ಸ್ ಮಾಡಿದೆ. ಆ ಕಾಲದಲ್ಲಿ ಸುಮಾರು 11-12 ಕೋಟಿ ರೂಪಾಯಿಗಳಷ್ಟು ಖರ್ಚಾಗಬಹುದೆಂದು ಅಂದಾಜು ಮಾಡಿದ್ದೆ. ನಾನು ಮೊದಲ ಬಾರಿಗೆ ಪ್ರತಿ ಮತ ಕ್ಷೇತ್ರಕ್ಕೆ ಒಂದು ಸಾವಿರ ಭಾಗ್ಯಜ್ಯೋತಿ ದೀಪಗಳನ್ನು ಮಂಜೂರು ಮಾಡಿದೆ. 1,000 per constituency-it is not per taluk. That is what I said. The work that is now going on till the end of the financial year up to March. ತಮಗೆ ಗೊತ್ತಿರುವಂತೆ ಮೊದಲು ಎಷ್ಟಿತ್ತು? 200, 250, 300 ಹೀಗೆಲ್ಲಾ ತೆಗೆದುಕೊಳ್ಳುತ್ತಿದ್ದರು. I must recall the great man ನಿಜ ಹೇಳಬೇಕೆಂದರೆ, ಭಾಗಜ್ಯೋತಿ ಬಡವರ ಭಾಗ್ಯ. ಈ ಸಂದರ್ಭದಲ್ಲಿ ನಾನು ದಿವಂಗತ ದೇವರಾಜು ಅರಸುರವರನ್ನು ನೆನೆಸಿಕೊಳ್ಳಬೇಕು. ಸಮಾಜದ ತುಳಿತಕ್ಕೆ ಸಿಲುಕಿದ ವರ್ಗಗಳ ಬಗ್ಗೆ ಅವರಿಗೆ ಕರುಣೆ, ಅನುಕಂಪ ಇತ್ತು. ಈ 'ಭಾಗ್ಯಜ್ಯೋತಿ' ಯೋಜನೆ ಅವರ ಕಾಲದಲ್ಲಿ ಪ್ರಾರಂಭವಾಯಿತೆಂದು ಕಾಣುತ್ತದೆ. Of course, Cauvery basin can never forget late Devaraj Urs. ಅದನ್ನು ಇನ್ನೂ ಕೂಡ ನಾವು ಅಂಡರ್ ನಾನ್ ಪ್ಲಾನ್ ತೆಗೆದುಕೊಳ್ಳುತ್ತಿದ್ದೇವೆ. ಏಕೆಂದರೆ, ನಮಗೂ ನೆರೆ ಹೊರೆ ರಾಜ್ಯಗಳವರಿಗೂ ಜಗಳವಾಗಿದೆ. ನಾನು ಆ ವಿವರಗಳಿಗೆ ಹೋಗುವುದಿಲ್ಲ. ಆದರೆ, ಧೈರ್ಯದಿಂದ ಕೆಲಸ ಮಾಡಿದ ದಿವಂಗತ ದೇವರಾಜ

ಅರಸುರವರಿಗೆ ನಾನು ಎಷ್ಟು ಅಭಿನಂದಿಸಿದರೂ ಸಾಲದು. Either for power generation or for irrigation and the upliftment of the poorer lot of the oppressed and suppressed classes of the society. ಬಹಳ ಮೆಚ್ಚತಕ್ಕಂಥ ರೀತಿಯಲ್ಲಿ ಅವರು ಮಾಡಿದ್ದರು. ಎಲ್ಲಾ ಜಾತಿಯ ಬಡವರ ಬಗ್ಗೆ ಕೂಡ ಗಮನ ಕೊಡತಕ್ಕಂಥ ವಿಚಾರಧಾರೆ ಅವರಲ್ಲಿತ್ತು. ತಮಗೆ ಗೊತ್ತಿರುವಂತೆ, ನಾನು ಐ.ಪಿ. ಸೆಟ್‌ಗಳಿಗೆ ಪವರ್ ಜನರೇಷನ್ ಮಾಡುವ ಕಾರ್ಯವನ್ನು ಕೈಗೆತ್ತಿಕೊಂಡಾಗ 1990-91ನೇ ಸಾಲಿನಲ್ಲಿ 40,000 was the target. ಹೊಸ ಐ.ಪಿ. ಸೆಟ್‌ಗಳಿಗೆ ವಿದ್ಯುದ್ದೀಕರಣ ಮಾಡಬೇಕಾದರೆ 100 ಕಂಬಗಳ ಮೇಲೆ ಹೋಗಬಾರದೆಂದು ಇತ್ತು. I removed that. I said 'Go up to 7 times." ಕೆಇಬಿಗೆ ಹಣ ಕೊಡುತ್ತೇವೆಂದು ಶಾಸನ ಸಭೆಯಲ್ಲೂ ಸಹ ನಾನು ಹೇಳಿದ್ದೇನೆ. ಅದೇ ರೀತಿ ಹಣ ಕೊಟ್ಟಿದ್ದೇವೆ. ತಮಗೆ ಗೊತ್ತಿದೆ, ಕಂಪ್ಲೇಂಟ್ಸ್ ಕಡಿಮೆಯಾಗಬಹುದಜು, ಕೆಲವು ಪ್ರದೇಶಗಳಲ್ಲಿ ವಿದ್ಯುತ್ ನಿಂತುಹೋಗಬಹುದು. ನಾನು 1990-91ನೇ ಸಾಲಿನಲ್ಲಿ 60,000 ಟಾರ್ಗೆಟ್‌ವರೆಗೆ ಏರಿಸಿದ್ದೇವೆ. ಆಗ ನರಸಿಂಹಮೂರ್ತಿ ಎನ್ನುವವರು ಕೆಇಬಿಯ ಅಧ್ಯಕ್ಷರಾಗಿದ್ದರು. ನಿಜ ಹೇಳಬೇಕೆಂದರೆ, Hats off to that gentleman. ಆ ಮನುಷ್ಯ ಹಗಲು-ರಾತ್ರಿ ದುಡಿಯುತ್ತಿದ್ದರು. ಈಗ ಅವರನ್ನು ಅಲ್ಲಿಂದ ತೆಗೆದು ಹಾಕಿದ್ದೀರಿ, ಅದರ ಬಗ್ಗೆ ನಾನು ಕಾಮೆಂಟ್ಸ್ ಮಾಡುವುದಿಲ್ಲ. ಅಲ್ಲಿಗೆ ಬಂದಿರುವ ಇನ್ನೊಬ್ಬರು ಒಳ್ಳೆಯವರು ಇರಬಹುದು. ಅವರು 72,000 ಅಥವಾ 74,000 ಮಾಡಿಕೊಟ್ಟಿದ್ದಾರೆ, though the revised target that was fixed by me was 60,000 ಒಬ್ಬ ಅಧಿಕಾರಿ ಇದ್ದರೆ ಅವರಂತೆ ಇರಬೇಕು, ಅವರ ಹಾಗೆ ನುಗ್ಗಬೇಕು. Hats off to that gentleman. He was the retired Chief Engineer in the KEB. ಅಲ್ಲದೆ, ಆ ಮನುಷ್ಯನಿಗೆ ಒಳ್ಳೆಯ ಅನುಭವ fore-thought ಕೂಡ ಇತ್ತು. ಸಿಕ್ಕಾಪಟ್ಟೆ ದೂರು ನೀಡುತ್ತಿದ್ದರು. ಈಗ ಅದರ ಬಗ್ಗೆ ನನ್ನ ಹತ್ತಿರ ಮಾಹಿತಿ ಇದೆ. ಬೇಕಾದರೆ ನಿಮಗೆ ತೋರಿಸುತ್ತೇನೆ. ಆದರೆ, ಈಗ ಸಮಯಾಭಾವವಿರುವುದರಿಂದ ತೋರಿಸುವುದಕ್ಕಾಗುವುದಿಲ್ಲ. Completely it is dropped now. ನಿಜ ಹೇಳಬೇಕೆಂದರೆ, ಮೊನ್ನೆ ದಿವಸ ಉಪ ಮುಖ್ಯಮಂತ್ರಿಗಳಾದ ಕೃಷ್ಣಾಜಿಯವರು-ನಾವು ಸೇರತಕ್ಕಂಥ ಕಾಲದಲ್ಲಿ ಮಾತನಾಡಬೇಕಾದರೆ, he is giving a lot of attention. I must thank the Hon. Deputy Chief Minister Krishnaji. ಅವರು ಗಮನ ಕೊಟ್ಟು, ಪಂಪುಸೆಟ್ಟುಗಳಿಗೆ ವಿದ್ಯುದ್ದೀಕರಣ ಜಾಸ್ತಿ ಮಾಡುತ್ತಾ ಹೋಗಬೇಕು. ಏಕೆಂದರೆ, ರಾಜ್ಯದ ಅನೇಕ ಭಾಗಗಳಲ್ಲಿ ಬರಗಾಲಕ್ಕೆ ತುತ್ತಾಗಿರತಕ್ಕಂಥ ಪ್ರದೇಶಗಳಿವೆ. ನಾವು ರೈತರ ಪಂಪುಸೆಟ್ಟುಗಳಿಗೆ ವಿದ್ಯುದ್ದೀಕರಣ ಮಾಡದಿದ್ದರೆ ಅವರ ಗತಿ ಏನಾಗುತ್ತದೆ? ಬರಿ ಪೋಲ್ಸ್ ಹಾಕೊಂಡು ಕುಳಿತರೆ ಯಾರೂ ಕೂಡ ಮಾಡುವುದಕ್ಕಾಗುವುದಿಲ್ಲ. ಈ ಸಂದರ್ಭದಲ್ಲಿ ಇದರ ಬಗ್ಗೆ ನಾನು ಒಂದು ಸಲಹೆ ಕೊಡುತ್ತೇನೆ. ಏನೆಂದರೆ, ಕೆಇಬಿಗೆ ಹಣದ ಕೊರತೆ ಇದ್ದರೆ ಹಣ ಕೊಡಿ, ನೀವು ಹೆದರಬೇಡಿ. ಆ ರೀತಿ ಕೊಟ್ಟಂಥ ಹಣವನ್ನು ನೀವು ಫಂಡ್ ಪ್ರೊಡಕ್ಷನ್‌ನಿಂದ ರಿಕವರ್ ಮಾಡುತ್ತೀರಿ. ಆದರೆ, ರೈತರ ವಿಚಾರದಲ್ಲಿ ಮಾತ್ರ ನಾನು ಆಗಲೇ ಹೇಳಿದಂತೆ ನನ್ನ ಕಮಿಟ್‌ಮೆಂಟ್ ಇದೆ. ನಾನು ಈ ಸಂದರ್ಭದಲ್ಲಿ ಒಬ್ಬ ರೈತನ ಮಗನಾಗಿ ಮಾತನಾಡತಕ್ಕಂಥ ವಿಚಾರವೇನೆಂದರೆ, ನಾವು ಐಪಿ ಸೆಟ್‌ಗಳಿಗೆ ಉಚಿತವಾಗಿ ವಿದ್ಯುತ್ ಸರಬರಾಜನ್ನು ಮಾಡಿದ್ದೇವೆ. Free power supply up to 10 H.P. ನಾವು ಮಾಡಿರುವ ಉದ್ದೇಶ ಏನು. Though there was a letter addressed to the State Government by the Government of India to charge at the rate of 50 paise

per unit or so, ಒಂದು ಯೂನಿಟ್‌ಗೆ 50 ಪೈಸೆ ಎಂದು ಬಂದರೂ ಕೂಡ I said "No". ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಮೀಟಿಂಗ್‌ನಲ್ಲಿ ಮತ್ತು ವಿದ್ಯುತ್ ಸಚಿವರ ಸಭೆಯಲ್ಲಿಯೂ ಸಹ ಇದನ್ನು ಮಾಡುವುದಕ್ಕಾಗುವುದಿಲ್ಲವೆಂದು ನಾನು ಹೇಳಿದ್ದೇನೆ. ಏಕೆಂದರೆ ರೈತರು ಸುಸ್ತಾಗಿದ್ದಾರೆ, ಅದನ್ನು ಮಾಡುವುದಕ್ಕಾಗುವುದಿಲ್ಲ. ಆಗ 5 ಹೆಚ್‌ಪಿವರೆಗೂ ಕೂಡ ಕೆಲವು ರಿಯಾಯಿತಿ ಅರ್ಧಂಬರ್ಧವಿತ್ತು. I said better you take up the decision to remove all the barriers, that will come in the way of poor farmers. ಎನ್ನತಕ್ಕಂಥ ದೃಷ್ಟಿಯಿಂದ ಮಾಡಿದೆ. ಆದದರೆ, ನಾವು 10 ಹೆಚ್‌ಪಿವರೆಗೆ, ಶಕ್ತಿವಂತರಿಗೆ ಕೊಟ್ಟಿದ್ದೇವೆ ಎಂಬ ಮಾತನ್ನು ಯಾರಾದರೂ ಆಡಿದರೆ ಕ್ಷಮಿಸಬೇಕು. He contributes much for the food production on the food front. ಅದು ರೈತರ ವಿಚಾರವಾದುದರಿಂದ, ಸಣ್ಣವರು, ದೊಡ್ಡವರು ಎಂದು ಏನು ಮಾಡುವುದಕ್ಕೂ ಹೋಗಬೇಡಿ. ಇದರ ಬಗ್ಗೆ ಸ್ಪಷ್ಟವಾದ ಅಭಿಪ್ರಾಯ ಇಟ್ಟುಕೊಂಡಿದ್ದೇವೆ. Herarchy in the farming community ಏನಿದೆ, I have studied that. ನಾನು ನೋಡಿಯೇ ಈ ಮಾತನ್ನು ಹೇಳುತ್ತಿದ್ದೇನೆ. ಅದಕ್ಕಾಗಿ 10 ಹೆಚ್‌ಪಿವರೆಗೆ ನಾವು ಉಚಿತವಾಗಿ ಇಟ್ಟಿದ್ದೇವೆ. ನಾನು ಒಂದು ಮಾತನ್ನು ಕೇಳಬಯಸುತ್ತೇನೆ. ಮಾನ್ಯ ಉಪ ಮುಖ್ಯ ಮಂತ್ರಿಗಳಾದ ಕೃಷ್ಣಾರವರು ಮೊನ್ನೆ ಉತ್ತರವನ್ನು ಕೊಡುವಾಗ ಹೇಳಿದ್ದಾರೆ. 10 ಹೆಚ್‌ಪಿವರೆಗೆ ನಾವು ಏನು ಪವರ್ ಸಪ್ಲೈಯನ್ನು ಫ್ರೀಆಗಿ ಕೊಡುತ್ತಿದ್ದೇವೆ ಅದನ್ನು ಸದ್ಯಕ್ಕಂತೂ ಬದಲಾವಣೆ ಮಾಡುವುದಕ್ಕೆ ಹೋಗುವುದಿಲ್ಲವೆಂದು ಹೇಳಿದ್ದಾರೆ. ಸ್ವಾಮಿ, ಮಾನ್ಯ ಕೃಷ್ಣಾರವರಿಗೆ ಗೊತ್ತು. ಕೇಂದ್ರದಿಂದ ಒಂದು ಲೆಟರ್ ಏನು ಬಂದಿದೆ ಎಂದರೆ, ಈ ಮಾರ್ಚಿ ಕೊನೆಯೊಳಗೆ ನೀವು 50 ಪೈಸೆ, ಪರ್ ಯೂನಿಟ್ ಛಾರ್ಜ್ ಮಾಡಬೇಕೆಂದು ಒಂದು ಲೆಟರ್ ಬಂದಿದೆ. ಅದು ಈಗಾಗಲೇ ತಮ್ಮ ಹತ್ತಿರ ಇದೆ. ಹಿಂದೆ ನನ್ನ ಕಾಲದಲ್ಲೂ ಬಂದಿತ್ತು. ಆದರೆ ನಾನು ಒಪ್ಪಲಿಲ್ಲ. ಈಗ ನಿಮ್ಮ ಕಾಲದಲ್ಲೂ ಇದನ್ನು ಒಪ್ಪುವುದು ಬೇಡ. ಇದು ನಮ್ಮ ಪಕ್ಷದ ಸರ್ಕಾರ, ನಮ್ಮ ತೀರ್ಮಾನ ಇದು. ಯಾವುದೇ ಪಕ್ಷದ ಸರ್ಕಾರ ಇಲ್ಲಿದ್ದರೂ ಇಲ್ಲಿರತಕ್ಕ ರೈತರೆಲ್ಲರೂ ನಮ್ಮವರು. ಅವರು ಯಾವ ಪಾರ್ಟಿಗಾದರೂ ತಮ್ಮ ಓಟನ್ನು ಕೊಟ್ಟುಕೊಳ್ಳಲಿ, ಏನು ಬೇಕಾದರೂ ಮಾಡಿಕೊಳ್ಳಲಿ. ಇದು ಪ್ರಜಾಪ್ರಭುತ್ವ. ಅವರಿಗಿರತಕ್ಕ ಹಕ್ಕಿಗೆ ಯಾರೂ ಅಡ್ಡ ಹೋಗುವುದು ಬೇಡ. ದಯವಿಟ್ಟು 10 ಹೆಚ್.ಪಿ. ವರೆಗೆ ಫ್ರೀ ಪವರ್ ಸಪ್ಲೈ ಏನು ಕೊಡುತ್ತಿದ್ದೇವೆ. ಅದನ್ನು ಮಾತ್ರ ಟಚ್ ಮಾಡುವುದಕ್ಕೆ ಹೋಗಬೇಡಿ. ನೀವೇನಾದರೂ ಇದನ್ನು ಟಚ್ ಮಾಡಿದರೆ ನಿಮ್ಮ ಪರಿಸ್ಥಿತಿ ನೆಟ್ಟಗಾಗುವುದಿಲ್ಲ ಎನ್ನತಕ್ಕ ಎಚ್ಚರಿಕೆಯ ಮಾತನ್ನು ನಾನು ತಮಗೆ ಕೊಡುತ್ತಿದ್ದೇನೆ. ಸಂದರ್ಭ ಬಂದರೆ ನಾನೂ ಕೂಡ ನಮ್ಮ ರೈತರ ಪರವಾಗಿ ಆ ಕರ್ನಾಟಕದಲ್ಲಿ ನಿಲ್ಲಬೇಕಾಗುತ್ತದೆ. ಇದು ನನ್ನನ್ನು ಕಮಿಟ್‌ಮೆಂಟ್. ಇದನ್ನು ನಾನು ಕಾಂಪ್ರೊಮೈಸ್, ಮಾಡುವುದಿಲ್ಲ. ಏಕೆಂದರೆ ಇತ್ತೀಚೆಗೆ ಗೊಬ್ಬರದ ರೇಟು ಸಿಕ್ಕಾಪಟ್ಟೆ ಜಾಸ್ತಿಯಾಗಿ, ಸಬ್ಸಿಡಿಯನ್ನೂ ವಿತ್‌ಡ್ರಾ ಮಾಡಿ, ಡೀ ಕಂಟ್ರೋಲ್ ಆದಮೇಲೆ ರೇಟುಗಳೆಲ್ಲಾ ಏರಿ, ರೈತರು ಬೆಳೆದಿದ್ದನ್ನು ಕೊಳ್ಳುವವರು ಗತಿ ಇಲ್ಲದಂತಾಗಿದೆ. ಇವತ್ತು ಓಪನ್ ಮಾರ್ಕೆಟ್‌ನಲ್ಲಿ ಕೊಂಡುಕೊಳ್ಳುವವರು ಗತಿಯಿಲ್ಲ. ಇವತ್ತು ಸರ್ಕಾರದ ಸಪೋರ್ಟ್ ಪ್ರೈಸ್ ಎಷ್ಟಿದೆ ಹೇಳುತ್ತೀರಾ? ಗೋಧಿಗೆ ಪಂಜಾಬಿನಲ್ಲಿ ಕೊಟ್ಟಿದ್ದರೆ, ಇಲ್ಲಿ ಭತ್ತ, ಜೋಳ, ರಾಗಿ ಇವುಗಳನ್ನು ಬೆಳೆಯುತ್ತಿರುವ ನಮ್ಮ ರಾಜ್ಯದ ರೈತರ ಪರಿಸ್ಥಿತಿ ಏನಾಗಿದೆ ಎಂಬುದನ್ನು ನೋಡಿದ್ದೀರಾ? ಆದ್ದರಿಂದ ನಾನು ಹೇಳುತ್ತಿದ್ದೇನೆ. ನಮ್ಮ ಪಕ್ಷಬೇಧವನ್ನು ಮರೆತು ಈ ವಿಚಾರಗಳಲ್ಲಿ as far as the farming community in the State is concerned, let me confine to our State, our argument should apply to the whole country, but I cannot speak

to the Hon Members about the details of the entire farming community of the country. ಈ ಸಂದರ್ಭದಲ್ಲಿ ನಾನು ದೇಶದ ವಿಷಯಕ್ಕೆ ಹೋಗುವುದಿಲ್ಲ. ಆದರೆ ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಂತೆ ನಾನು ಹೇಳುವುದಾದರೆ, ನಮ್ಮ ರೈತ ಸಮುದಾಯಕ್ಕೆ ಕೊಟ್ಟಿರುವ ಸೌಲಭ್ಯಗಳು ಏನೇನು ಇವೆ ಅದನ್ನು ದಯವಿಟ್ಟು ಟಚ್ ಮಾಡುವುದಕ್ಕೆ ಹೋಗಬೇಡಿ. ಇನ್ನೂ ಹೆಚ್ಚಿಗೆ ಕೊಡುವುದಕ್ಕೆ ಸಾಧ್ಯವಾದರೆ ಅವರಿಗೆ ಕೊಡಿ. ಇದಕ್ಕೆ ನಮ್ಮ ಬೆಂಬಲ ಸಂಪೂರ್ಣ ನಿಮಗೆ ಇದೆ.

ಇನ್ನೊಂದು ವಿಚಾರ ಎಂದರೆ, ಶ್ರೀ ರಾಜೀವ್ ಗಾಂಧಿ ಕೃಷಿ ಕಲ್ಯಾಣ ನಿಧಿ ಎಂದು ಮೊದಲು ನಾನು ಕೇವಲ 5 ಕೋಟಿ ರೂಪಾಯಿಗಳು ಎಂದು ಅನೌನ್ಸ್ ಮಾಡಿದ್ದೆ. ಅನಂತರ ನನಗೆ 30 ಕೋಟಿ ರೂಪಾಯಿಗಳ ಹಣ ಕೊರತೆ ನನಗಿರಲಿಲ್ಲ. ಈ ರಾಜ್ಯದಲ್ಲಿ ದುಡಿದು ತಿನ್ನುವ ಜನ ದಿನ ಬೆಳಗಾದರೆ ರೊಟ್ಟಿಯನ್ನು ಹಿಟ್ಟನ್ನು ಹುಡುಕಿಕೊಂಡು ಹೋಗಬೇಕು, ಅನ್ನವನ್ನು ಹುಡುಕಿಕೊಂಡು ಹೋಗಬೇಕು. ಅವರಿಗೋಸ್ಕರ ನಾವು ಕಷಿ ಕಲ್ಯಾಣ ನಿಧಿ ಎಂದು ಮಾಡಿ 30 ಕೋಟಿ ರೂಪಾಯಿಗಳನ್ನು ಇಟ್ಟಿದ್ದೆವು. ಅದು ಇನ್‌ಷ್ಯೂರೆನ್ಸ್ ಇರಬಹುದು, ಮತ್ತೊಂದು ಇರಬಹುದು. ನಾನಾದರೂ ಕೇಳುತ್ತೇನೆ. Let me post this question to the Hon. Chief Minister and Leader of the House. Why you have not touched this in your budget? I want to know. Why did you give a go by to this, I cannot understand. ಏಕೆಂದರೆ ಕೃಷಿ ಕಾರ್ಮಿಕರು ನಮ್ಮ ಒಂದು ಅವಿಭಾಜ್ಯ ಅಂಗ. ಒಂದು ಲ್ಯಾಂಡ್ ಹೋಲ್ಡಿಂಗ್ ಇದ್ದ ಹಾಗೆ ಅವರು ನಮ್ಮ ಅವಿಭಾಜ್ಯ ಅಂಗ ಎನ್ನತಕ್ಕ ಮಾತನ್ನು ನಾನು ಹೇಳಿದೆ. ಈ ದೇಶದಲ್ಲಿ ಕೃಷಿ ಕಾರ್ಮಿಕರು ನಿಮಗೆ ಓಟು ಕೊಟ್ಟು, ಕೇವಲ ಸೀಲು ಹೊಡೆಯುವುದಕ್ಕೆ ಇದ್ದಾರೆಯೇ? ಅದು ಯಾವುದೇ ಪಕ್ಷ ಇರಬಹುದು, ಅಥವಾ ಯಾರೇ ಇರಬಹುದು. ನಿಮಗೆ, ನಮಗೆ ಕೇವಲ ಓಟು ಕೊಟ್ಟೂ ಕೊಟ್ಟೂ, ಸಾಯುವುದಕ್ಕೆ ಈ ದೇಶದಲ್ಲಿ ಸಿಕ್ಕಿದ್ದಾರೆಯೆ? ಅವರನ್ನು ತುಂಬಾ ಭಾರಿ ಉದ್ಧಾರ ಮಾಡಬೇಕೆಂಬುದಕ್ಕೇ ನಾನು ಹುಟ್ಟಿದ್ದೇನೆಂದು ಮಾತನಾಡುತ್ತಿಲ್ಲ. But, I think we were on the right track as far as this agricultureal labour class is concerned. ಈ ಕೃಷಿ ಕಾರ್ಮಿಕರ ಬಗ್ಗೆ ನಮ್ಮ ಹೃದಯದಲ್ಲಿ ಒಂದು ಜಾಗವನ್ನು ಇಟ್ಟುಕೊಂಡೇ ಇದ್ದೇವೆ. ಇದನ್ನು ಯಾರೂ ಕೂಡ ಮರೆಯಬಾರದು. Power comes and goes. One should know it. ಕೃಷಿ ಕಾರ್ಮಿಕರ ಕಲ್ಯಾಣ ನಿಧಿಗೆ ಮಾನ್ಯ ರಾಜೀವ್ ಗಾಂಧಿಯವರ ಹೆಸರನ್ನು ನಾವು ಇಟ್ಟಿದ್ದೇವೆ. ಏಕೆಂದರೆ he was the former Prime Minister of the country. ಎನ್ನತಕ್ಕ ದೃಷ್ಟಿಯಿಂದ. ಈಗ ಇರತಕ್ಕ 30 ಕೋಟಿ ರೂಪಾಯಿಗಳ ಜೊತೆಗೆ ನಿಮ್ಮ ಬಜೆಟ್‌ನಲ್ಲಿ ಇನ್ನೊ ಸ್ವಲ್ಪ ಜಾಸ್ತಿ ಇಟ್ಟು ನಿಮ್ಮ ಬಜೆಟ್ ಸ್ಪೀಚ್‌ನಲ್ಲಿ ಇದನ್ನು ಹೇಳಬೇಕು. ಈ ಬಜೆಟ್ ಪಾಸ್ ಆಗುವುದರೊಳಗೆ ಇದೆಲ್ಲಾ ಅದರಲ್ಲಿರಬೇಕು. You please bring out all these things under pucca plan. ಇದನ್ನು ತಂದು ನೀವು ಉಳಿಸಿಕೊಳ್ಳಬೇಕೆಂಬ ಉದ್ದೇಶದಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ.

ಇನ್ನು ಪವರ್ ಜನರೇಷನ್ ಬಗ್ಗೆ ಒಂದೇ ಒಂದು ಮಾತನ್ನು ಹೇಳುವುದಾದರೆ, ಈಗ ಸುಮಾರು 3000 ಮೆಗಾವ್ಯಾಟ್ಸ್ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುತ್ತಿದ್ದೇವೆ. ಆದರೆ ನಮ್ಮಲ್ಲಿರತಕ್ಕ ಒಟ್ಟು ಬೇಡಿಕೆ ಎಂದರೆ ಸುಮಾರು 7000 ಮೆಗಾವ್ಯಾಟ್ಸ್ ಇದೆ. ಇಡೀ ಇಂಡಿಯಾ ದೇಶದಲ್ಲಿ ಅಲ್ಲಲ್ಲೇ ಗಲಾಟೆಗಳಾಗುತ್ತಿವೆ. ಮೊದಲು ನಮ್ಮ ಕರ್ನಾಟಕದಲ್ಲೂ ಯಾವುದೇ

ರೀತಿಯ ಗಲಾಟೆಯೂ ಇರಲಿಲ್ಲ. ಇತ್ತೀಚೆಗೆ ಗಲಾಟೆಗಳು ಪ್ರಾರಂಭವಾಗಿವೆ. ಇವತ್ತು ಅನೇಕ ಜನ ಉತ್ತರ ಇಂಡಿಯಾದವರು ನಮ್ಮ ಕರ್ನಾಟಕದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕೆಂದು ಬರುತ್ತಿದ್ದಾರೆ. ನಾನು ತಮಗೆ ಒಂದು ಮಾತನ್ನು ಹೇಳುತ್ತೇನೆ. ಅವರು ಇಲ್ಲಿ ಬಂದು ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಾದರೆ ಅದಕ್ಕೆ ನಮ್ಮಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆ ಇರಬೇಕಾಗುತ್ತದೆ. ಅದೇ ರೀತಿ ನೀರು, ಜಾಗ ಇನ್ನೂ ಮುಂತಾದುವು ಇರಬೇಕಾಗುತ್ತದೆ. Yes. The liberalised industrial policy announced by the Government of India has actually gone a long way to help, establish so many industries on our land here in Karnataka. We have also got our liberalised industrial policy. ನಾವು ಸಿಂಗಲ್ ವಿಂಡೋ ಏಜೆನ್ಸಿ ಮಾಡಿದ್ದೇವೆ. ನಾವು ಸಾಕಷ್ಟು ಪವರ್ ಜನರೇಟ್ ಮಾಡದಿದ್ದರೆ ವೋಲ್ಟೇಜ್ ಡ್ರಾಫ್ಟ್ ಆಗಿ ರೈತರ ಐ.ಪಿ. ಸೆಟ್ಟುಗಳು ಸುಟ್ಟುಹೋಗಿ ಪ್ರತಿಯೊಬ್ಬ ಐ.ಪಿ. ಸೆಟ್ ಹೊಂದಿರುವ ರೈತ 4-5 ಸಾವಿರ ರೂಪಾಯಿ ಆ ಪಂಪ್‌ಸೆಟ್ಟಿನ ರಿಪೇರಿಗೆ ಖರ್ಚು ಮಾಡಬೇಕಾಗುತ್ತದೆ. ಅವನು ದುಡಿದದ್ದನ್ನೆಲ್ಲಾ ಕೇವಲ ಮೋಟಾರ್ ರಿಪೇರಿಗೆ ಖರ್ಚು ಮಾಡಬೇಕಾಗುತ್ತದೆ. ತಮಗೆ ಉದಾಹರಣೆಗೆ ಹೇಳುವುದಾದರೆ, ಕೋಲಾರ ಜಿಲ್ಲೆ, ಬೀದರ್, ಬೆಂಗಳೂರು ರೂರಲ್ ಡಿಸ್ಟ್ರಿಕ್ಟ್, ಹೀಗೆ ನಮ್ಮ ಕರ್ನಾಟಕದ ಎಲ್ಲಾ ಮೂಲೆಯಲ್ಲೂ ಐ.ಪಿ. ಸೆಟ್ಟುಗಳು ತುಂಬಿವೆ. ಸುಮಾರು 9 ಲಕ್ಷ ಐ.ಪಿ. ಸೆಟ್ಟುಗಳಿವೆ ಎನಿಸುತ್ತದೆ. ಅದಕ್ಕೆ ಪವರ್ ಕೊಡಬೇಕಾಗುತ್ತದೆ. ಕೈಗಾರಿಕೆಗಳಿಗೆ ಕೊಡಬೇಕಾಗುತತ್ತದೆ. ನೀವು ಪವರ್‌ನ್ನು ಜನರೇಟ್ ಮಾಡದಿದ್ದರೆ ಕೈಗರಿಕೆಗಳು ಇಲ್ಲಿ ಬರುವುದಿಲ್ಲ. ನಮ್ಮಲ್ಲಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್‌ಗಳಿವೆ. ಮಳೆ ಬಂದಾಗ ಡ್ಯಾಂ ತುಂಬಿಕೊಳ್ಳುತ್ತದೆ. ಮಳೆ ಬರದೇ ಇದ್ದಾಗ ನಾವು ಕಣ್ಣುಕಣ್ಣು ಬಿಟ್ಟಿದ್ದೇವೆ. ನಾನು ಅಧಿಕಾರದಲ್ಲಿದ್ದ 2 ವರ್ಷವೂ ಚೆನ್ನಾಗಿ ಮಳೆಯಾಯಿತು. ಆದರೆ 1990-91, 1991-92ರಲ್ಲಿ ಮಳೆಯಾಯಿತು. ಅದೇ ರೀತಿ ಕಳೆದ ವರ್ಷ ಕೂಡ ಮಳೆಯಾಯಿತು. ಆದರೆ ಕಾಳಿ ಪ್ರಾಜೆಕ್ಟ್ ಕೇವಲ ಮುಕ್ಕಾಲುಭಾಗ ಮಾತ್ರ ತುಂಬಿತು, ಕಾಲು ಭಾಗ ತುಂಬಲಿಲ್ಲ. ಶರಾವತಿ ಮುಂತಾದುವು ತುಂಬಿಕೊಂಡವು. ಕಳೆದಸಾರಿ ಮಲಪ್ರಭಾ ಸಂಪೂರ್ಣವಾಗಿ ತುಂಬಲಿಲ್ಲ. ಇದು ಇರಿಗೇಷನ್ ಪ್ರಾಜೆಕ್ಟ್. ಮುಂದೆ ಅಲ್ಲಿ ಪವರ್ ಪ್ರಾಜೆಕ್ಟನ್ನೂ ಕೂಡ ಮಾಡಬೇಕೆಂದಿದ್ದೇವೆ. ಅದೇ ರೀತಿ ಕೃಷ್ಣಾ ಯೋಜನೆ ಅಂದರೆ ಆಲಮಟ್ಟಿ ಡ್ಯಾಂನಲ್ಲೂ ಕೂಡ ಪವರ್ ಜನರೇಷನ್ ಪ್ರಾಜೆಕ್ಟ್ ಮಾಡುತ್ತಿದ್ದೇವೆ. ಈಗಾಗಲೇ ಅರ್ತ್ ಎಸ್ಕವೇಷನ್ ಪ್ರಾರಂಭವಾಗಿದೆ. We have signed MOU with a foreign company. ತಮ್ಮ ಬಜೆಟ್ ಭಾಷಣದಲ್ಲಿ ತಾವು ಹೇಳಿದ್ದೀರಿ. ನಾನು ಮುಖ್ಯ ಮಂತ್ರಿಯಾಗಿದ್ದ ಸಂದರ್ಭದಲ್ಲಿ ರಾಜ್ಯದ ಜನತೆಗೆ ಹೇಳಿದೆ, ಈ ಸದನಕ್ಕೂ ಹೇಳಿದೆ, ನಾನು ಏನೇನು ಮಾಡಿದೆ ಎಂಬ ಅಕೌಂಟ್ಸನ್ನೂ ಸದನಕ್ಕೆ ಒಪ್ಪಿಸಿದ್ದೇನೆ. ಇದರಲ್ಲಿ ಯಾವುದೇ ಮುಚ್ಚುಮರೆ ಇಲ್ಲ. Guidelines given by the Government of India as far as power sector is concerned, ಕೇಂದ್ರ ಸರ್ಕಾರದ ಗೈಡ್‌ಲೈನ್ಸ್ ಪ್ರಕಾರವೇ ನಾವು ಮಾಡಿಕೊಂಡು ಹೋಗಿದ್ದೇವೆ. ಅವರ ಗೈಡ್‌ಲೈನ್ಸನ್ನು ಬಿಟ್ಟು ಯಾರೂ ಏನನ್ನೂ ಮಾಡುವಂತಿಲ್ಲ. ಯಾವುದೇ ರಾಜ್ಯವೂ ಮಾಡುವಂತಿಲ್ಲ. Then I took a delegation consisting of 4 Officers. ಅಮೆರಿಕ, ಇಂಗ್ಲೆಂಡ್, ಇಟಲಿಗೆ ಹೋಗಿದ್ದೇವೆ. ಅಮೆರಿಕಾದಲ್ಲಿ ಜಾಸ್ತಿ ಸಹಿ ಮಾಡಿದ್ದೇವೆ, ಲಂಡನ್‌ನಲ್ಲಿ ಒಂದು ಸಹಿ ಮಾಡಿದ್ದೇವೆ, ಇಟಲಿಯಲ್ಲಿ ಕಂಡೋಟೆ ಎನ್ನತಕ್ಕ ಕಂಪೆನಿಯ ಜೊತೆ ನಾವು ರುಜುವನ್ನು ಮಾಡಿದ್ದೇವೆ. ಮೊದಲು ಅವರು ಆಲಮಟ್ಟಿಯನ್ನು ನೋಡಿ ಹೆದರಿಕೊಂಡರು. ಕೊನೆಗೆ ಆಲ್ಟರ್‌ನೇಟೀವ್ ಆಗಿ ರನ್ ಆಫ್

ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್‌ಗೆ ಸಂಬಂಧಪಟ್ಟಂತೆ ನಾವು ಎಷ್ಟು ಮಾಡುವುದಕ್ಕೆ ಸಾಧ್ಯವೋ ಅಷ್ಟನ್ನು ಮಾಡಬಹುದು. ಏಕೆಂದರೆ ನಮಗೆ ಮಳೆಯ ಹೆದರಿಕೆ ಇದೆ. ಆದರೆ ಕೋಲ್ ಬೇಸ್ಡ್ ಪವರ್ ಪ್ರಾಜೆಕ್ಟ್‌ಗೆ ನೀವು ಹೋಗಲೇಬೇಕಾಗುತ್ತದೆ. ನಾನೂ ಮತ್ತು ಮಾನ್ಯ ಕೃಷ್ಣಾರವರೂ ಒಮ್ಮೆ ಭೇಟಿ ಮಾಡಿದಾಗ ಇದರ ಬಗ್ಗೆ ಮಾತನಾಡಿದ್ದೇವೆ. ತಮಗೆ ಗೊತ್ತಿರುವಂತೆ ರಾಯಚೂರಿನಲ್ಲಿ 4 ಘಟಕಗಳಿವೆ. ಮುಂದೆ 5ನೇ ಘಟಕವನ್ನು ಪ್ರಾರಂಭ ಮಾಡಬೇಕಾಗಿದೆ. ಅದಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಎಂ.ಓ.ಯು.ಗೆ ನಾವು ಸಹಿ ಮಾಡಿದ್ದೇವೆ. ನಾನು ಅದರ ವಿವರಕ್ಕೆ ಹೋಗುವುದಿಲ್ಲ. ಇದೇ ರೀತಿ ನಾವು ತೋರಣಗಲ್ ಹತ್ತಿರ, ಧಾರವಾಡದ ಹತ್ತಿರ, ಮೈಸೂರು ಡಿಸ್ಟ್ರಿಕ್ಟ್ ಚಾಮಲೂರು, ಬೆಂಗಳೂರಿನಲ್ಲಿ, ಸೌತ್ ಕೆನರಾದಲ್ಲಿ ಸರ್ಪಾಡಿ ಮತ್ತು ಇನ್ನೊಂದು ಕಡೆ ಮಾಡಿದ್ದೇವೆ. ಇಷ್ಟಕ್ಕೂ ಕೂಡ ತಮಗೆ ಕೋಲ್ ಬೇಕಾಗುತ್ತದೆ. ಕೇಂದ್ರ ಸರ್ಕಾರದಿಂದ 1 ಮಿಲಿಯನ್ ಟನ್ ಕೋಲನ್ನು ಆಮದು ಮಾಡಿಕೊಳ್ಳುವುದಕ್ಕೆ ಇಂಪೋರ್ಟ್ ಡ್ಯೂಟಿ ಎಕ್ಸೆಂಷನ್ನನ್ನು ನನ್ನ ಕಾಲದಲ್ಲಿ ತೆಗೆದುಕೊಂಡಿದ್ದೇನೆ. ನನ್ನ ಹತ್ತಿರ ಆ ಲೆಟರ್ ಇದೆ. ತಮಿಳುನಾಡಿನವರು 2 ಮಿಲಿಯನ್ ಟನ್ ಕೋಲನ್ನು ಪವರ್ ಜನರೇಷನ್‌ಗೆ ತೆಗೆದುಕೊಂಡಿದ್ದಾರೆ. ಅವರದು ಬರೀ ಕೋಲ್ ಬೇಸ್ಡ್ ಪವರ್ ಜನರೇಷನ್ ನಮ್ಮದು ಆ ರೀತಿ ಅಲ್ಲ. ನಮಗೆ ಈಗ 1 ಮಿಲಿಯನ್ ಟನ್ ಕೋಲ್ ಬಂದರೆ ತಕ್ಷಣ ಪವರ್ ಜನರೇಟ್ ಮಾಡುವುದಕ್ಕೆ ಕೋಲ್ ಬೇಸ್ಡ್ ಪವರ್ ಯೂನಿಟ್ಸ್ ನಮ್ಮ ಹತ್ತಿರ ಇಲ್ಲ. ಆದ್ದರಿಂದ ನಾವು ಮುಂದಾಲೋಚನೆ ಮಾಡಿ, ಇವೆಲ್ಲಾ ನಮ್ಮಲ್ಲಿ ಬೇಗ ಬೇಗ ಬರಬೇಕು, ಇವುಗಳನ್ನೆಲ್ಲಾ ನಾವು ಈಗಲೇ ಸಿದ್ಧಮಾಡಿ ಇಟ್ಟುಕೊಳ್ಳಬೇಕೆಂಬ ದೃಷ್ಟಿಯನ್ನು ಇಟ್ಟುಕೊಂಡು ಗೋಕರ್ಣದ ಹತ್ತಿ ತದರಿಯಲ್ಲಿ ಒಂದು ಕೋಲ್ ಯಾರ್ಡನ್ನು ಮಾಡಬೇಕೆಂದಿದ್ದೆವು. ಏಕೆಂದರೆ ಇದು ಷೋರ್ ಬೇಸ್ಡ್ ಆದ್ದರಿಂದ ಹಡಗಿನಲ್ಲಿ ಬಂದ ಕೋಲ್ ಅಲ್ಲಿ ಡಂಪ್ ಆಗಬೇಕಾಗುತ್ತದೆ. ಅದಕ್ಕೂ ನಾವು ಸಹಿ ಮಾಡಿದ್ದೇವೆ. ಅದು ಆಸ್ಟ್ರೇಲಿಯಾ ಅಂಡ್ ಚೈನದ ಜಾಯಿಂಟ್ ವೆಂಚರ್, ಅದರ ಜೊತೆ ಎಂ.ಓ.ಯು.ಗೆ ನಾನು ಅಧಿಕಾರವನ್ನು ಬಿಡುವುದಕ್ಕೆ 15 ದಿವಸ ಮುಂಚಿತವಾಗಿ ಸಹಿ ಮಾಡಿಟ್ಟಿದ್ದೇನೆ. ಏಕೆಂದರೆ ನಾವು ಕೋಲನ್ನು ಸ್ಟಾಕ್ ಮಾಡಿಟ್ಟುಕೊಳ್ಳದಿದ್ದರೆ ನಾವು ಪವರ್ ಜನರೇಟ್ ಮಾಡುವುದಕ್ಕಾಗುವುದಿಲ್ಲ. ಕೋಲ್ ಆದರೆ ಚಿಮಣಿ ಕಟ್ಟಬೇಕು. ಹೈಡ್ರೋ ಎಲೆಕ್ಟ್ರಿಕ್ ಆದರೆ ಡ್ಯಾಂ ಕಟ್ಟಬೇಕಾಗುತ್ತದೆ. ನೀವು ಪೆನ್‌ಸ್ಟಾಕ್ ತಂದು ಜೋಡಿಸುವ ಹೊತ್ತಿಗೆ 4-5 ವರ್ಷ ಆಗುತ್ತದೆ. ಅಷ್ಟು ಹೊತ್ತಿಗೆ ಈ ಅಧಿಕಾರದಲ್ಲಿ ನಾವು ಇರುತ್ತೀವೋ, ನೀವು ಇರುತ್ತೀರೋ, ಬೇರೆಯವರು ಬರುತ್ತಾರೋ ಗೊತ್ತಿಲ್ಲ. ಆಧರೆ ನಾವು ಅಧಿಕಾರದಲ್ಲಿ ಇದ್ದಾಗ ಇದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂಬ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಪವರ್ ಜನರೇಷನ್ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳಿದ್ದಾರೆ ಎಂದರೆ ನಾವು ಏನು ಎಂ.ಓ.ಯು. ಗೆ ರುಜು ಮಾಡಿದ್ದೇವೆ ಅವುಗಳನ್ನು ರಿವ್ಯೂ ಮಾಡಿದ ಮೇಲೆ ಪುನಃ ಪರಿಶೀಲನೆ ಮಾಡಿದ ಮೇಲೆ ಎಂದು ಹೇಳಿರುವುದರಿದ ಈಗಾಗಲೇ 2 ಕಂಪೆನಿಗಳು ನನಗೆ ದೂರವಾಣಿ ಮಾಡಿ, ನೀವು ಎಂ.ಓ.ಯು.ಗೆ ರುಜು ಮಾಡಿದ್ದೀರಿ, ಅಗ್ರಿಮೆಂಟ್ ರೆಡಿಯಾಗಬೇಕಾಗಿದೆ ಎಂದು ಹೇಳಿದರು. After all, agreements are prepared as per the Government of India guideline.

(ಮಾನ್ಯ ಅಧ್ಯಕ್ಷರಾದ ಶ್ರೀ ವಿ. ಎಸ್. ಕೌಜಲಗಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅದು ಬಿಟ್ಟು, ಬೇರೆ ಯಾವುದು ನಮ್ಮ ಪಾಯಿಂಟ್ ಅಲ್ಲವೇ ಅಲ್ಲ. ಅವೆಲ್ಲಾ ಕೇಂದ್ರ

ಸರ್ಕಾರದಿಂದ ಬಂದಿರತಕ್ಕಂಥದ್ದು. ನಾವು ಹೊಸದಾಗಿ ಏನೂ ಮಾಡಲಿಕ್ಕೆ ಹೋಗಿಲ್ಲ, ಮಾಡಲಿಕ್ಕೆ ಬರುವಂತೆಯೂ ಇಲ್ಲ. ನಿಮಗೆ ಗೊತ್ತಿರುವ ಹಾಗೆ ಇವತ್ತು ಅವುಗಳನ್ನು ತೆಗೆದುಕೊಂಡು ಹೋಗಿ ಪೂರ್ತಿಯಾಗಿ ರೆವ್ಯೂ ಮಾಡುವುದಕ್ಕೆ ಹೋಗಿಬಿಟ್ಟರೆ then you have started going back instead of going further. ಏತಕ್ಕೆ ನೀವು ಅದನ್ನು ಮಾಡುತ್ತೀರಿ. ರೆವ್ಯೂ ಎನ್ನತಕ್ಕಂಥ ಮಾತನ್ನು ನೀವು ಏತಕ್ಕೆ ಹೇಳುತ್ತಿದ್ದೀರಿ. I cannot understand, your approach ಮೊದಲು You please stop making statement like that. ನೀವು ಅದನ್ನು ಮಾಡತಕ್ಕಂಥ ವಿಚಾರವನ್ನು ಕೈಬಿಡಬೇಕಾಗುತ್ತದೆ. ಅಲ್ಲಿ ಕೆಲವು ಕಂಪನಿಗಳವರು ಫರ್ದರ್ ಅಗ್ರಿಮೆಂಟ್ಸನ್ನೆಲ್ಲಾ ಸ್ಪೆಷಲ್ ಪ್ಲೇನ್‌ಗಳಲ್ಲಿ ತೆಗೆದುಕೊಂಡು ಬಂದರು. ಆ ಕಂಪೆನೀಸ್ ಕೆಲವು ಬ್ಯಾಂಕ್ಸ್ ಜೊತೆಯಲ್ಲಿ ನಾವೆಲ್ಲಾ ಕುಳಿತು ಮಾತುಕತೆಯನ್ನೆಲ್ಲಾ ಮಾಡಿರುತ್ತೇವೆ. ನಾನೇನೂ ಅಮೆರಿಕಾ ನೋಡುವುದಕ್ಕೆ ಹೋಗಿರಲಿಲ್ಲ. ನಿಜ ಹೇಳಬೇಕಾದರೆ John. F. Kennedy ಪ್ಲೇನ್ ಕೂಡ ನೋಡಲಿಕ್ಕೆ ಆಗಲಿಲ್ಲ. ಆ ಪ್ಲೇನ್ ಕ್ಯಾಚ್ ಮಾಡಲಿಕ್ಕೆ ಟೈಮ್ ಕೂಡ ಆಗಲಿಲ್ಲ, ರುಜುಮಾಡುವ ಹೊತ್ತಿಗೆ. ಇದೆಲ್ಲವನ್ನೂ ಕೂಡ ಅನುಭವಿಸಿ ನಾವು ಬಂದಿದ್ದೇವೆ. 4-5 ದಿವಸಗಳನ್ನು ಅಮೇರಿಕಾದಲ್ಲಿ ಕಳೆದಿದ್ದರೂ ಕೂಡ ಸುಮಾರು 8-9 ಕಂಪೆನಿ ಕೋಲ್ ಯಾರ್ಡ್‌ದು ಸೇರಿ 10 ಕಂಪೆನಿ ಮಾಡಿರತಕ್ಕಂಥದ್ದು. I wish all the programmes come true and you are going to sign the agreements with all these companies. ಅದೆಲ್ಲಾ ಬರಬೇಕು. 4-5 ವರ್ಷಗಳ ನಂತರ ನೀವು ಅಧಿಕಾರದಲ್ಲಿ ಇರುತ್ತಿರೋ ಇಲ್ಲವೋ, ಮತ್ತೊಬ್ಬರು ಅಧಿಕಾರಕ್ಕೆ ಬರುತ್ತಾರೋ ಅದನ್ನು ನಾವು ಯಾರೂ ನೋಡುವುದು ಬೇಡ. ಕರ್ನಾಟಕ ರಾಜ್ಯದ ಅಭ್ಯುದಯ ಮತ್ತು ಭವಿಷ್ಯದ ಬಗ್ಗೆ ಮಾತ್ರ ನಾವು ವಿಚಾರ ಮಾಡೋಣ ಎನ್ನತಕ್ಕಂಥ ದೃಷ್ಟಿಯಿಂದ ಈ ಮಾತನ್ನು ಹೇಳಿದ್ದೇನೆ.

ಮಾನ ಸಭಾಧ್ಯಕ್ಷರೇ, ಈಗ ನಾನು ಪವರ್ ವಿಚಾರದಲ್ಲಿ ಹೇಳಿದ್ದೇನೆ. You please immediately sign the agreements, don't delay and don't take up this review work. ನಿಮ್ಮ ಆಫೀಸರ್ಸ್ ಎಲ್ಲಾ ದೂರನ್ನು ಹೇಳುತ್ತಾರೆಂದು ಯಾರಾದರೂ ಅಡ್ವೈಸ್‌ನ್ನು ಕೊಟ್ಟರೆ ಅವರು ಕರ್ನಾಟಕ ರಾಜ್ಯದ ಅಭ್ಯುದಯಕ್ಕೆ ಯೋಚನೆ ಮಾಡುವವರಲ್ಲ. ನನ್ನ ಕಾಲದಲ್ಲಿ ಆ ಕೆಲಸವನ್ನು ಮಾಡಿಲ್ಲ. ನಿಜ ಹೇಳಬೇಕಾದರೆ ಕೆಲವು ಆಫೀಸರ್ಸ್ ಯಾರು ಯಾರು ವರ್ಕ್ ಮಾಡಿದ್ದಾರೆ ಅವರನ್ನು ನೀವು ತಂದು ಇಟ್ಟುಕೊಳ್ಳಬೇಕು. ಈ ಫೈಲ್ಸ್ ಬರುವವರೆಗೆ ನೀವು ಅವರನ್ನು ಇಟ್ಟುಕೊಳ್ಳಿ. ಅವರೆಲ್ಲ ನಮ್ಮ ಜೊತೆಯಲ್ಲಿ ಅದಕ್ಕೆ ಡೆಡಿಕೇಟ್ ಮಾಡಿಕೊಂಡು ವರ್ಕ್ ಮಾಡಿದ್ದಾರೆ. ನಾನು ಅವರ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ. ಆಫೀಸರ್ಸ್‌ಗಳ ಹೆಸರನ್ನು ಇಲ್ಲಿ ಹೇಳಬಾರದು, ಚೆನ್ನಾಗಿರುವುದಿಲ್ಲ. ಬೇಕಾದರೆ ಪರ್ಸನಲ್ಲಾಗಿ ಮಾತನಾಡುತ್ತೇನೆಂದು ಹೇಳಿದರೆ ನಿಮಗೆ ವಿವರಗಳನ್ನು ಕೊಡಬಲ್ಲೆ.

ಇನ್ನು ಇರಿಗೇಷನ್. ಮಾನ್ಯ ಸಭಾಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ 1993-94ಗೆ ನಾವು ಪ್ಲಾನಿಂಗ್ ಕಮಿಷನ್ ಮುಂದೆ ಕೊಟ್ಟಿರತಕ್ಕಂಥದ್ದು 900 ಕೋಟಿ. I cannot understand why you have said in the budget speech that you are providing another 50 crores? ಬೇಕು ಎಂದರೆ ಇನ್ನೊಂದು 50 ಕೋಟಿ ರೂಪಾಯಿಗಳನ್ನು ಕೊಡುತ್ತೇನೆಂದು ಹೇಳಿರುವುದು ಏತಕ್ಕೆ ಸ್ವಾಮಿ, ಬ್ರೇಕ್ ಆಫ್ ಫಿಗರ್ ಏತಕ್ಕೆ ಮಾಡುತ್ತೀರಿ ನೀವು. You have said an outlayy of Rs. 850 crores including Rs. 250 crores on Cauvery basin works. ....

ಕೃಷ್ಣಾ ಗೋದಾವರಿ ಬರುತ್ತದೆ. ಬೀದರ್ ಆ ಕಡೆಗೆ, ಇದನ್ನು ಸಣ್ಣಪುಟ್ಟ ಬೇಸಿನ್ ಒಟ್ಟು 4-5 ಬೇಸಿನ್‌ಗಳು ಬರುತ್ತವೆ. ಅದು ನಮಗೆ ಬೇಡ, ನಮಗೆ ಗೊತ್ತಿರುವ ಹಾಗೆ ಮೇಲಿರತಕ್ಕಂಥದ್ದು ಕೃಷ್ಣಾ, ಕಾವೇರಿ, ಮೂರನೆಯದಾಗಿ ಬರುವುದು ಗೋದಾವರಿ. ನೀರಾವರಿ ವಿಚಾರ ಮಾಡತಕ್ಕಂಥದ್ದು, ಬರೀ ಡ್ಯಾಮ್‌ಗಳ ವಿಚಾರ ಮಾಡತಕ್ಕಂಥದ್ದಲ್ಲ. ಸಣ್ಣ ನೀರಾವರಿ, ಲಿಫ್ಟ್ ಇರಿಗೇಷನ್ಸ್ ಇವೆಲ್ಲಕ್ಕೂ ಗಮನ ಕೊಡತಕ್ಕಂಥ ವಿಚಾರ ಇದೆ. ಆಕ್ಚುಯಲಿ ಆ 900 ಕೋಟಿ ರೂಪಾಯಿಗಳೆಂದು ನಾನೇನು ಪ್ಲಾನಿಂಗ್ ಕಮಿಷನ್ ಮುಂದೆ ಇಟ್ಟಿದ್ದೆ, ಈ 900 ಕೋಟಿ ರೂಪಾಯಿಗಳ ಜೊತೆಗೆ ಮತ್ತೆ 100 ಕ್ರೋರ್ಸ್ ಕೊಡತಕ್ಕಂಥ ARM ಮೆಷರ್ಸನ್ನು ನೀವು ಜಾಸ್ತಿ ಮಾಡಿಕೊಳ್ಳಬೇಕು. 1000 ಕೋಟಿ ರೂಪಾಯಿ ಮೇಲೆ ಹೋಗಬೇಕು. ನಾನು ಪ್ಲಾನಿಂಗ್ ಕಮಿಷನ್‌ಗೆ ಪೇಪರ್ಸ್ ಕಳುಹಿಸಬೇಕಾದರೆ ಈಗಲೇ ಒಂದು ದೊಡ್ಡ ಆಸೆಯನ್ನು ಇಟ್ಟುಕೊಳ್ಳುವುದು ಬೇಡವೆಂದು ಹೇಳಿ 900 ಕ್ರೋರ್ಸ್‌ಗೆ ಫಿಕ್ಸ್ ಮಾಡಿಕೊಟ್ಟದ್ದು. ನೀವು ದಯವಿಟ್ಟು 850 ಎಂದು ಹೇಳಬೇಡಿ. ಮತ್ತೆ ಬೇಕಾದರೆ ಕೊಡುವುದಲ್ಲ, ಬೇಕಾದರೆ ಅಲ್ಲ. ಇರಿಗೇಷನ್‌ಗೆ ಎಷ್ಟು ಕೊಟ್ಟರೂ ಸಾಲದು. ತಮಗೆ ಗೊತ್ತಿದೆ, ಕೃಷ್ಣಾ ಬೇಸಿನ್‌ಗೆ ಬಚಾವತ್ ಅವಾರ್ಡ್ ಪ್ರಕಾರ we are lagging behind. ಆಮೇಲೆ ಕಾವೇರಿ ಬೇಸಿನ್‌ಗೂ ಕೂಡ ನಾವು ನಮ್ಮ ಪಾಲಿನ ನೀರನ್ನು ಉಪಯೋಗ ಮಾಡತಕ್ಕಂಥದ್ದು ಅಲ್ಲಿರಬಹುದು ಅಥವಾ ಇಲ್ಲಿರಬಹುದು, ನಾವು ಅದಷ್ಟು ಉಪಯೋಗ ಮಾಡಬೇಕು. ಆಮೇಲೆ ವರ್ಲ್ಡ್ ಬ್ಯಾಂಕ್ ಏಯ್ಡ್ ಕೊಡತಕ್ಕಂಥಾದ್ದು ನವೆಂಬರ್ ತಿಂಗಳಲ್ಲಿ ನಿಲ್ಲಿಸಿಬಿಟ್ಟಿದ್ದಾರೆ ಎಂದು ಹೇಳಿದ್ದಾರೆ. ನವೆಂಬರ್ ಫಸ್ಟ್ ವೀಕ್ ಎಂದು ತಾವು ಹೇಳಿದ್ದೀರಿ. ನಿಮ್ಮ ಸ್ಪೀಚ್‌ನಲ್ಲಿ ಹೇಳಿದ್ದುದು ಎಲ್ಲವೂ ನನ್ನ ಮನಸ್ಸಿನಲ್ಲಿ ಇದೆ. ನಾನು ಹೇಳುತ್ತೇನೆ ಅಲ್ಲಿರತಕ್ಕಂಥ ಒಂದೇ ಒಂದು ಪಾಯಿಂಟ್ ರಿಹ್ಯಾಬಿಲಿಟೇಷನ್ ವರ್ಕ್ಸ್ ಮತ್ಯಾವುದೂ ಅಲ್ಲ, ಡ್ಯಾಮ್, ಕೆನಾಲ್ ಕನ್‌ಸ್ಟ್ರಕ್ಷನ್ ಬಗ್ಗೆ ಅವರದೇನೂ ತಕರಾರು ಇಲ್ಲ. ನಿಮಗೆ ಆಗಲೇ ಗೊತ್ತಿರುತ್ತದೆ ಎಂದು ನನ್ನ ಭಾವನೆ. According to press reports you had a meeting with the world Bank officials also. ಅದನ್ನು ಮಾಡಿ. ನಾನು ಒಂದೇ ಒಂದನ್ನು ಹೇಳುವುದು. ರಿಹ್ಯಾಬಿಲಿಟೇಷನ್ ವರ್ಕ್ ಅವರ ಕನ್ಸಂಪ್‌ಷನ್ ಬೇರೆ. ಅಮೆರಿಕಾ ದೇಶ ಅಥವಾ ಬೇರೆ ದೇಶದವರ ಕನ್ಸೆಂಪ್‌ಷನ್ನೇ ಬೇರೆ. ನಮ್ಮ ದೇಶದ ಕನ್‌ಸಂಪ್‌ಷನ್ ರಿಹ್ಯಾಬಿಲಿಟೇಶನ್ ಬೇರೆ. ನಾನು ಅವರಿಗೆ ಹೇಳಿದ್ದೇನೆ. ನಮ್ಮ ದೇಶದಲ್ಲಿ ರೀಹ್ಯಾಬಿಲಿಟೇಷನ್ ಈ ರೀತಿ ಇದ್ದರೆ ಸಾಕು ಮಿನಿಮಮ್ ಪ್ರೋಗ್ರಾಮ್ಸ್ ಇಷ್ಟಿದ್ದರೆ ಸಾಕೆಂದು ಹೇಳಿದ ಮಾತಿಗೆ ಅವರು ಒಪ್ಪಿಕೊಂಡಿದ್ದಾರೆ. ನಾನು ಈಗ ಅದರ ಡೀಟೈಲ್ಸ್‌ಗೆ ಹೋಗುವುದಿಲ್ಲ. ಆದರೆ ಒಂದೇ ಮಾತು, ರೀಹ್ಯಾಬಿಲಿಟೇಷನ್ ಒಂದು ವರ್ಕ್ ಸೆಟಲ್ ಆದರೆ ವರ್ಲ್ಡ್ ಬ್ಯಾಂಕ್ ಜೊತೆ ನಮ್ಮದೇನೂ ಇಲ್ಲ. ನಮ್ಮ ಪಾಲಿನ ಹಣವನ್ನು ನಾವು ಇಟ್ಟುಕೊಂಡರೆ ಉಳಿದಿರುವ ಹಣ ಏನಿದೆ ಅದನ್ನು ಅವರು ಕೊಡುವುದಕ್ಕೆ ತಯಾರಿದ್ದಾರೆ. ಹಣ ಕೂಡ ಅವರು ರಿಲೀಸ್ ಮಾಡುತ್ತಿದ್ದಾರೆ. ತೊಂದರೆ ಏನೂ ಇಲ್ಲ. ನಾವು ನಮ್ಮ ಕಾಲದಲ್ಲಿ ವರ್ಕ್ ನಡೆಸುತ್ತಾ ಹೋಗಿದ್ದೇವೆ. ನಾವು ಅನೇಕ ಕೆಲಸಗಳನ್ನು ಮಾಡಿದ್ದೇವೆ. ಹಣ ಮಂಜೂರು ಮಾಡಿದ್ದೇವೆ, ಹಣ ಕೂಡ ಬಿಡುಗಡೆ ಮಾಡಿದ್ದೇವೆ. ಈ ಸಂದರ್ಭದಲ್ಲಿ ಒಂದು ಮಾತನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಯಾವುದೇ ಒಂದು ಕೆಲಸ ಅಂದರೆ ಕುಡಿಯುವ ನೀರು ಇರಬಹುದು, ಇರಿಗೇಷನ್ ಇರಬಹುದು ಮತ್ತೊಂದು ಇರಬಹುದು. ಆ ಬಗ್ಗೆ ನಾನು ತೀರ್ಮಾನ ಮಾಡಿದೆ, ಒಂದು ಸಾರಿ ತೀರ್ಮಾನ ತೆಗೆದುಕೊಂಡು ಜಿ.ಓ. ಇಶ್ಯೂ ಮಾಡಬೇಕೆಂದರೆ unless you release 1/3rd of

the total money, you should not issue the G.O. ಎಂಬುದು. ಅದು ಬಹಳ ದೊಡ್ಡ ಪ್ರಾಜೆಕ್ಟ್ ಇದ್ದರೆ ಮಾತ್ರ ಮಾಡುವುದಕ್ಕೆ ಬರುವುದಿಲ್ಲ. ಉದಾಹರಣೆಗೆ ಜೇವರ್ಗಿ ಕೆನಾಲ್ ತೆಗೆದುಕೊಂಡರೆ I think it is about Rs. 175 crores project. ಅದೇ ರೀತಿಯಾಗಿ ಕೃಷ್ಣ ಬ್ಯಾಕ್ ವಾಟರ್, ರಾಯಚೂರು ಜಿಲ್ಲೆಯ ಲಿಂಗಸುಗೂರಿಗೆ ನೀರು ಬರುತ್ತದಲ್ಲ ರಾಮ್‌ಪುರ್ ಲಿಫ್ಟ್ ಇರಿಗೇಷನ್, ನಿಮ್ಮ ಕರ್ಾಳ ಯೋಜನೆ ತೆಗೆದುಕೊಳ್ಳಿ, 12 ಕೋಟಿ ರೂಪಾಯಿ ಯೋಜನೆ. ಅದಕ್ಕೆ 5 ಕೋಟಿ ರೂಪಾಯಿ ರಿಲೀಸ್ ಮಾಡಿಕೊಟ್ಟಿದ್ದೇವೆ. ಅದೇ ರೀತಿ ಕಾಳಮರಿಗೌಡರದ್ದು ಕರಡಿಲಕ್ಕನಕೆರೆ, ಹಾರಂಗಿ ಕೆನಾಲ್ ಲಿಫ್ಟ್ ಇರಿಗೇಷನ್. I think, we have released about Rs. 20 crores, subject to verification. ದೊಡ್ಡದೊಡ್ಡವು ಆದರೆ ಮಾತ್ರ ನಾವು 10-15-20 ಕೋಟಿ ರೂಪಾಯಿ ಮಾಡಿದ್ದೇವೆ. 10-12 ಕೋಟಿ ರೂಪಾಯಿ ಇರುವುದಕ್ಕೆ ಮಾತ್ರ ನಾವು ಕಡಿಮೆ ಮಾಡಿದ್ದೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ತಾವು ಬಹಳ ಸ್ವಾರಸ್ಯಕರವಾಗಿ ಹೇಳಿದಿರಿ ಯಾವುದೇ ಯೋಜನೆಗೆ ಮಂಜೂರಾತಿ ಕೊಡಬೇಕಾದರೆ ಎಲ್ಲಾ ವಿಧಿ ವಿಧಾನಗಳನ್ನು ಪೂರೈಸಿ 1/3 ಭಾಗ ಹಣ ಬಿಡುಗಡೆ ಮಾಡುತ್ತಾರೆ. ತುಂಗಾ ಮೇಲ್ದಂಡೆಗೆ 280 ಕೋಟಿ ರೂಪಾಯಿ ಹಣ ಇತ್ತು. ಇಂದಿಗೂ ಕೇಂದ್ರ ಸರ್ಕಾರದ ಮಂಜೂರಾತಿ ಸಿಕ್ಕಿಲ್ಲ. ನೀವು ಹೋದಸಾರಿ ಇಟ್ಟಿದ್ದು 2 ಕೋಟಿ ರೂಪಾಯಿ. ಎಂ.ಪಿ. ಚುನಾವಣೆ ಬಂತು ಎಂದು ತರಾತುರಿಯಿಂದ ಕೇಂದ್ರದ ಮಂಜೂರಾತಿ ಇಲ್ಲದೆ, ಹಣ ಬಿಡುಗಡೆ ಮಾಡದೆ, ಕೆಲಸ ಪ್ರಾರಂಭ ಮಾಡದೆ ಅಡಿಗಲ್ಲು ಹಾಕಿದರಲ್ಲ, ದಯವಿಟ್ಟು ಹೇಳಿ ಹಣ ಏತಕ್ಕೆ ಕೊಡಲಿಲ್ಲ? ಮಂಜೂರಾತಿ ಏಕೆ ಮಾಡಲಿಲ್ಲ? ರಾಜಕೀಯವಾಗಿ ಮಾಡಿದಿರಾ ದಯವಿಟ್ಟು ಹೇಳಿ.

ಶ್ರೀ ಎಸ್. ಬಂಗಾರಪ್ಪ : ಏತಕ್ಕೆ ಎಂದು ಹೇಳಿದ್ದೇನೆ, ನೀವು ಮರೆತಿರಬೇಕು, ರೀ-ಕಲೆಕ್ಟ್ ಮಾಡಿಕೊಳ್ಳಿ, ನಾನು ಹಿಂದೆ ಹೇಳಿದ್ದೇನೆ. ಅಲ್ಲಿ ಏನಾಗಿ ಡಿಲೇ ಆಗಿದೆ ಎಂದರೆ, Upper Tunga, we took the decision to have an aerial survey made in that area. ಏರಿಯಲ್ ಸರ್ವೆ ಮಾಡಿದರೆ ನಿಮಗೂ ಉಪಯೋಗ ಇದೆ. ಇದನ್ನು ಬನ್ನಿಕೋಡ್ ಅವರು ತಿಳಿದುಕೊಳ್ಳಬೇಕು. ಏರಿಯಲ್ ಸರ್ವೆ ಮಾಡಿದ್ದರಿಂದ ಏನಾಗಿದೆ ಎಂದರೆ 30 ರಿಂದ 40 ಸಾವಿರ ಎಕರೆ ಇರಿಗಬಲ್ ಏರಿಯ ಮಾಡತಕ್ಕದ್ದು ಜಾಸ್ತಿಯಾಗಿದೆ. ಏರಿಯಲ್ ಸರ್ವೆಯಿಂದ ಬಹಳ ಉಪಯೋಗ ಇದೆ. ಅದನ್ನು ನೋಡಿ ನಾವು ಕ್ಯಾಬಿನೆಟ್ ಡಿಸಿಷನ್ ತೆಗೆದುಕೊಂಡು 50 ಲಕ್ಷ ರೂಪಾಯಿ ಖರ್ಚು ಮಾಡಬೇಕೆಂದು ಹಣ ಕೂಡ ಕೊಟಿಟದ್ದೇವೆ. ಚೀಫ್ ಇಂಜಿನಿಯರ್ ಪೋಸ್ಟ್ ಮಾಡಿದ್ದೇವೆ, ಆಫೀಸ್ ಸೆಟ್‌ಅಪ್ ಮಾಡಿದ್ದೇವೆ, ಕೆಲಸ ಕೂಡ ಪ್ರಾರಂಭವಾಗುತ್ತಿದೆ, ಅದೆಲ್ಲ ಮಾಡಬೇಕಾಗುತ್ತದೆ.

ಶ್ರೀ ಭೀಮಣ್ಣ ಖಂಡ್ರೆ : ಕಾರಂಜಾ ಪ್ರಾಜೆಕ್ಟ್‌ಗೆ ತಮ್ಮ ಕಾಲದಲ್ಲಿ ಎಷ್ಟು ಕೊಟ್ಟಿರಿ? 1989-90ರಲ್ಲಿ 9-10 ಕೋಟಿ ಇತ್ತು. ತಮ್ಮ ಕಾಲದಲ್ಲಿ ಎರಡು ವರ್ಷದಿಂದ 6-6 ಕೋಟಿ ರೂಪಾಯಿ ಆಗಿದೆ.

ಶ್ರೀ ಎಸ್. ಬಂಗಾರಪ್ಪ : ನೀವು ಈಗ ಮಿನಿಸ್ಟರ್, ನೆನಪಿರಲಿ. ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವುದು ಇಷ್ಟೆ. ರಾಣೆಬೆನ್ನೂರಿನಲ್ಲಿ ಆಫೀಸ್ ಮಾಡಿದ್ದೇವೆ. ಕೆಲಸ ಆಗಲೇ ಪ್ರಾರಂಭವಾಗಿದೆ. ಚೀಫ್ ಇಂಜಿನಿಯರ್ ಹೋದಮೇಲೆ ಶಿವಮೊಗ್ಗಕ್ಕೆ ಷಿಫ್ಟ್ ಮಾಡಿಕೊಂಡಿದ್ದಾರೆ. [illegible]

ನಾನು ಡೀಟೈಲ್ಸ್‌ಗೆ ಹೋಗುವುದಿಲ್ಲ. ನಾನು ಅಮೆರಿಕಾದ ವಾಷಿಂಗ್‌ಟನ್‌ನಲ್ಲಿದ್ದಾಗ ವರ್ಲ್ಡ್ ಬ್ಯಾಂಕಿನ ವೈಸ್ ಛೇರ್ಮನ್‌ರಾದ ಶ್ರೀ ವುಡ್ ಅವರನ್ನು ಭೇಟಿಯಾಗಿ ಅವರ ಜೊತೆ ಮಾತನಾಡಿದೆ. ವರ್ಲ್ಡ್ ಬ್ಯಾಂಕ್ ಛೇರ್ಮನ್ ಇರಲಿಲ್ಲ, ಅವರು ಪ್ರವಾಸದಲ್ಲಿದ್ದರು. ವೈಸ್ ಛೇರ್ಮನ್ ಹತ್ತಿರ ಮಾತನಾಡಿದಾಗ we have submitted a paper on desilting of tanks. ನಾವು ಅದನ್ನು ಕೊಟ್ಟಿದ್ದೇವೆ. I think it is about 1200 crores project. ಅದರ ಬಗ್ಗೆ ಪರ್‌ಸ್ಯೂ ಮಾಡಬೇಕಾಗುತ್ತದೆ. ಪರ್ಸ್ಯೂ ಮಾಡದಿದ್ದರೆ ಬರುವುದಿಲ್ಲ. ಲಿಫ್ಟ್ ಇರಿಗೇಷನ್ ಸೆಕ್ಟಾರ್ಸ್ ಎರಡು ಮಾಡಿದ್ದೆವು, ಅವು ಕೃಷ್ಣ ಮತ್ತು ಕಾವೇರಿ. ನಮ್ಮ ಕಾಲದಲ್ಲಿ ಕೃಷ್ಣ ಯೋಜನೆಯನ್ನು ವೈಂಡ್‌ಅಪ್ ಮಾಡಬೇಕಾಯಿತು. ಏಕೆಂದರೆ ನಬರ್ಡ್‌ನವರು ಹಣ ಕೊಡತಕ್ಕದ್ದು ತಕರಾರು ಇತ್ತು. ವರ್ಕ್ ಚೆನ್ನಾಗಿ ಮಾಡಿದ್ದರೂ ತಾವು ಶಾಸಕರು ಕಂಪ್ಲೇಂಟ್ ಮಾಡಿದ್ದೀರಿ. ಕಾವೇರಿ ಬೇಸಿನ್‌ನ ಲಿಫ್ಟ್ ಇರಿಗೇಷನ್ ಸ್ಕೀಮನ್ನು ಹಾಗೆಯೇ ಇಟ್ಟುಕೊಂಡೆವು. ಟ್ರಯಲ್ ನೋಡೋಣ ಎನ್ನತಕ್ಕಂಥ ದೃಷ್ಟಿಯಿಂದ ಮಾಡಿದೆವು. ತಮಗೆ ಬಿಟ್ಟಿರತಕ್ಕದ್ದು, ಇಡಬೇಕು ಬೇಡ, ಹೇಗೆ ಮಾಡಬೇಕೆಂದು ತಾವು ವಿಚಾರ ಮಾಡಿ. ನಾನು ಅದರ ಬಗ್ಗೆ ಪ್ರಶ್ನೆ ಮಾಡುವುದಿಲ್ಲ. ಏಕೆಂದರೆ ನಬಾರ್ಡ್‌ನವರು ಅವರ ಗೈಡ್‌ಲೈನ್ಸ್ ಏನಾದರೂ ಚೇಂಜ್ ಮಾಡಿಕೊಂಡಿದ್ದಾರೋ ಏನು ಮಾಡಿದ್ದಾರೋ ನನಗೆ ಲೇಟೆಸ್ಟ್ ಗೊತ್ತಿಲ್ಲ. ಇನ್ನೂ ಕೃಷ್ಣವ್ಯಾ ಡೆವಲಪ್‌ಮೆಂಟ್ ಅಥಾರಿಟಿ ಮಾಡತಕ್ಕ ವಿಚಾರದಲ್ಲಿ we have taken the decision unanimously to have it. ನಾವು ಗೌರ್ನಮೆಂಟ್ ಆಫ್ ಇಂಡಿಯಾಕ್ಕೆ ಕಳುಹಿಸಿದ್ದೇವೆ ಅದು ಅಲ್ಲೇ ಬಿದ್ದಿದೆ. ಅದು ಅಲ್ಲಿಯೇ ಸುತ್ತು ಹಾಕುತ್ತಿದೆ. ನನ್ನ ಕಾಲದಲ್ಲಿ ಅನೇಕ ಡಿಪಾರ್ಟ್‌ಮಂಟ್‌ಗಳಿಂದ ಓಕೆ ಮಾಡಿಸಿ ಇನ್ನೇನು ಪ್ರೆಸಿಡೆಂಟ್ ಆಫ್ ಇಂಡಿಯಾ ಅವರಿಗೋ ಹೋಗುವುದು ಇತ್ತು ಎಂದು ಕಾಣುತ್ತದೆ. ಈಗಲಾದರೂ ಅದನ್ನು ಮಾಡಿಸಿ ಪೂರ್ತಿ ಮಾಡತಕ್ಕದ್ದು ಬಹಳ ಒಳ್ಳೆಯದು. ಪವರ್ಸ್ ಕಡಿಮೆಯಿದ್ದರೆ ಅದನ್ನು ಅಮೆಂಟ್ ಮಾಡಿಕೊಳ್ಳಿ. ಅದಕ್ಕೆ ಸ್ವಲ್ಪ ಪವರ್ಸ್ ಕೊಟ್ಟು ಕೆಲಸ ಮಾಡಿದರೆ ಮಾತ್ರ you can copeup with the demand for coompletion of the work. ಇಲ್ಲದಿದ್ದರೆ ಯಾರೂ ಕೂಡ ಮಾಡುವುದಕ್ಕೆ ಬರುವುದಿಲ್ಲ ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಆಮೇಲೆ ಇರಿಗೇಷನ್ ಸೆಕ್ಟಾರ್‌ಗೆ ಹಣವನ್ನು ನೀವು ಜಾಸ್ತಿ ಮಾಡುತ್ತಾ ಹೋಗಬೇಕೆನ್ನುವ ದೃಷ್ಟಿಯಿಂದ ಒಂದು ಸಲಹೆಯನ್ನು ಈ ಸಂದರ್ಭದಲ್ಲಿ ನಾನು ಕೊಟ್ಟಿದ್ದೇನೆ.

ಇನ್ನು ಅಗ್ರಿಕಲ್ಚರ್ ಬಗ್ಗೆ ನಾನು ಒಂದೇ ಒಂದು ಮಾತು ಹೇಳುತ್ತೇನೆ. ಗೊಬ್ಬರವನ್ನು ನಾವೇನು ಖರ್ಚು ಮಾಡುತ್ತೇವೆ. The total quantity of chemical manure used in our State, ನನಗೆ ಗೊತ್ತಿರುವ ಹಾಗೆ 1990-91ರಲ್ಲಿ 14 ಲಕ್ಷ ಟನ್ಸ್, 1991-92ರಲ್ಲಿ 17 ಲಕ್ಷ ಟನ್ಸ್. ಈ ವರ್ಷ ಎಲ್ಲಾ ಕಡೆ ಮಳೆಯಾದ್ದರಿಂದ ರೈತರು 20 ಲಕ್ಷ ಟನ್ ಗೊಬ್ಬರ ಉಪಯೋಗ ಮಾಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೆ. ಅಂದರೆ ಔಟ್‌ಪುಟ್ ಏನು ಬರುತ್ತದೆ ಅದು ಸಿಕ್ಕಾಬಟ್ಟೆ ಜಾಸ್ತಿಯೆಂದು ತಿಳಿದುಕೊಂಡಿದ್ದೆ. ಆದರೆ ಈ ವರ್ಷ ಏನಾಗಿದೆಯೆಂದರೆ, to my horrow, actually that has come down to 12 lakh ಎಂದು ನಾನು ಕೇಳಿದ್ದೇನೆ. ಈ ವರ್ಷದ ಲೇಟೆಸ್ಟ್ ಫಿಗರ್ಸ್ ನನಗೆ ಗೊತ್ತಾಗಲಿಲ್ಲ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಏಕೆಂದು ದಯವಿಟ್ಟು ಹೇಳುತ್ತೀರಾ ?

ಶ್ರೀ ಹೆಚ್. ಏಕಾಂತಯ್ಯ : ನಮ್ಮ ಕರ್ನಾಟಕ ರಾಜ್ಯದಲ್ಲಿ 8 ಲಕ್ಷ ಟನ್ ಗೊಬ್ಬರಕ್ಕಿಂತ

ಹೆಚ್ಚು ಗೊಬ್ಬರವನ್ನು ಯಾವೊತ್ತೂ ಉಪಯೋಗಿಸಿಲ್ಲ.

ಶ್ರೀ ಎಸ್. ಬಂಗಾರಪ್ಪ : ಇರಲಿ. ಈಗ ನನಗೆ ಬಂದಿರತಕ್ಕ ವರದಿಗಳು ಮತ್ತು ನಾನು ಹಿಂದೆ ಕೂಡ ಶಾಸನಸಭೆಯಲ್ಲಿ ಹೇಳಿದ್ದೇನೆ. ಡೀಕಂಟ್ರೋಲ್ ಮಾಡಿ ಸಬ್ಸಿಡಿ ವಿತ್‌ಡ್ರಾ ಮಾಡಿದ್ದರಿಂದ ರೈತರಿಗೆ ಪೆಟ್ಟುಬಿತ್ತು. ರೈತರು ಇನ್ನೇನು ಗೊಬ್ಬರ ತೆಗೆದುಕೊಂಡು ಹೋಗಿ ಹೊಲಕ್ಕೆ, ಗದ್ದೆಗೆ ಹಾಕಬೇಕು ಆ ಟೈಮ್‌ನಲ್ಲಿ ಡೀಕಂಟ್ರೋಲ್ ಮಾಡಿ ಸಬ್ಸಿಡಿ ವಿತ್‌ಡ್ರಾ ಮಾಡಿದ್ದರಿಂದ ಬಹಳ ದೊಡ್ಡ ಪೆಟ್ಟು ಆಗಿದೆ ಎಂದು ನಾನು ಮುಖ್ಯಮಂತ್ರಿ ಇದ್ದಾಗ ಹೇಳಿಕೆ ಕೊಟ್ಟಿದ್ದೇನೆ. ಈ ಸದನದಲ್ಲಿ ಹೇಳಿದ್ದೇನೆ, ಹೊರಗೆ ಹೇಳಿದ್ದೇನೆ, Even now I stand by my statement. ನಾನು ಅದನ್ನು ಚೇಂಜ್ ಮಾಡುವುದಿಲ್ಲ. ನಾನು ಮುಖ್ಯ ಮಂತ್ರಿಯಾಗಿ ಹೇಳಿದ್ದೇನೆ. ಈಗ ಹೇಳುವುದಕ್ಕೆ ನನಗೆ ಏನಂತೆ? ಆ ಪ್ರಶ್ನೆ ಈಗ ಎಂತಹದ್ದು ಇಲ್ಲ. ನಾನು ಹೇಳುತ್ತೇನೆ, ರೈತವರ್ಗ ಉದ್ಧಾರವಾಗುವುದಿಲ್ಲ. ಇವತ್ತು ಏನಾಗುತ್ತಿದೆ ಎಂದರೆ Let us use chemical manue because of advancement of agriultural sciences. ಬೇಕಾದಷ್ಟು ಇದೆ. ಇದನ್ನು ನಾವು ಏನು ಮಾಡಬೇಕೆಂದರೆ, ಮೊದಲು ಹೇಗಾದರೂ ಮಾಡಿ you take it up with Government of India. ಸೆಂಟ್ರಲ್ ಬಜೆಟ್‌ನ ಪ್ರತಿಯೊಂದು ಹಾಳೆಯನ್ನೂ ನಾನು ತಿರುವಿ ಹಾಕಿದ್ದೇನೆ. ಫಾರ್ಮಿಂಗ್ ಕಮ್ಯುನಿಟಿ ಇದೆಯಲ್ಲ ಅಧಕ್ಕೆ ಒಂದಿಷ್ಟು ಹಣ ಇಟ್ಟು, ಉಳಿದೆಲ್ಲ ವಿಚಾರವನ್ನು ಒಂದು ಪಟ್ಟಿ ಮಾಡಿದ್ದಾರೆ. ಹೋಯಿತು ಅದು, ಫಾರ್ಮಿಂಗ್ ಕಮ್ಯುನಿಟಿ ಏತಕ್ಕೂ ಬರುವುದಿಲ್ಲ. ನೀವೇನು ಫುಡ್ ಔಟ್‌ಪುಟ್ ರೀಚ್ ಆಗಬೇಕೆಂದು ಇದ್ದೀರಿ ನೀವು ಅದನ್ನು ಮುಟ್ಟುವುದಕ್ಕಾಗುವುದಿಲ್ಲ, ಅದು ನಿಮ್ಮಿಂದ ಆಗುವುದಿಲ್ಲ ಎಂಬ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಪ್ರೊ. ಎಂ.ಡಿ. ನಂಜುಂಡಸ್ವಾಮಿ : ನಿನ್ನೆ ಡಿಸ್‌ಕಷನ್ ಮಾಡುವಾಗ ಉಪಮುಖ್ಯಮಂತ್ರಿಗಳು ಇದ್ದಾಗ ಹೇಳಿದ್ದೆ, ನಿಮ್ಮ ಸರ್ಕಾರಕ್ಕಾಗಲೀ ಅಥವಾ ಕೇಂದ್ರದಲ್ಲಿರುವ ನಿಮ್ಮ ಸರ್ಕಾರಕ್ಕಾಗಲೀ ಇದನ್ನು ಸರಿಪಡಿಸುವ ಶಕ್ತಿ ಉಳಿದಿಲ್ಲ ಎಂದು. ನಿನ್ನೆ ಪವರ್ ಸಬ್ಸಿಡಿ ಬಗ್ಗೆ ಮಾತನಾಡುತ್ತಿದ್ದರು. ಇವತ್ತು ಮಾನ್ಯ ಬಂಗಾರಪ್ಪನವರು ಫರ್ಟಿಲೈಸರ್ ಸಬ್ಸಿಡಿ ಬಗ್ಗೆ ಮಾತನಾಡುತ್ತಿದ್ದಾರೆ. ಈ ತೀರ್ಮಾನವನ್ನು ದೆಹಲಿಯಲ್ಲಿ ಮಾಡುತ್ತಿಲ್ಲ. ವಾಷಿಂಗ್‌ಟನ್‌ನಲ್ಲಿ ಆಗುತ್ತಿದೆ, ಇಧಕ್ಕೆ ಏನು ಮಾಡುತ್ತೀರಿ?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಏನು ಮಾಡುವುದು. ಕೇಂದ್ರ ಸರ್ಕಾರದ ವಿಚಾರದಲ್ಲಿ ನಾವಾಗಲಿ, ನೀವಾಗಲಿ ಇಲ್ಲಿ ಭಾಷಣ ಮಾಡುವ ಹಾಗೆ ಇಲ್ಲ. But generally we can touch it to some extent I have gone through in detail the budget presented recently in the Parliament by Government of India. ನಾನು ಅದರ ಮೇಲೆ ಮಾತನಾಡುವುದಕ್ಕೆ ಹೋದರೆ, ಪಾರ್ಲಿಮೆಂಟ್‌ನಲ್ಲಿ ಮಾತನಾಡುತ್ತಿದ್ದೀರೋ, ಎಲ್ಲಿ ಮಾತನಾಡುತ್ತಿದ್ದೀರಿ ಎಂದು ನಾಳೆ ನೀವೇ ಪ್ರಶ್ನೆ ಕೇಳುತ್ತೀರಿ. ಅದಕ್ಕಾಗಿ ನಾನು ಅದರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ನಮ್ಮ ಕಳಕಳಿ ಏನಿದೆ ಅಂದರೆ, the total target of output ಎನಿದೆ ಅದರಲ್ಲಿ ನಾವು ಫೇಲ್ ಆಗುತ್ತಾ ಇದ್ದೇವೆ. ನಾನು ಈಗಲೇ ಫೋರ್‌ವಾರ್ನ್ ಮಾಡುತ್ತಿದ್ದೇನೆ. ಅದಕ್ಕೆ ಏನು ಮಾಡಬೇಕೆನ್ನುವ ವಿಚಾರದಲ್ಲಿ you take up this matter with other Chief Ministers. That is exactly what I did. ನೀವು ಪ್ರಧಾನ ಮಂತ್ರಿಗಳ ಜೊತೆಗೆ, ಫೈನಾನ್ಸ್ ಮಿನಿಸ್ಟರ್ ಜೊತೆಗೆ, ಅಗ್ರಿಕಲ್ಚರ್ ಮಿನಿಸ್ಟರ್ ಜೊತೆಗೆ ಮಾತನಾಡಿ ಈ

ಕೆಲಸವನ್ನು ತೆಗೆದುಕೊಳ್ಳಿ. ನೀವು ಮಾಡದಿದ್ದರೆ ಯಾವುದಕ್ಕೂ ಬರುವುದಿಲ್ಲ ಎನ್ನುವ ದೃಷ್ಟಿಯಿಂದ ಒಂದು ಸಲಹೆ ಮಾತ್ರ ಕೊಟ್ಟಿದ್ದೇನೆ.

ಇನ್ನು ಫ್ಲಡ್ ಡ್ಯಾಮೇಜ್ ವಿಚಾರದಲ್ಲಿ ಹೇಳಬೇಕಾದರೆ, ಅರ್ಧ ಟಚ್‌ಮಾಡಿ ನಾನು ಅದನ್ನು ಬಿಟ್ಟುಬಿಟ್ಟೆ. ಪರಿಹಾರ ಕೊಡತಕ್ಕ ಬಗ್ಗೆ ಹೇಳುವುದಾದರೆ, ಹೌಸಸ್ ಎಲ್ಲೆಲ್ಲಿ ಹೋಗಿದೆ ಅಲ್ಲಿ ಒಂದು ಮನೆಗೆ 200-250-300 ಹೆಚ್ಚು ಅಂದರೆ 500 ರೂಪಾಯಿಗಳನ್ನು ಕೊಟ್ಟಿದ್ದು ಬಿಟ್ಟರೆ ಉಳಿದಿರತಕ್ಕ ಹಣವನ್ನು ಕೊಟ್ಟಿಲ್ಲ ಎಂದು ಜನ ಕಂಪ್ಲೈಂಟ್ ಮಾಡಿದ್ದಾರೆ. ಕಾರವಾರ ಜಿಲ್ಲೆ, ಧಾರವಾಡ ಜಿಲ್ಲೆಯ ಅನೇಕ ಭಾಗಗಳಿಗೆ ನಾನು ಕೂಡ ಹೋಗಿ ಬಂದಿದ್ದೇನೆ. ಬೆಳೆ ಹಾಳಾಗಿದೆ. ಭತ್ತ ಮುಗ್ಗಲು ಆಗಿದೆ, ಮೆಣಸಿನಕಾಯಿ ಹೊರಟುಹೋಗಿದೆ, ಜೋಳ, ಶೇಂಗಾ, ಹತ್ತಿ, ಎಲ್ಲಾ ಹೋಗಿದೆ. ಅದಕ್ಕೆ ಯಾರೂ ಕೂಡ ಸರಿಯಾದ ಪರಿಹಾರ ಕೊಡತಕ್ಕ ಕೆಲಸ ಮಾಡಲಿಲ್ಲ. ಆದ್ದರಿಂದ ಈಗಲಾದರೂ ಕೂಡ ಆ ಕೆಲಸವನ್ನು ತೆಗೆದುಕೊಳ್ಳಬೇಕು. ರೈತರ ಹತ್ತಿರ ಹೋಗುವದಕ್ಕೆ ನಿಮಗೆ ನೈತಿಕ ಹಕ್ಕು ಉಳಿಯುವುದಿಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. 1992-93ರಲ್ಲಿ 53 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ನಾನು ಕೇಳುತ್ತಿದ್ದೇನೆ, ನಿವು ಏಕೆ ಫ್ಲಡ್ ಡ್ಯಾಮೇಜ್‌ಗೆ 50 ಕೋಟಿ ರೂಪಾಯಿಗೆ, ಕನೆಫೈನ್ ಆಗುತ್ತಾ ಇದ್ದೀರಿ? you go beyond that and stretch you hand more than 53 or 60 crores. ಇದರಲ್ಲಿ ಮೇಲ್ಗಡೆ ಹೋಗಬೇಕು. ಇಷ್ಟು ವಿಚಾರವನ್ನು ಈ ಸಂದರ್ಭದಲ್ಲಿ ಹೇಳುತ್ತಾ ಇನ್ನು ಉಳಿದಿರತಕ್ಕದ್ದು ಟ್ಯಾಕ್ಸ್ ಐಟಮ್ಸ್. ನಾನು ಚೀಫ್‌ಮಿನಿಸ್ಟರ್ ಇದ್ದಾಗ ಒಂದೆರಡು ಐಟಂಗಳಿಗೆ ನಾವು ಟ್ಯಾಕ್ಸ್ ತೆಗೆದುಹಾಕಿದ್ದೇವೆ. ಅಲ್ಯೂಮಿನಿಯಂ ಪಾತ್ರೆಗಳು, ಅವು ಬಡವರು ಉಪಯೋಗ ಮಾಡತಕ್ಕ ವಸ್ತುಗಳು. ಅಲ್ಯೂಮಿನಿಯಂ, ಹಿಟ್ಟು ಇತ್ಯಾದಿ ಪದಾರ್ಥಗಳ ಮೇಲೆ ನಾವು ಟ್ಯಾಕ್ಸ್ ತೆಗೆದುಹಾಕಿದ್ದೆವು. Again you have reintroduced the tax. Please remove that. ನೀವು ರಿಪ್ಲೈ ಕೊಡಬೇಕಾದರೆ ಅದನ್ನು ತೆಗೆದುಹಾಕಿದ್ದೇವೆಂದು ಹೇಳಿ. ಆಮೇಲೆ ಸೋಪು, ಅದಕ್ಕೆ 10 ಪರ್ಸೆಂಟ್ ಟ್ಯಾಕ್ಸ್ ಇರಬೇಕೆಂದು ಕಾಣುತ್ತದೆ. ಇವುಗಳನ್ನೆಲ್ಲ ಡೈಲಿ ಬಡವರು ಉಪಯೋಗ ಮಾಡುತ್ತಾರೆ. ಇಂತಹ ವಸ್ತುಗಳಿಗೆ ತೆರಿಗೆ ಹಾಕಬೇಡಿ. ನೀವು ತೆರಿಗೆ ಹಾಕುವುದು ಇದ್ದರೆ ಶ್ರೀಮಂತರು ಉಪಯೋಗ ಮಾಡತಕ್ಕ ಬೇರೆ ವಸ್ತುಗಳ ಮೇಲೆ ತೆರಿಗೆ ಹಾಕಬಹುದು. ಐಶ್ವರ್ಯವಂತರ ಮೇಲೆ ತೆರಿಗೆ ಹಾಕಿ. ಆಮೇಲೆ ಕನ್ನಡಕ, ಕೆಲವರು ಬಡವರು ಕೂಲಿ ಮಾಡತಕ್ಕವರು ಅವರ ಹತ್ತಿರ ಕನ್ನಡಕ ಕೂಡ ಇರುತ್ತದೆ. ಅವರನ್ನು ನಾವು ನೋಡಿಕೊಳ್ಳಬೇಕು. ಇಷ್ಟು ವ್ಯಾಲ್ಯೂ ಒಳಗೆ ಇರತಕ್ಕ ಕನ್ನಡಕಗಳಿಗೆ you make it free. ನಾನು ಒಂದು ಆರ್ಡರ್ ಕೂಡ ಮಾಡಿ ಇಟ್ಟಿದ್ದೇನೆ. ಅದನ್ನು ನೋಡಿ, ಅದು ಚೆನ್ನಾಗಿಲ್ಲವೆಂದರೆ ನೀವು ಇನ್ನೂ ಚೆನ್ನಾಗಿ ಮಾಡಿ, ನಾನು ಬೇಡವೆಂದು ಹೇಳುವುದಿಲ್ಲ. ಇನ್ನು ಕೆಲವು ಕಾರ್ಯಕ್ರಮಗಳು ಅಂದರೆ ಸಮಾಜದಲ್ಲಿರತಕ್ಕ ಬಡವರ್ಗಕ್ಕೆ ಕೊಟ್ಟಿರತಕ್ಕ ಕಾರ್ಯಕ್ರಮಗಳು. ನಾನು ಅದರ ಬಗ್ಗೆ ಮಾತನಾಡಿ ನನ್ನ ಭಾಷಣವನ್ನು ಮುಕ್ತಾಯ ಮಾಡಬಹುದೆನ್ನುವ ವಿಚಾರವನ್ನು ಇಟ್ಟುಕೊಂಡಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಏನು ಭಾಷಣ ಮಾಡಿದ್ದಾರೆಂದರೆ, ಮಾನ್ಯ ಬಂಗಾರಪ್ಪನವರು ಕೆಲವು ಕಾರ್ಯಕ್ರಮಗಳಿಗೆ ಹೊಸ ಹೊಸ ಹೆಸರು ಇಟ್ಟಿದ್ದರು, ನೀವು ಕೆಲವು ಹೆಸರು ಇಟ್ಟಿದ್ದೀರಿ, ಇದೇನು ಕಾಂಪಿಟೇಷನ್ ನಡೆಯುತ್ತಿದೆಯೇ ಎಂದು ಹೇಳಿದ್ದಾರೆ. ಸ್ವಾಮಿ, ನೀವೂ ಇಟ್ಟಿದ್ದೀರಿ. ತಾಳಿಭಾಗ್ಯ ಇವೆಲ್ಲ ಇದ್ದವು.

ಶ್ರೀ ಆರ್.ವಿ. ದೇಶಪಾಂಡೆ : ನಾನು ಏನು ಹೇಳಿದೆ ಅಂದರೆ, ನಿಮ್ಮ ಮೂರು ವರ್ಷಗಳ

ಕಾಲಾವಧಿಯಲ್ಲಿ ಮೂರು ಜನ ಮುಖ್ಯಮಂತ್ರಿಗಳಾದರು. ಪ್ರತಿಯೊಬ್ಬ ಮುಖ್ಯಮಂತ್ರಿಯೂ ಒಂದೊಂದು ಕಾರ್ಯಕ್ರಮವನ್ನು ತೆಗೆದುಕೊಂಡು ಬಂದರು. ವೀರೇಂದ್ರ ಪಾಟೀಲರು ಏನು ತೆಗೆದುಕೊಂಡು ಬಂದರು ಅದನ್ನು ಬಂಗಾರಪ್ಪನವರು ಮರೆತುಬಿಟ್ಟರು. ಬಂಗಾರಪ್ಪನವರು ಏನು ಕಾರ್ಯಕ್ರಮ ತೆಗೆದುಕೊಂಡು ಬಂದರು ಅದನ್ನು ತಾವು ಮರೆತಿದ್ದೀರಿ, ತಾವು ಹೊಸ ಹೊಸ ಹೆಸರು ಕೊಟ್ಟಿದ್ದೀರಿ, ಅದು ಮರೆತಿದ್ದೀರಿ ಎಂದು ನಾನು ಇಷ್ಟೇ ಹೇಳಿದ್ದುದು.

ಶ್ರೀ ಎಸ್. ಬಂಗಾರಪ್ಪ : ನೀವೂ ಸಹ ಮೂರು ಜನ ಚೀಫ್‌ಮಿನಿಸ್ಟರ್ ಮಾಡಿದ್ದರೆ ಇನ್ನೂ ಜಾಸ್ತಿ ಜಾಸ್ತಿ ಹೆಸರುಗಳನ್ನು ಇಡಬಹುದಾಗಿತ್ತು. ನಾವು ಮಾತನಾಡಬೇಕಾದರೆ ಹೇಳಿದ್ದು ನಿಜ.ಸೈಟು ಎನ್ನುವ ಬದಲು, ದೇವಾಲಯ ಕಟ್ಟಿಸು ಎನ್ನುವ ಬದಲು ಇವುಗಳಿಗೆ ಹೆಸರು ಕೊಟ್ಟರೆ ಈಸಿಯಾಗಿ ಅರ್ಥವಾಗುತ್ತದೆನ್ನುವ ದೃಷ್ಟಿಯಿಂದ ಹೆಸರು ಕೊಟ್ಟುಕೊಂಡಿದ್ದೇವೆ. ಇದರಲ್ಲಿ ವಿಶೇಷವೇನೂ ಇಲ್ಲ. ಬೇಡ ಅಂದರೆ ಹೆಸರುಗಳನ್ನು ನೀವು ತೆಗೆದುಹಾಕಿ. ಅದರಿಂದ ನನಗೇನೂ ಇಲ್ಲ. ಹೌದು ಹೆಸರು ಕೊಟ್ಟಿದ್ದೇವೆ, ಆಶ್ರಯ, ಆರಾಧನಾ ಈ ತರಹ. ಆಶ್ರಯದ ಬಗ್ಗೆ ನಾನು ಒಂದೇ ಒಂದು ವಿಷಯ ಹೇಳುವುದು. ಪ್ಲಾನಿಂಗ್ ಕಮಿಷನ್‌ದವರು ನನಗೆ ಸರ್ಟಿಫಿಕೇಟ್ ಕೊಟ್ಟಿದ್ದಾರೆಂದು ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಸೈಟು ಕೊಟ್ಟ ಬಗ್ಗೆ ಅವರೇ ಬರೆದುಕೊಂಡಿದ್ದಾರೆ. ಹಿಂದೆ ನಾನು ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ಅಡ್ಮಿನಿಸ್ಟ್ರೇಷನ್ ಇರಲಿಲ್ಲವೆ? 7 ಲಕ್ಷದ 60 ಸಾವಿರ ಸೈಟುಗಳನ್ನು ನಾವು ಕೊಟ್ಟಿರತಕ್ಕದ್ದು, within the course of two years. ಇವತ್ತು ತಾವೇ ಆಶ್ರಯ ಟಾಸ್ಕ್‌ಫೋರ್ಸ್ ಕಮಿಟಿಗೆ ಅಧ್ಯಕ್ಷರಾಗಿದ್ದೀರಿ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳ ಪ್ರತಿನಿಧಿಗಳೇ ಪ್ರಬಲರಾಗಿರಬೇಕು ಎನ್ನುವುದು ನನ್ನದು ಮುಲಭೂತವಾದ ನೀತಿ. ನಾನು ಅಧಿಕಾರದಲ್ಲಿದ್ದಾಗ ಅದು ನಮ್ಮ ನೀತಿ ಕೂಡ ಹೌದು. ನೀವು ಪ್ರಬಲರಾದರೆ ಜನ ನಿಮಗೆ ಗೊತ್ತಾಗುತ್ತಾರೆ. ಏಕೆಂದರೆ, ನಿಮ್ಮ ನಿಮ್ಮ ಕ್ಷೇತ್ರಗಳಲ್ಲಿ ನೀವು ಪ್ರಬಲರಾದರೆ ಅದು ಉಪಯೋಗವಾಗುತ್ತದೆನ್ನುವ ದೃಷ್ಟಿಯಿಂದ ನಾವು ಮಾಡಿರತಕ್ಕದ್ದು ಬಿಟ್ಟರೆ ಇನ್ನು ಯಾವುದೇ ಉದ್ದೇಶ ನನಗಂತೂ ಇರಲಿಲ್ಲ. ಇದನ್ನು ನಾನು ಸ್ಪಷ್ಟಪಡಿಸುತ್ತೇನೆ.

ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲಿ ಸರ್ಕಾರಿ ಜಾಗ ಇದೆ ಅಲ್ಲಿ, ನಾವು ಸೈಟುಗಳನ್ನು ಕೊಡುತ್ತಾ ಬಂದಿದ್ದೇವೆ. ಉಳಿದಿದ್ದುದಕ್ಕೆ ಹಣ ರಿಲೀಸ್ ಮಾಡಿ ಸುಮಾರು 60-70 ಕೋಟಿ ರೂಪಾಯಿಗಳನ್ನು ಕೊಟ್ಟು, ಇನ್ನೂ ಕೂಡ ಬೇಕಾದರೆ ಕೊಡುತ್ತೇನೆ ಎಂದು ನಾನು ಹೇಳಿದ್ದೇನೆ. ನಮ್ಮ ಕಾಲದಲ್ಲಿ ಹಣದ ಕೊರತೆ ಇರಲಿಲ್ಲ. ಆಧರೆ ನಿಮ್ಮ ಕಾಲದಲ್ಲಿ ಹಣದ ಕೊರತೆ ಇದೆ. ಇದು ಏತಕ್ಕೆ ಎಂದು ನನಗೆ ಅರ್ಥವಾಗದೇ ಇರತಕ್ಕಂಥ ವಿಚಾರ. ಆಮೇಲೆ ತಮಗೆ ಗೊತ್ತಿರುವ ಹಾಗೆ ತಾವೆಲ್ಲ ಅಧಿಕಾರಕ್ಕೆ ಬಂದಿರಿ. ನಮ್ಮ ಪಕ್ಷದ್ದೇ ಮಂತ್ರಿಮಂಡಲ ಇದೆ. ಅವರು ಬಂದ ತಕ್ಷಣ ಒಂದೇ ಸಮನೆ ಎನ್‌ಕ್ವೈರಿ ಶುರುವಾಗಿದೆ. ಎಲ್ಲಕಡೆ ಎನ್‌ಕ್ವೈರಿ ಮಾಡಿಕೊಂಡು ಸೈಟು ಕೊಡತಕ್ಕಂಥ ಕಾರ್ಯಕ್ರಮ ಮಲಗಿಬಿಟ್ಟದೆ, ಮೇಲಕ್ಕೆ ಏಳುವಹಾಗಿಲ್ಲ. ನಿಮ್ಮ ಎನ್‌ಕ್ವೈರಿ ಮುಗಿಸುವುದು ಯಾವಾಗ, ಸೈಟುಗಳನ್ನು ಕೊಡುವುದು ಯಾವಾಗ? ಶಾಸಕರು ಏನು ಉತ್ತರ ಕೊಡುತ್ತಾರೆ? ಅಥವಾ ನೀವು ಏನು ಉತ್ತರ ಕೊಡಿತ್ತೀರಿ? ಎಲ್ಲಾದರೂ ತಪ್ಪು ನಡೆದಿದ್ದರೆ ಎನ್‌ಕ್ವೈರಿ ಮಾಡಿಕೊಳ್ಳಿ, ನಾನು ಅದಕ್ಕೆ ಅಡ್ಡಿ ಬರುವುದಿಲ್ಲ. ಏನು ಎನ್‌ಕ್ವೈರಿ ಮಾಡುತ್ತೀರಿ? ನಮ್ಮ ಸರ್ಕಾರ ಇದ್ದಾಗ, ನೀವೇ ಮುಖ್ಯಮಂತ್ರಿಯಾಗಿ I am posing this question. Are you not a party in taking this decision? ಬೇಕಾದ ಡಿಸಿಶನ್ಸ್ ಎಲ್ಲಾ ಆದಮೇಲೆ, ನೀವು ಪಾರ್ಟಿಯಾದಮೇಲೆ ನೀವೇ ಎನ್‌ಕ್ವೈರಿಗೆ ಆರ್ಡರ್ ಮಾಡುವ ಹಾಗಿದ್ದರೆ ಇವತ್ತು ನೀವು ಪಾರ್ಟಿಯಾದರೂ ಕೂಡ ಎನ್‌ಕ್ವೈರಿ

ಮಾಡಿಸುತ್ತೇನೆ ಎಂದು ನೀವು ಹೇಳುತ್ತೀರಾ? ಇವತ್ತು ಎನ್‌ಕ್ವೈರಿ ಮಾಡಿಸಬೇಕು ಎನ್ನತಕ್ಕಂಥ ವಿಚಾರ ಇಟ್ಟುಕೊಂಡಿದ್ದರೆ, ಎಲ್ಲಾ ಕಡೆಗೂ ಎನ್‌ಕ್ವೈರಿ ಎಂದರೆ ಅಧಿಕಾರಿಗಳಲ್ಲಿ ಯಾವ ರೀತಿಯ ಸೈಕಾಲಜಿ ಡೆವಲಪ್ ಆಗಿದೆ ಗೊತ್ತೇನು? ಎನ್‌ಕ್ವೈರಿ ಮುಗಿಯುವವರಗೆ ಯಾರಿಗೂ ಸೈಟು ಕೊಡುವ ಹಾಗಿಲ್ಲ ಎಂದು ಎಲ್ಲರೂ ಮಲಗಿಬಿಟ್ಟಿದ್ದಾರೆ, ಏಕೆಂದರೆ ಎಂ.ಎಲ್.ಎ.ಗಳೂ ಸುಮ್ಮನೆ ಇದ್ದಾರೆ. ದಯವಿಟ್ಟು ಅವರನ್ನು ಕೇಳಿನೋಡಿ. ಇದು ಪಕ್ಷಬೇಧ ಮರೆತು ನಾನು ವಿಚಾರ ಮಾಡತಕ್ಕದ್ದು. What right you have got to stop? Icannot understand why this schem of sites to the siteless poor is stopped. ಸ್ಪಷ್ಟವಾದ ಮಾತಲ್ಲಿ ನಾನು ನಿಮಗೆ ವಿರೋಧ ಮಾುತ್ತಿದ್ದೇನೆ. ಫಾರೆಸ್ಟ್ ಏರಿಯಾದಲ್ಲಿ ಹುಟ್ಟಿ ಬೆಳೆದಿರತಕ್ಕಂಥವರು. In your district of South South Canara, Coorg, Sakaleshpur of Hassan District, ಚಿಕ್ಕಮಗಳೂರು ಜಿಲ್ಲೆಯ ಅನೇಕ ತಾಲ್ಲೂಕುಗಳು, ಶಿವಮೊಗ್ಗ ಜಿಲ್ಲೆ, ಕಾರವಾರ ಅದೇ ರೀತಿ ಧಾರವಾಡ ಜಿಲ್ಲೆಯ ಅನೇಕ ತಾಲ್ಲೂಕುಗಳು, ಬೆಳಗಾಂ ಜಿಲ್ಲೆಯ ಖಾನಾಪುರ ತಾಲ್ಲೂಕು ಮತ್ತು ಬಯಲುಸೀಮೆಯ ಕೆಲವು ಭಾಗಗಳಲ್ಲಿ ಫಾರೆಸ್ಟ್ ನಂಬರ್ಸ್ ಇವೆ. As we do it in revenue numbers ಉದಾಹರಣೆಗೆ ನಿಮ್ಮ ಬಿಜಾಪುರ ಜಿಲ್ಲೆಯ ರಬಕವಿಯಲ್ಲಿ ಒಂದು-ಒಂದೂವರೆ ಸಾವಿರ ಮನೆಗಳನ್ನು ಫಾರೆಸ್ಟ್ ನಂಬರಲ್ಲಿ ಕಟ್ಟಿದ್ದಾರೆ. ತಾವು ದಯವಿಟ್ಟು ರಬಕವಿಗೆ ಹೋಗಿ ಬನ್ನಿ. ಸುಮಾರು ಒಂದೂವರೆ-ಎರಡು ಸಾವಿರ ಜನಕ್ಕೆ ಹಕ್ಕುಪತ್ರಗಳನ್ನು ನಾನೇ ಕೊಟ್ಟು ಬಂದಿದ್ದೇನೆ. ಹಕ್ಕುಪತ್ರ ಎಂದರೆ ಅದು ಫಾರೆಸ್ಟ್ ನಂಬರ್. ನೀವು ಆರ್ಗುಮೆಂಟ್ ಮಾಡಬಹುದು. ಯಾರ‍್ಯಾರು ಏನೇನು ಆರ್ಗ್ಯುಮೆಂಟ್ ಮಾಡುತ್ತೀರಿ ಎಂದು ನನಗೆ ಗೊತ್ತಿದೆ, ನನಗೂ ಕಾನೂನು ಗೊತ್ತಿದೆ. ನಾವೆಲ್ಲ ಅಡ್ವೋಕೇಟ್ಸ್ ಇದ್ದೇವೆ. ಕಳೆದ ತಿಂಗಳಿಗೆ ಎಂ.ಎಲ್.ಎ. ಆಗಿ 20 ವರ್ಷವಾಯಿತು. ನಾವೆಲ್ಲ ತಿಳಿದುಕೊಂಡಿದ್ದೇವೆ. ಫಾರೆಸ್ಟ್ ಲ್ಯಾಂಡ್‌ನಲ್ಲಿ ಟೈಟಲ್ ಕೊಡುವುದಕ್ಕೆ ಅವರಿಗೆ ಹಕ್ಕಿಲ್ಲ. 20 30 ಅಡಿ ಇದ್ದ ಸೈಟುಗಳನ್ನು ತೆಗೆದುಹಾಕಿ 30 40 ಅಡಿ ಸೈಟುಗಳನ್ನಾಗಿ ಮಾಡಿದ್ದು, ಬಡವರಿಗೆ ಎಮ್ಮೆ ಅಥವಾ ಹಸುವನ್ನು ಕಟ್ಟಿಕೊಂಡಿರಲಿ ಎನ್ನುವ ದೃಷ್ಟಿಯಿಂದ ಮಾಡಿರತಕ್ಕದ್ದು. ಈ ಕಾರ್ಯಕ್ರಮ ಜನರಿಗೆ ಹುಚ್ಚುಹಿಡಿಸಿಬಿಟ್ಟಿದೆ. ಇದು ಒಳ್ಳೆಯ ಕಾರ್ಯಕ್ರಮ ಎಂದು ಹೇಳಿದ್ದೀರಿ. ಮೊನ್ನೆ ಶ್ರೀ ಯಡಿಯೂರಪ್ಪನವರು ಎಂದು ಕಾಣುತ್ತದೆ, ಅವರು ಕೂಡ ಹೇಳುತ್ತಿದ್ದರು. ಆದರೆ ಇವತ್ತು ಏನಾಗಿದೆ ಎಂದರೆ, ಫಾರೆಸ್ಟ್ ನಂಬರ್‌ನಲ್ಲಿ ನೀವು ಟೈಟಲ್ ಕೊಡುವುದಕ್ಕೆ ರಾಜ್ಯ ಸರ್ಕಾರಕ್ಕೆ ಹಕ್ಕಿಲ್ಲ. Central Forst conservation Act ಎಂದು ಅಲ್ಲಿದೆ. ಆದರೆ ನಾವು ಏನು ಮಾಡಿದೆವು ಅಂದರೆ ಸೆಂಟ್ರಲ್‌ನವರು ಒಂದು ಇಂಚು ಮುಟ್ಟುವುದಕ್ಕೆ ಬಿಡುತ್ತಾ ಇಲ್ಲ. Cultivation in forest and regulariation ಮಾಡುವುದಕ್ಕೆ ನಾನು ಮಾತನಾಡುತ್ತಿಲ್ಲ. ಜನ ಹೋಗಿ ವಾಸ ಮಾಡುತ್ತಾರೆ? ಕೊಡಬಾರದು ಎಂದು ಇದ್ದರೆ, ಹಾಗಾದರೆ ಎಲ್ಲಿ ಕೊಡಬೇಕು ಎನ್ನುವುದು ಕೂಡ . You are bound to make arrangements for a man who is siteless. Are you not bound by it? ಸರ್ಕಾರ ಅಧಿಕಾರದಲ್ಲಿ ಯಾವ ಪಕ್ಷದವರು ಇದ್ದರೂ ಕೂಡ ನೀವು ಆಲ್ಟರ್ ನೇಟೀವಾಗಿ ಸೈಟುಗಳನ್ನು ಮಾಡಬೇಕಾಗುತ್ತದೆ. You are bound to do it. I am posing this question to you. ಇವತ್ತು ಏನಾಗಿದೆ ಎಂದರೆ, ಒಂದು ಆರ್ಡರ್ ಕಳಿಸಿಕೊಟ್ಟಿದ್ದೀರಿ, ಕೇಂದ್ರ ಸರ್ಕಾರದ ಆ್ಯಕ್ಟ್ ಪ್ರಕಾರ ಟೈಟಲ್ ಕೊಡುವುದಕ್ಕೆ ನಮಗೆ ಅಧಿಕಾರ ಇಲ್ಲ ಎಂದು. ಆಗ ನಿಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು, ಬಂಟ್ವಾಳ ತೆಗೆದುಕೊಳ್ಳಿ ಅಥವಾ ನಿಮ್ಮದೇ ಕ್ಷೇತ್ರವಾದ ಕಾರ್ಕಳ ತೆಗೆದುಕೊಳ್ಳಿ, ಬೆಳ್ತಂಗಡಿ ತೆಗೆದುಕೊಳ್ಳಿ ಅಥವಾ ಶಿವಮೊಗ್ಗ

ಜಿಲ್ಲೆಯ ನನ್ನ ತಾಲ್ಲೂಕು ತೆಗೆದುಕೊಳ್ಳಿ. ಸುಮಾರಾಗಿ ಹತ್ತಿರಹತ್ತಿರ ಎರಡು ಲಕ್ಷ ಫಾರೆಸ್ಟ್ ಲ್ಯಾಂಡ್‌ನಲ್ಲಿ ನಾವು ಸ್ವಾಧೀನ ಪತ್ರ ಕೊಟ್ಟಿದ್ದೇವೆ. ದಯವಿಟ್ಟು ಓದಿನೋಡಿ. ನಾವು ಏನು ಬರೆದಿದ್ದೇವೆ ಎಂದರೆ ಕೇಂದ್ರ ಸರ್ಕಾರದ ಟೈಟಲ್ ಅನುಮೋದನೆಯನ್ನು ಅನುಸರಿಸಿ ಎಂದು ಬರೆದಿದ್ದೇವೆ. ಏಕೆಂದರೆ ಅವರು ಅಲ್ಲೇ ಹುಟ್ಟಿಬೆಳೆದಿದ್ದಾರೆ. ನೀವು ರಬಕವಿಗೆ ಹೋಗಿ ಎರಡು ಸಾವಿರ ಮನೆಗಳನ್ನು ಕೆಡವುತ್ತೀರೇನು? They have sent an order withdrawing all the allotment of these sites, wherever forst land is threre what right ytou have got, I would like to know from you. I cannot undrstand this. ಕೇಂದ್ರ ಸರ್ಕಾರಕ್ಕೆ ಒತ್ತಡ ತರಬೇಕು. ಇದಕ್ಕೆ ಒಪ್ಪಿಗೆ ಕೊಡಿ, 30x40 ಅಡಿ ಸೈಟು, ವಾಸ ಮಾಡುವುದಕ್ಕೆ, ಬೇರೆ ಕಲ್ಟಿವೇಷನ್‌ಗೆ ಇಲ್ಲ ಎನ್ನುವ ಮಾತು ಹೇಳುವ ಬದಲು ನೀವು ವಿತ್‌ಡ್ರಾ ಮಾಡಿದ್ದೀರಿ. in a district like Karwar, ನಿಮ್ಮ ಫಾರೆಸ್ಟ್-ರೇಂಜ್ ಆಫೀಸರ್, ಸಿದ್ದಾಪುರ ತಾಲ್ಲೂಕು, ಇವರಿಗೆ ಹೊರಟು ಹೋಗಿದೆ. I have seen the order ಇವತ್ತು ಏನಾಗಿದೆ ಎಂದರೆ ಯಾರು ಯಾರಿಗೆ ಫಾರೆಸ್ಟ್ ಲ್ಯಾಂಡ್‌ನಲ್ಲಿ 30x40 ಅಡಿ ಸೈಟು ಕೊಟ್ಟಿದ್ದೇವೆ, ಇವೆಲ್ಲವನ್ನೂ ಹಿಂದಕ್ಕೆ ತೆಗೆದುಕೊಳ್ಳಬೇಕಂದು ಕಲೆಕ್ಟ್ ಮಾಡುವುದಕ್ಕೆ ಹೋಗಿದ್ದಾರೆ. ಈ ರೀತಿ ಕಲೆಕ್ಟ್ ಮಾಡುವುದಕ್ಕೆ ಹೋದರೆ ನಿಮ್ಮನ್ನು ಹಾಗೆಯೇ ಬಿಡುತ್ತಾರೆಯೇ? ಆ ಬಡವನಿಗೆ ಕೊಟ್ಟಿರತಕ್ಕ ಪತ್ರವನ್ನು ಹಿಂದಕ್ಕೆ ತೆಗೆದುಕೊಂಡರೆ, ಅವನ ಗತಿ ಏನಾಗುತ್ತದೆ. ಇವತ್ತು ಕಾಂಗ್ರೆಸ್ ಪಕ್ಷದ ಸರ್ಕಾರದಲ್ಲಿ ಒಬ್ಬ ಮುಖ್ಯಮಂತ್ರಿಗಳ ಆಡಳಿತ ಪತ್ರ ಕೊಡುತ್ತದೆ, ಇನ್ನೊಬ್ಬ ಮುಖ್ಯಮಂತ್ರಿಗಳ ಆಡಳಿತ ಹಿಂದಕ್ಕೆ ತೆಗೆದುಕೊಳ್ಳುತ್ತದೆ. ನೀವು ಇದನ್ನು ಏಕೆ ಮಾಡುತ್ತೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ : ತಾವು ಚೆನ್ನಾಗಿ ಮಾತನಾಡುತ್ತಾ ಇದ್ದೀರಿ. ಆದರೆ, ಪತ್ರ ಹಿಂದೆ ತೆಗೆದುಕೊಳ್ಳುತ್ತೇವೆ ಎನ್ನುವ ಮಾತು ಸರಿಯಲ್ಲ. ಎಲ್ಲೂ ಕೂಡ ನಾವು ಪತ್ರ ಹಿಂದೆ ತೆಗೆದುಕೊಳ್ಳಲಿಲ್ಲ. ಎಲ್ಲಿ ಸೈಟು ಕೊಟ್ಟಿದೆ, ಅದನ್ನು ನಾವು ಊರ್ಜಿತ ಮಾಡುತ್ತಿದ್ದೇವೆ. ಅದನ್ನು ಹಿಂದೆ ತೆಗೆದುಕೊಳ್ಳತಕ್ಕ ಯಾವುದೇ ಒಂದು ಆದೇಶವನ್ನು ಸರ್ಕಾರವು ಕೊಟ್ಟಿಲ್ಲ. ಅದನ್ನು ಊರ್ಜಿತ ಮಾಡಿದ್ದೇವೆ. ನಾನು ಒಪ್ಪುತ್ತೇನೆ, ತಾವು ಸೈಟು ಕೊಡತಕ್ಕ ವಿಷಯದಲ್ಲಿ ಬಹಳ ಒಳ್ಳೆಯ ಕಾರ್ಯಕ್ರಮ ಮಾಡಿದ್ದೀರಿ, ಅದನ್ನು ಮುಂದುವರಿಸಿಕೊಂಡು ಹೋಗುತ್ತೇವೆ. ಇದರಲ್ಲಿ ನಮ್ಮದೇನೂ ವಾದ ಇಲ್ಲ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ದಯಮಾಡಿ, ನೀವು ಇಲ್ಲಿ ಹೇಳಿದ್ದಾಯಿತು. ಇದು ನಾಳೆ ಪತ್ರಿಕೆಯಲ್ಲಿ ಬರುತ್ತದೆಯೇ ಇಲ್ಲವೋ ಗೊತ್ತಿಲ್ಲ. ಅಧಿಕಾರಿಗಳು ಏನು ಮಾಡುತ್ತಾರೆ ನನಗೆ ಗೊತ್ತಿಲ್ಲ. ದಯಮಾಡಿ ಒಂದು ಆರ್ಡರ್ ಕಳುಹಿಸಿಕೊಡಿ. ಎಲ್ಲೆಲ್ಲಿ ಫಾರೆಸ್ಟ್ ಲ್ಯಾಂಡ್‌ನಲ್ಲಿ ನಿವೇಶನ ರಹಿತರಿಗೆ ಕೊಟ್ಟಿದ್ದೇವೆ, ಈ ನಿವೇಶನಗಳನ್ನು ಯಾರೂ ಹಿಂದೆ ಪಡೆಯುವ ಹಾಗಿಲ್ಲ ಎಂದು ಆರ್ಡರನ್ನು ನಾಳೆಯೇ ಇಷ್ಯೂ ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಯಾರಾದರೂ ಅಧಿಕಾರಿಗಳಿಗೆ ಇಂತಹ ಸ್ಪಷ್ಟೀಕರಣ ಬೇಕಾದರೆ, ಈ ಸದನದಿಂದ ಹೇಳಿಕೆ ಮಾಡುವುದೇ ಸ್ಪಷ್ಟೀಕರಣ. ಬೇಕಾದರೆ ಬರೆದು ಕೂಡ ಕಳುಹಿಸಿಕೊಡುತ್ತೇವೆ. ಇದಕ್ಕೆ ಅನುಮಾನ ಇಲ್ಲ. ಆದರೆ, ಹಿಂದೆ ಪಡೆಯತಕ್ಕ ಯಾವ ಆದೇಶವನ್ನೂ ಕೊಟ್ಟಿಲ್ಲ. ಓರಲ್ ಆಗಿಯೂ ಹೇಳಿಲ್ಲ, ಬರವಣಿಗೆಯ.ಲ್ಲೂ ಕೊಟ್ಟಿಲ್ಲ. ಮುಂದೆಯೂ ಕೂಡ ಈ ಸೈಟು ಹೆಚ್ಚು ಕೊಡಬೇಕೆಂದು, ತೀವ್ರಗತಿಯಿಂದ, ಇದರ ವೇಗವನ್ನು ಮುಂದುವರಿಸಿಕೊಂಡು

ಹೋಗುತ್ತೇವೆ.

Sri S. Bangaappa : The programme given by the Goverrnment headed by myself, by me, all these things are touched. ಇದು ನನಗೆ ಅರ್ಥವಾಗದಿರತಕ್ಕ ವಿಚಾರ. ನಾನು ಅಧಿಕಾರ ಕಳೆದುಕೊಳ್ಳುವುದಕ್ಕೆ ಕಿಂಚಿತ್ತೂ ಯೋಚನೆ ಮಾಡಲಿಲ್ಲ. Bangarappa is Bangarappa ನಾನು ಅದರ ಬಗ್ಗೆ ಯೋಚನೆ ಮಾಡುವುದಿಲ್ಲ. I know where I stand. ನನಗೆ ಎಲ್ಲವೂ ಗೊತ್ತಿದೆ. ಆಧರೆ, heart-felt programmes ಎನ್ನತಕ್ಕ ವಿಚಾರ. These are all the heart-felt programmes, Are you not concerned about th poorer sections who are oppresed and dippressed? ತಾವು ಶಾಸಕರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಸ್ಟ್ಯಾಂಗ್ ಆಗಿಲ್ಲ. ಅಧನ್ನು ನೋಡಿ ಸತೋಷಪಡತಕ್ಕ ಬುದ್ಧಿ ನಮಗೆ ಬೇಡ. ಮೊದಲು, ಎಲ್ಲೆಲ್ಲಿ ತಪ್ಪಾಗಿದೆ, ಅಂತಹ ಕಡೆಗಳಳ್ಲಿ ಎನ್‌ಕ್ವೈರಿ ಮಾಡಿ. ನನ್ನ ಕಾಲದಲ್ಲಿಯೂ ಕೂಡ, ಆಶ್ರಯ ಸ್ಕೀಮಿನಲ್ಲಿ, ಮಡಿಕೇರಿಯಲ್ಲಿ ಅಂದರೆ, ಹಾಲಿ ಚಿನ್ನಪ್ಪನವರು ಮಂತ್ರಿಗಳಾಗಿದ್ದಾರಲ್ಲ, ಅವರ ಕ್ಷೇತ್ರದಲ್ಲಿ ಎನ್‌ಕ್ವೈರಿ ಮಾಡಿಸಿದ್ದೇವೆ. ಅಲ್ಲಿ ಬಿ.ಡಿ.ಓ. ಸಸ್ಪೆಂಡ್ ಮಾಡಿದ್ದೇವೆಂದು ಕಾಣುತ್ತದೆ. ಅದೇ ರೀತಿ ಚನ್ನಪಟ್ಟಣ, ರಾಮನಗರ ಈ ಕಡೆಗಳಲ್ಲೂ ಕೂಡ ಮಾಡಿದ್ದೇವೆ. ಒಂದೆರಡು ದೂರುಗಳು ಬಂದಿದ್ದವು. ಆಧರೆ, ನಾನು ಅಧಿಕಾರ ಬಿಟ್ಟ ತಕ್ಷಣ ಒಂದೇ ಸಾರಿ ದೂರುಗಳು ಬಂದಿವೆ, ಹಾಗಾದರೆ ಮೊದಲು ಏಕೆ ಬರಲಿಲ್ಲ. ಈಗ ಏಕೆ ದೂರುಗಳು ಪ್ರಾರಂಭವಾಯಿತು. ನಾನು ಹೇಳುತ್ತೇನೆ, ನೀವು ಎನ್‌ಕ್ವೈರಿ ಮಾಡುವುದಕ್ಕೇ ಒಬ್ಬ ಮಂತ್ರಿಗಳನ್ನು ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಸೈಟು ಕೊಡಬೇಕಾದರೆ ಒಬ್ಬ ಮಂತ್ರಿ ಇರುತ್ತಾರೆ. ಇದರ ಬಗ್ಗೆ ಬಹಳ ಎಚ್ಚರ ಮತ್ತು ಜವಾಬ್ದಾರಿ ಇರಬೇಕಾಗುತ್ತದೆ. ಬರೀ ಎನ್‌ಕ್ವೈರಿ ಮಾಡಿಸುತ್ತೇವೆಂದು ಹೇಳಿಕೆ ಕೊಡುತ್ತಾ ಹೋದರೆ, ನಾನು ಹೇಳುತ್ತೇನೆ, ಡ್ಯಾಮ್ ಚೀಪ್ ಆಗಿ, ನಾಳೆ ಏತಕ್ಕೂ ಬಾರದೆ, ರೋಡಿನಲ್ಲಿ ಇದಕ್ಕೆ ಮೂರು ಪೈಸೆ ಬೆಲೆ ಸಿಕ್ಕುವುದಿಲ್ಲ. ಬಹಳ ಎಚ್ಚರಿಕೆ ಇಟ್ಟುಕೊಳ್ಳಿ. Power come and power goes but, you give instructions to all your Ministers who are all the hon. Members of this House. I have got grat respect. ಅವರಿಗೆ ಜವಾಬ್ದಾರಿ ಕೊಟ್ಟು, ಈ ರೀತಿ ಪದೇ ಪದೇ ಹೇಳಿಕೆ ಕೊಡುತ್ತಾ ಹೋದರೆ, it may low down the imag of your administration. You cannot face them. Sites to siteless people as far as construction of houses are is concerned, ದಯಮಾಡಿ ಮರೆಯಬೇಡಿ..

ಸ್ವಾಮಿ, ಸೈಟು ಕೊಡತಕ್ಕ ವಿಚಾರದಲ್ಲಿ 7 ಲಕ್ಷದ 60 ಸಾವಿರ ಎಂದರೆ, ನನಗನ್ನಿಸುತ್ತದೆ ಇನ್ನು ಒಂದೆರಡು ತಿಂಗಳಿನಲ್ಲಿ ನಾನು ಇದ್ದಿದ್ದರೆ 10 lakhs sites distribution ಕೆಲಸವನ್ನು ನಾನು ಮುಗಿಸುತ್ತಿದ್ದೆ. ಅನೇಕ ಕಡೆಗಳಲ್ಲಿ ರೆಡಿ ಇತ್ತು. ಅನೇಕ ಕಡೆಗಳಲ್ಲಿ ನಾನು ಕೊಡುವುದಕ್ಕೆ ಟೈಂ ಆಗಲಿಲ್ಲ. ನನಗೋಸ್ಕರ ಜನ ಕಾಯುತ್ತಿದ್ದರು. 50-60 ಸಾವಿರ ಎಂದರೆ ನಗರ ಮತ್ತು ಪಟ್ಟಣಗಳ ವಿಚಾರ ನಾನು ಹೇಳುವುದು. ಆದರೆ, ಹಳ್ಳಿಗಳ ಕಡೆಗೂ ಕೂಡ ತಾವು ಮಾಡುತ್ತಿದ್ದೀರಿ, ಶಾಸಕ ಮಿತ್ರರರು ಸೇರಿ ಮಾಡುತ್ತಿದ್ದೀರಿ. ಈ ರೀತಿ ನಿಲ್ಲಿಸಿದ್ದರಿಂದ ಪರಿಸ್ಥಿತಿ ಏನಾಗಿದೆಯೆಂದರೆ ಸೈಟು ಹಿಂದೆ ತೆಗೆದುಕೊಳ್ಳುತ್ತಾರೆಂದು ಸುದ್ದಿ ಆಗಲೆ ಪ್ರಾರಂಭವಾಗಿದೆ. ಅದಕ್ಕೆ ಈಗ ಸ್ಪಷ್ಟೀಕರಣ ಮಾಡಿದ್ದೀರಿ. ಇದರ ಬಗ್ಗೆ ಸಂಬಂಧ್ಪಟ್ಟ ಮಂತ್ರಿಗಳೂ ಕೂಡ ಪ್ರತ್ಯೇಕವಾದ ಹೇಳಿಕೆ ಕೊಡಬಬೇಕು, ಹಿಂದೆ ಸೈಟು ಕೊಟ್ಟಿರುವವರನ್ನು ನಾವು ಮುಟ್ಟುವುದಿಲ್ಲ ಎಂದು. ಮೊನ್ನೆ ಬೆಂಗಳೂರಿನ ಒಂದು

ದೇವಸ್ಥಾನದ ಉದ್ಘಾಟನೆಗೆ ಹೋಗಿದ್ದಿರಿ, ನಾನೂ ಕೂಡ ಹೋಗಿ ಬಂದೆ. ಬರಬೇಕಾದರೆ, ಜನ ನನ ಕಾರನ್ನು ಅಡ್ಡ ಹಾಕಿದರು. ಅದು ಎಲ್ಲಿ ಅಂದರೆ ಬನ್ನೇರುಘಟ್ಟ ರೋಡ್‌ನಲ್ಲಿ ಡ್ರೈವಿಂಗ್ ಥಿಯೇಟರ್ ಹತ್ತಿರ. ಸ್ವಾಮಿ ತಾವೆಲ್ಲಾ ಪತ್ರ ಕೊಟ್ಟಿದ್ದೀರಿ ಅವುಗಳನ್ನು ಕಲೆಕ್ಟ್ ಮಾಡುವುದಕ್ಕೆ ನಿಮ್ಮ ಆಫೀಸರ್ಸ್ ಬರುತ್ತಾರೆ ಎಂದು ಹೇಳಿದರು. ಆ ವಿವರಗಳು ಬೇಕಾದರೆ ನಾನು ನಿಮಗೆ ಕಳುಹಿಸಿಕೊಡುತ್ತೇನೆ. ನಾನು ಹೇಳಿತ್ತೇನೆ. Officers of the Government, they have no rigt, when once the valuable land is given in favour of SCs/STs and people belonging to lower strate of the society. ಏಕೆಂದರೆ, ಅದು ವ್ಯಾಲ್ಯುಬಲ್ ಲ್ಯಾಂಡ್. ಅವರು ಹರಿಜನರು ಗಿರಿಜನರು, ನನಗೆ ಗೊತ್ತು. ಲೇಟಾದರೆ ಆ ಜಾಗ ದೊಡ್ಡ ದೊಡ್ಡವರ ಪಾಲಿಗೆ ಹೋಗುತ್ತದೆಂದು ನಾನು ಅರ್ಜೆಂಟಾಗಿ ಮಾಡಿಸಿದ್ದೆ. ಆ ಗ್ರಾಮಗಳು ಕೂಡ ನನಗೆಲ್ಲಾ ಗೊತ್ತು. ಅವನು ನಾಳೆ ಏನಾದರೂ ಮಾರಾಟ ಮಾಡಿಕೊಂಡ ಎಂದು ಇಟ್ಟುಕೊಳ್ಳೋಣ. ಅದನ್ನು ಮಾರಾಟ ಮಾಡುವಂತೆ ಇಲ್ಲ. ಆ ಕಂಡೀಷನ್ಸ್ ಎಲ್ಲಾ ಹಿಂದೆ ಹಾಕಿದ್ದೇವೆ. ಮಾರಾಟ ಮಾಡಿದರೂ ಕೂಡ ಎರಡು ಲಕ್ಷ, ಮೂರು ಲಕ್ಷ ರೂಪಾಯಿ ಆ ಬಡವನಿಗೆ ಸಿಗುತ್ತದೆ. ನೀವು ದೊಡ್ಡವರ ಹೊಟ್ಟೆಗೆ ಏಕೆ ತುಂಬುತ್ತೀರಿ. ಇದು ನನ್ನ ವಿಚಾರಧಾರೆ ಆಗಿತ್ತು. ಇವತ್ತು ಹೋಗಿ ಪತ್ರ ವಾಪಸ್ ತೆಗೆದುಕೊಳ್ಳುವುದೇ. ಅವರು ಒಂದು ದಿವಸ ಪತ್ರ ಹೊತ್ತುಕೊಂಡು ಬಂದಿದ್ದರು. ನಿಮ್ಮ ಮನೆಯಲ್ಲಿಡುತ್ತೇವೆ ಸ್ವಾಮಿ ನೀವು ಕೊಡಿಸಿದವು, ನಿಮ್ಮ ಮನೆಯಲ್ಲಿಟ್ಟು ಬಿಟ್ಟರೆ ಗ್ಯಾರಂಟಿ ಆಗುತ್ತದೆ ನಮ್ಮ ಮನೆಯಲ್ಲಿಟ್ಟರೆ ಬಂದು ಎಲ್ಲಾ ಕಿತ್ತುಕೊಂಡು ಹೋಗುತ್ತಾರೆ ಎಂದು ಹೇಳಿ. ಇಷ್ಟು ಪತ್ರಗಳನ್ನು ದಾರ ಕಟ್ಟಿ ಹೊತ್ತುಕೊಂಡು ಬಂದಿದ್ದರು. ಕಡೆಗೆ ಬಂಗಾರಪ್ಪನವರು ಪತ್ರ ತೆಗೆದುಕೊಂಡಿದ್ದಾರೆ ಎಂದು ವ್ಯವಹಾರ ಆಗುತ್ತದೆ ಏಕೆಂದರೆ ಎನ್‌ಕ್ವೈರಿ ಮಾಡುವಂತಹ ಸಚಿವರು ಬಹಳ ಜೋರಾಗಿ ಇರುವುದರಿಂದ ಎನ್‌ಕ್ವೈರಿಗೆ ಬಂಗಾರಪ್ಪನವರನ್ನು ಸೇರಿಸಿಬಿಡಬಹುದು. ತಡೆಯಬೇಡಪ್ಪ ಆ ಪತ್ರದ ಸುದ್ದಿ ತರಬೇಡಿ ಎಂದು ನಾನು ಹೇಳಿ ಕಳುಹಿಸಿದ್ದೇನೆ. ನೀವು ಪತ್ರಗಳನ್ನು ಇಟುಕೊಳ್ಳಿ, ಧೈರ್ಯವಾಗಿರಿ ನೀವು ಕೊಡಬೇಡಿ, ಕೊಡಬೇಕಾದರೆ ಬಂಗಾರಪ್ಪನವರನ್ನು ಕೇಳಿ ಕೊಡುತ್ತೇವೆಂದು ನನ್ನ ಹೆಸರನ್ನಾದರೂ ಹೇಳಿ ಎಂದು ಹೇಳಿದೆ. ನಾನು ಹೇಳುವುದು ಸರ್ಕಾರದ ಬಗ್ಗೆ ಜನಕ್ಕೆ ನಂಬಿಕೆ ಬೇಕು. ಆ ನಂಬಿಕೆ ಬರತಕ್ಕಂಥ ಕಾರ್ಯಕ್ರಮವನ್ನು ತಾವು ಕಳೆದುಕೊಳ್ಳಬೇಡಿ. As far as the construction of houses is concerned ನಾನು 10-8 ಸಾರಿ ಹೇಳಿದ್ದೇನೆ. Yes it is true, the concept of the construction is different than what we see in the other areas of the country. ಅದರಲ್ಲಿ ನಮ್ಮ ಕಾನ್ಸೆಪ್ಟ್ ಬೇರೆ ಇದೆ. ನೀವು ತೆಗೆದುಕೊಂಡು ಹೋಗುವ ಹಂತದಲ್ಲಿ ನಾವು ನೋಡಿದ್ದೇವೆ. ಫೌಂಡೇಶನ್ ಹಾಕಿ ಗೋಡೆ ಕಟ್ಟಿ ಕಿತ್ತು ನುಗ್ಗೆ ಮರ, ಆಲವಾನೆ, ಮರ, ಬೂಡಲು ಮರ ಎಂಬ ಮರ ಹತ್ತಿ ಬಿದ್ದಂಗೆ ಬೀಳುತ್ತದೆ. ಆ ಮರ ತೆಗೆದುಕೊಂಡು ಹೋಗಿ ಬಾಗಿಲು ಕಿಟಕಿ ಮಾಡಿ ಹಾಕಿ ಬಡವರಿಗೆ ಮನೆ ಕಟ್ಟಿ ಕೊಟ್ಟಿದ್ದಾರೆ, ಟೇಪು ಕತ್ತರಿಸಿ ಕತ್ತರಿಸಿ ನಾವು ನೀವು ಎಲ್ಲರೂ ಸೇರಿ ಮಾನ ಮರ್ಯಾದೆ ಕಳೆದುಕೊಂಡು ಬಂದಿದ್ದೇವೆ. ದಯವಿಟ್ಟು ಆ ಕೆಲಸ ಮಾಡುವುದು ಬೇಡವೆಂದು ಸಿಮೆಂಟ್ ಮತ್ತು ಕಬ್ಬಿಣದಿಂದ ಫ್ರೀ ಪ್ಯಾಬ್ರಿಕೇಟೆಡ್ ಮಾಡಿ ಕಟ್ಟಬೇಕೆಂದು ಹೇಳಿದ್ದು ನಿಜ. ಅದರ ಬಗ್ಗೆ ಅಡ್ವಾನ್ಸ್ ಕೊಡುವುದು ಕರ್ನಾಟಕ ಹೌಸಿಂಗ್ ಬೋರ್ಡ್. ಆ ವಿಚಾರದಲ್ಲಿ ಕ್ಯಾಬಿನೆಟ್ ತೀರ್ಮಾನ ಮಾಡಿ ನಾವು ಅವರಿಗೆ ವಹಿಸಿಕೊಡುತ್ತೇವೆ. ನೀವು ಕೂಡ ಕಾನೂನು ಮಾಡಿ ಲೋಕೋಪಯೋಗಿ ಇಲಾಖೆಯ ಚೀಫ್ ಇಂಜನೀಯರ್‌ಗೆ ಹಣ ಕಳುಹಿಸಿಕೊಡುತ್ತೀರಿ. ನಾಳೆ ಅವನು ಏನಾದರೂ ತಪ್ಪು ಮಾಡಿದರೆ ಅವನ

ಮೇಲೆ ಎನ್‌ಕ್ವೈರಿ ಮಾಡಿ. ನಾನು ಬೇಡ ಎಂದು ಹೇಳುವುದಿಲ್ಲ. as far as Karnataka Housing Boarad is concerned, ನನಗೆ ಅದರ ಬಗ್ಗೆ ಪ್ರಶ್ನೆ ಅಲ್ಲ. Why did you stop the whole programme? Why did you do this, I cannot understand, I am very much pained about the stopping of the programme. ಬಡವರಿಗೆ ಸಿಮೆಂಟ್ ಮತ್ತು ಕಬ್ಬಿಣದಿಂದ ಮನೆ ಕಟ್ಟುವಾಗ ಆ ಫೌಂಡೇಶನ್ ನೋಡಿದರೆ ಸಾಕು ಒಳ್ಳೆಯ ಒಳ್ಳೆಯ ಫೌಂಡೇಶನ್. ಆಗಲೆ ಅನೇಕ ಕಡೆ ಅಂದರೆ ಮೊನ್ನೆ ಎಂದು ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನವರು ಬಂದಿದ್ದರು. ಸ್ವಾಮಿ, ನೀವು ಕಟ್ಟಿಸಿರುವ ಮನೆಗಳು, ನೀವು ಅವುಗಳ ಉದ್ಘಾಟನೆಗೆ ಬರಬೇಕು ಎಂದು ನನ್ನ ಹತ್ತಿರ ಬಂದಿದ್ದರು. ಯಾವ ರೀತಿ ಕಟ್ಟಿದ್ದಾರೆ ಎಂದು ನಾನು ಕೇಳಿದೆ. ಫೌಂಡೇಶನ್ ಸಿಮೆಂಟ್ ಇಟ್ಟಿಗೆಗಳು ಅವೆಲ್ಲಾ ಕರೆಕ್ಟ ಆಗಿ ಬಂದಿದೆ, ಭಾರಿ ಜೋರಾಗಿವೆ ಸ್ವಾಮಿ ನಿಜವಾಗಿಯೂ ನೋಡತಕ್ಕಂಥ ಮನೆಗಳು ಎಂದರು. ಆಮೇಲೆ ರೂಫ್ ಅಂದೆ. ಹೆಂಚು ಹಾಕಿದ್ದಾರೆ ಎಂದರು. ಹೆಂಚು ಹಾಕುವ ಕಾರ್ಯಕ್ರಮ ನನ್ನದರಲ್ಲಿ ಇಲ್ಲ. No, you cannot do that ಹೆಂಚು ಹಾಕಿದರೆ ಏನು ಆಗುತ್ತದೆ. ನವೆಂಬರ್ ತಿಂಗಳಲ್ಲಿ ನೀವು ಅಧಿಕಾರಿಕ್ಕೆ ಬಂದಿರಿ, ಅಲ್ಲಿಗೆ ನಿಲ್ಲಿಸಿ ಅಂದಿರಿ, ಹೆಂಚು ಕಳುಹಿಸಿಕೊಟ್ಟುಬಿಟ್ಟಿರಿ. ಏಕೆ? ಸಿಮೆಂಟ್, ರೂಫ್ಸ್ ಎಲ್ಲಿ ಹೋಯಿತು? ಆಶ್ರಯ ಸ್ಕೀಮ್ ಏಕೆ ನೀವು ಚೇಂಜ್ ಮಾಡಿದ್ದು? ಬಡವರು ಚಿಕ್ಕಮನೆಯಾದರೂ ಕೂಡ ಗಟಿಟಮುಟ್ಟಾದ ಮನೆಯಲ್ಲಿ ಏಕೆ ವಾಸ ಮಾಡಬಾರದು? ನೀವು ಏಕೆ ಹೆಂಚು ಹಾಕಿಸುತ್ತೀರಿ? ಸಿಮೆಂಟ್ ರೂಫ್ಸ್ ಅಂದರೆ ಆ ರ್‍ಯಾಪಟರ್ಸ್. ರಿಪೀಸು ಆಮೇಲೆ ರೀಪರ್ಸ್ ಹಾಕಿ ಮಾಡತಕ್ಕಂಥಾದ್ದು. ಆ ಪ್ರೊಗ್ರಾಂ. ಇವತ್ತು ಅದನ್ನು ಸಂಪೂರ್ಣವಾಗಿ ಹಾಳು ಮಾಡಿ ಅದಕ್ಕೆಲ್ಲಾ ತಿರುಚಿ ವ್ಯತ್ಯಾಸ ಮಾಡಿ ಯಾರ್‍ಯಾರೋ ಕೈಗೆ ಕೊಟ್ಟು ಮನಸ್ಸಿಗೆ ಬಂದಂತೆ ಹೇಳಿಕೆ ಕೊಟ್ಟುಕೊಳ್ಳುತ್ತಾ ಇದ್ದಾರೆ. ಮನೆಗಳು ಆಗಿರಲಿಲ್ಲ ನಿಜ. ಏಕೆಂದರೆ, ಅಧಕ್ಕೆ ಯಾರ್ಡ್ ಮಾಡಬೇಕು. ಫ್ರೀ ಫ್ಯಾಬ್ರಿಕೇಟ್ ಮಾಡುವುದಕ್ಕೆ ಮೆಷಿನ್ ಬೇಕು. ಮಾಡಬೇಕೆಂದು ತೀರ್ಮಾನ ಮಾಡಿ ಅಧಕ್ಕೆಲ್ಲಾ ವ್ಯವಸ್ಥೆ ಮಾಡುವುದಕ್ಕೆ ನಮಗೆ ಟೈಮ್ ಹಿಡಿದಿದೆ. ನಾನು ಜನಕ್ಕೆ ಹೇಳಿದ್ದೇನೆ. ಶಾಸನ ಸಭೆಯಲ್ಲಿ ಹೇಳಿದ್ದೇನೆ. ನಾನು ಮುಖ್ಯಮಂತ್ರಿಯಾಗಿದ್ದಾಗ ಲೇಟಾದರೂ ಚಿಂತೆ ಇಲ್ಲ, 6 ತಿಂಗಳು ಒಂದು ವರ್ಷ ಲೇಟಾದರೂ ಚಿಂತೆ ಇಲ್ಲ. ಗಟ್ಟಿ ಮುಟ್ಟಾದ ಮನೆಗಳು ಬರುತ್ತವೆ. ದಯೆಯಿಟ್ಟು ನೀವು ತಡೆದುಕೊಳ್ಳಬೇಕೆಂದು ನಾನು ಹೇಳಿದ್ದೇನೆ. ಲೇಟಾದರೆ ಏನೂ ಆಗುವುದಿಲ್ಲ ಎನ್ನತಕ್ಕಂಥ ದೃಷ್ಟಿಯಿಂದ ಹೇಳಿದ್ದೇನೆ. ಈಗ ನೀವು 3 ಸಾವಿರ ರೂಪಾಯಿ ಹೆಂಚಿಗೆ ಎಂದು ಹೇಳಿದ್ದಿರಿ. ಸ್ವಾಮಿ ನೀವು ಮನೆ ಯಾವ ತರಹ ಕಟ್ಟುತ್ತೀರಿ. ಅದೇ ಗೋಡೆ, ಅದೇ ಮರ, ಅದೇ ಕಿಟಕಿ, ಡೆಪ್ಯುಟಿ ಕಮಿಷನರ್ ಮುಖಾಂತರ ಏಕೆ ಕೊಡುತ್ತೀರಿ? ಡಿ.ಸಿ. ಯವರು ಮನೆ ಕಟ್ಟುತ್ತಾರೆಯೇ? ಅದೇ ಬಿ.ಡಿ.ಓ. ಅದೇ ಇಂಜನೀಯರ್ಸ್ ತೆಗೆದುಕೊಂಡು ಹೋಗಿ ಕಟ್ಟುತ್ತಾರೆ. ಮುಂದೆ ಸೌದೆ ಮರ ಕಟ್ಟಿ ಸರ್ಕಾರಕ್ಕೆ ಮಾನ ಮರ್ಯಾದೆ ಬರುವುದಿಲ್ಲ. ನಾನು ಹೇಳುತ್ತೇನೆ. You please listen from the engineers as to twhat my Government as done. ನೀವು ತೆಗೆದುಕೊಂಡು ಹೋಗಿ ಮನಸ್ಸಿಗೆ ಬಂದಂತೆ ಮಾಡುವುದು ಏನಿದೆ ಇದನ್ನ ಯಾರೂ ಕೂಡ ಮಾನ್ಯತೆ ಮಾಡುವುದಿಲ್ಲ. ಇದು ಬಡವರಿಗೆ ಮಾಡತಕ್ಕಂಥ ಮಾತು. ಅನ್ಯಾಯ. ನಾವು ಎಂದು ಲಕ್ಷ ಮನೆಗಳ ಟಾರ್ಗೆಟ್ ಇಟ್ಟಿದ್ದೆವು. ಲೇಟ್ ಆಗುತ್ತಿತ್ತು. ಏಕೆಂದರೆ, ನಿಮಗೆಲ್ಲಾ ಗೊತ್ತಿರುವ ಹಾಗೆ, ನ್ಯಾಷನಲ್ ಹೌಸಿಂಗ್ ಬ್ಯಾಂಕ್ ಸೆಕ್ಯುರಿಟೀಸ್ ಸ್ಕ್ಯಾಮ್‌ನಲ್ಲಿ ಸಿಕ್ಕಿಹಾಕಿಕೊಂಡಿತು. ಹಣ ನಮಗೆ ಒಂದು ರೂಪಾಯಿ ಬಂದಿಲ್ಲ. ಇನ್ನು ನಿಮ್ಮ ಹುಡ್ಕೋ. ಹುಡ್ಕೋ ಪೋರ್ಷನ್‌ಗೆ ಮಾತ್ರ ಎಷ್ಟು ಬೇಕೋ ಅಷ್ಟನ್ನು ತೆಗೆದುಕೊಳ್ಳತಕ್ಕಂಥ ಕೆಲಸ ನಾವು ಮಾಡಿದ್ದೇವೆ. Mr. Kagodu

Thimmappa, the then Chairman of the Housing Board ಅವರು ಬಾಂಬೆಗೆಲ್ಲಾ ಹೋಗಿ ಮಾತುಕತೆ ಎಲ್ಲಾ ಮಾಡಿಕೊಂಡು ಬಂದಿದ್ದರು. ಆ ಪೋರ್ಷನ್ ಹಣ ಎಲ್ಲಾ ಕೊಡುವುದಕ್ಕೆ ರೆಡಿ ಆಗಿ, ಆ ಹಣ ಕೂಡ ನಮಗೆ ಬಂತು. ಆದರೆ ಒಂದು ವಿಚಾರದಲ್ಲಿ ಒಂದೇ ಒಂದು ವಿಷಯ ನಾನು ಹೇಳುವುದು. ಆಗ ಪಕ್ಕಾ ಸ್ಕೀಮ್ ಏನಿತ್ತು ಅದನ್ನು ತಿರುಚತಕ್ಕಂಥ ಹಕ್ಕು ನಿಮಗೆ ಯಾರಿಗೂ ಕೂಡ ಬರುವುದಿಲ್ಲ. ಇದು ಬಡವರ ವಿಚಾರ ಎನ್ನತಕ್ಕಂಥ ದೃಷ್ಟಿಯಿಂದ ಈ ಮಾತನ್ನು ಆಡಿದ್ದೇನೆ. ಆಮೇಲೆ 1000 ಮನೆಗಳನ್ನು ಮಾಡಬೇಕೆಂದು ನಾವು ಉದ್ದೇಶ ಇಟ್ಟುಕೊಂಡಿದ್ದೆವು. ಇದನ್ನು 500ಕ್ಕೆ ಏಕೆ ಇಳಿಸಿದ್ದೀರಿ? ಏಕೆ ಹಣ ಇಲ್ಲವೆಂದೇ? ಸಾವಿರ ಎಂದು ನಾವು ಮಾಡುವುದು. ನೀವು ಬಂದು ಐನೂರು ಎಂದು ಮಾಡುವುದು. ಹೀಗೆ ಮನಸ್ಸಿಗೆ ಬಂದ ಹಾಗೆ ಮಾಡುತ್ತಾ ಹೋದರೆ ಬಡವರ ಕಾರ್ಯಕ್ರಮ ಮುಗಿಸುವುದು ಯಾವಾಗ? ಅಲ್ಲಿ ಪಾಪ್ಯುಲೇಷನ್ ಬೇರೆ ಏರಿ ಕುಳಿತುಕೊಂಡಿದೆ. ಇದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ನಾನು ಹೇಳುವುದು ಏನೆಂದರೆ ನಾವು ಮೊದಲು ಏನು ಮಾಡಿದ್ದೇವೋ ಆ ಕಾರ್ಯಕ್ರಮಗಳನ್ನು ಮುಂದುವರಿಸಿ. ನೀವು ಹೇಳತಕ್ಕಂಥ ಆ ತಿರಚುವುದು ಇದೆಯಲ್ಲಾ, ಆ ರುಚಿಯನ್ನು ಸಂಪೂರ್ಣವಾಗಿ ತೆಗೆದು ಆ ಕಡೆ ಬಿಸಾಕಿ. ಇಲ್ಲದಿದ್ದರೆ ಅದು ಯಾವುದಕ್ಕೂ ಬರುವುದಿಲ್ಲವೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆಮೇಲೆ ಶುಷ್ರೂಷ ಕಾರ್ಯಕ್ರಮ, ಇದು ಚೆನ್ನಾಗಿತ್ತು. ಆದರೆ ಏಕೋ ಅದು ಪಿಕಪ್ ಆಗಲಿಲ್ಲ. ಏಕೆಂದರೆ ನನಗೆ ಟೈಂ ಸಿಗಲಿಲ್ಲ. ಲಯನ್ಸ್ ಕ್ಲಬ್ ಮತ್ತು ರೋಟರಿ ಕ್ಲಬ್‌ನ್ನು ಅದರಲ್ಲಿ ಇನ್‌ವಾಲ್ವ್ ಮಾಡಬೇಕಾಗಿತ್ತು, ಅವರ ಜೊತೆ ಮೀಟಿಂಗ್ ಮಾಡಬೇಕಾಗಿತ್ತು. ಅದನ್ನು ಮಾಡಬೇಕೆಂದು ನಾನು ಅಸೆಂಬ್ಲಿಯಲ್ಲೂ ಹೇಳಿದ್ದೆ. ಮತ್ತೊಂದು ತಮಗೆ ಗೊತ್ತಿರುವ ಹಾಗ ಅಕ್ಷಯ ಕಾರ್ಯಕ್ರಮ. ತಾವು ಮಾನ್ಯ ಮುಖ್ಯ ಮಂತ್ರಿಗಳು ಗಮನಿಸಬೇಕು. You were the Education Minister in my Ministry. We were giving Rs. 1 per student per day You must be knowing the literacy percentage in the whole of the country. When we got the independence the liteacy percentage was 18. 18 ಪರ್‌ಸೆಂಟ್ ಮಾತ್ರ ಲಿಟ್ರೆಸಿ ಪರ್‌ಸೆಂಟೇಜ್ ಇದ್ದದ್ದು. Now we have reached 52%. Still 48% are illiterates. ಎಡಗೈ ಹೆಬ್ಬೆಟ್ಟಿನ ಗುರುತಿಗಾಗಿ ಮತ್ತೊಬ್ಬರನ್ನು ಕಾಯತಕ್ಕಂಥ ನಿರಕ್ಷರಕುಕ್ಷಿಗಳನ್ನು ಹೊಂದಿರತಕ್ಕಂಥ ಸಮಾಜ ನಮ್ಮದು. ಬಡ ಜನರು ತಂದೆತಾಯಿಗಳು ಕೂಲಿಗೆ ಹೋಗಬೇಕಾದರೆ ಮಕ್ಕಳನ್ನು ಕರೆದುಕೊಂಡು ಹೋಗುತ್ತಾರೆ, ಅವರ ಮಕ್ಕಳು ಸ್ಕೂಲಿಗೆ ಬರಲಿ ಎನ್ನುವ ದೃಷ್ಟಿಯಿಂದ ಇನ್‌ಸೆಂಟೀವ್ ಪ್ರೋಗ್ರಾಮ್ ಮಾಡಿದ್ದೆವು. 1 ರೂಪಾಯಿ ಕೊಡುತ್ತೇವೆಂದರೆ ಅವರು ಸ್ಕೂಲ್‌ಗೆ ಬಂದು ಅಕ್ಷರ ಕಲಿತು ಬುದ್ಧಿವಂತರಾಗುತ್ತಾರೆಂದು ನನ್ನ ಮನಸ್ಸಿನಲ್ಲಿತ್ತು. ನಾನು ಕೇಳುತ್ತೇನೆ, ಈ ಬಜೆಟ್‌ನಲ್ಲಿ ಆ ಕಾರ್ಯಕ್ರಮಕ್ಕೆ ಹಣ ಏಕೆ ಇಟ್ಟಿಲ್ಲ? ಅಕ್ಷಯ ಕಾರ್ಯಕ್ರಮ ಎಲ್ಲಿ ಹೋಯಿತು? ನಾನು ನಿಮ್ಮಿಂದ ಪೋರ್ಟ್‌ಫೋಲಿಯೋ ತೆಗೆದುಕೊಂಡ ಮೇಲೆ I released Rs. 45 crores and distributed the money on October 2nd last year. ಮಹಾತ್ಮಾಗಾಂಧಿ ಜಯಂತಿ ದಿವಸ. ನಾವು ಎಲ್ಲಾ ಕ್ಷೇತ್ರಗಳಲ್ಲೂ ಹಣ ಕೊಟ್ಟಿದ್ದೇವೆ. ಜೂನ್, ಜುಲೈ, ಮತ್ತು ಆಗಸ್ಟ್ 3 ತಿಂಗಳು ಹಣ ಕೊಟ್ಟಾದ ಮೇಲೆ ಬಡವರೆಲ್ಲಾ ಹುರುಪಿನಿಂದ ಮಕ್ಕಳನ್ನು ಸ್ಕೂಲ್‌ಗೆ ತುಂಬಿದರು. ಆ ಮಕ್ಕಳೆಲ್ಲಾ ನಮ್ಮವರು, ಅವರಿಗೆ ಅಕ್ಷರ ಜ್ಞಾನ ಕೊಟ್ಟು ಬುದ್ಧಿವಂತರನ್ನಾಗಿ ಮಾಡಬೇಕೆಂದು ನಮ್ಮೆಲ್ಲರ ಆಸೆಯಾಗಿತ್ತು. ಅದು ನಮ್ಮ ಕಮಿಟ್‌ಮೆಂಟ್ ಇದೆ. ಅದು ನಮ್ಮ ಬ್ಯಾಕ್ ಗ್ರೌಂಡ್ ಇದೆ. ಆ ವಿಚಾರಕ್ಕೆ ಟಚ್ ಮಾಡಿದರೆ ನಾನು ಎಂದೂ ಕಾಂಪ್ರಮೈಸ್ ಆಗುವುದಕ್ಕೆ ತಯಾರಿಲ್ಲ. I don't think anybody sitting here, any honble Member of this House is prepared to compromise on this. ನೀವು ಏನು

ಮಾಡಿದ್ದೀರಿ? ಇನ್ನೂ ಸುಮಾರು 53 ಕೋಟಿ, ಕಳೆದ ವರ್ಷದ್ದು ಕ್ಯಾರಿಓವರ್ ಸೇರಿ ನನಗೆ ಗೊತ್ತಿರುವ ಹಾಗೆ ಇದ್ದದ್ದು 98 1/2 ಕೋಟಿ ರೂಪಾಯಿ. ಅದರಲ್ಲಿ 45 ಕೋಟಿ ರೂಪಾಯಿ ನಾನು ಬಿಡುಗಡೆ ಮಾಡಿದ್ದೆ. ಉಳಿದ ಹಣ ಈ ಮಾರ್ಚ್ ಎಂಡ್ ಒಳಗೆ ಬಿಡುಗಡೆಯಾಗಬೇಕು. ಸ್ವಾಮಿ ನೀವು ಏಕೆ ಬಿಡುಗಡೆ ಮಾಡಿಲ್ಲ? ನಾವು ಡ್ರಾಪ್ ಔಟ್‌ನ್ನು ಏನು ನಿಲ್ಲಿಸಿದ್ದೆವು, ಅದು ಆಗ ಮತ್ತೆ ಪ್ರಾರಂಭವಾಗಿದೆ. ಈಗ ಮಕ್ಕಳನ್ನು ಕರೆದುಕೊಂಡು ಹೋಗುತ್ತಿದ್ದಾರೆ. ಹಣ ಕೊಡಲಿಲ್ಲವೆಂದು ಏಕೆ ಈ ಕೆಲಸ ಮಾಡುತ್ತೀರಿ? Please release the remaining money during this month so that we can reaffirm faith and repose confidence in our masses. Should you not do it? I cannot understand. ಮೊದಲು ಈ ಕೆಲಸವನ್ನು ತಾವು ದಯವಿಟ್ಟು ಮಾಡಬೇಕು. ಇದು ಬಡವರ ಕಾರ್ಯಕ್ರಮ. ಹಾಗೆಲ್ಲಾ ಟಚ್ ಮಾಡಬಾರದು. It is not actually there in the Budgt speech. Now, about Akshaya Programme, ಈಗಲೂ ಕೂಡ ಅದನ್ನು ಮುಂದುವರಿಸುತ್ತೇವೆಂದು ಹೇಳಿ ಹಣವನ್ನು ಬಿಡುಗಡೆ ಮಾಡಬೇಕು. ಆಮೇಲೆ ತಮಗೆಲ್ಲಾ ಗೊತ್ತಿರುವ ಹಾಗೆ, ವಿಶ್ವ ಪ್ರೊಗ್ರಾಮ್. ಸ್ವಾಮಿ, ಇದನ್ನು ಮಾನ್ಯ ಪ್ರಧಾನ ಮಂತ್ರಿಗಳಾಗಿರುವ ನರಸಿಂಹರಾವ್‌ಜಿಯವರು ಬಂದು ಉದ್ಘಾಟನೆ ಮಾಡಿದರು. 1991-92ರಲ್ಲಿ 10 ಕೋಟಿ ರೂಪಾಯಿ ಮಾತ್ರ ನಾನು ಇಟ್ಟಿದ್ದೆ. 1992-93 this year Rs. 480 crores including financial assistance from other agencies. I have got full faith in it. ನನ್ನ ಹತ್ತಿರ ಅದರ ಬಗ್ಗೆ ಬೇಕಾದಷ್ಟು ಫೈಲ್ಸ್ ಇವೆ. ನಿಮಗೆ ಅದರ ಬಗ್ಗೆ ಮಾಹಿತಿ ಸರಿಯಾಗಿ ತಿಳುದಕೊಳ್ಳಲಿಲ್ಲವೆಂದರೆ you better educate yourselves. I have put Mr. Nazir incharge of it. He toiled day and night. ನನಗೆ ಗೊತ್ತಿರುವ ಹಾಗೆ ಒಬ್ಬ ಆಫೀಸರ್ ಬ್ರಹ್ಮದತ್ ಎಂದು, ಇನ್ನೊಬ್ಬರು ಅರವಿಂದ್ ಜಾದವ್ ಎನ್ನತಕ್ಕಂಥವರು. ನಿಜ ಹೇಳಬೇಕೆಂದರೆ, ಅವರನ್ನೆಲ್ಲಾ ತೆಗೆದುಬಿಟ್ಟಿದ್ದೀರಿ. They are highy committeed officers. ಸ್ವಾಮಿ ಮೊನ್ನೆ ಒಂದು ಆರ್ಡ್‌ರ್ ಬಂದಿದೆ. ಅದನ್ನು ದಯವಿಟ್ಟು ತರಿಸಿ ಓದಿ ನೋಡಿ. ನಾನು ಅಧಿಕಾರ ಬಿಡುವ ಹೊತ್ತಿಗೆ ಜಪಾನ್‌ನಿಂದ 10 ಕೋಟಿ ರೂಪಾಯಿ ಸಿಂಗಲ್ ಆರ್ಡ್‌ರ್ ಬಂದಿದೆ. We have opened out showrooms inplaces in singapore, Los Angeles, Washington, D.C., London etc. ಅಮೇರಿಕದ ಮೂರು ಜಾಗಗಳಲ್ಲಿ ಲಂಡನ್ ಮುಂತಾದ ಕಡೆಗಳಲ್ಲಿ ನಾವು ನಮ್ಮ ಶೋ-ರೂಮ್ ಮಾಡಬೇಕೆಂದು ಮಾಡಿದ್ದೆವು. ಅದರಿಂದ ನಾವು ಫಾರಿನ್ ಎಕ್ಸ್‌ಚೇಂಜನ್ನು ಅರ್ನ್ ಮಾಡಬಹುದು. ಹಣ ಬಂದು ಮನೆಬಾಗಿಲಿಗೆ ಬೀಳುತ್ತದೆ, ಬಡವರಿಗೆ ಯಾರಿಗೆ ಉದ್ಯೋಗವಿಲ್ಲ It is an employment and production otiented programme. ಈ ವಿಷಯವನ್ನು ನಾನು ಮತ್ತೆ ರಿಪೀಟ್ ಮಾಡಲು ಹೋಗುವುದಿಲ್ಲ. ಒಂದು ಸಾವಿರ ವರ್ಕ್ ಷೆಡ್ಸ್ ಕಟ್ಟಬೇಕೆಂದು ಮಾಡಿದ್ದೆವು, ನಮ್ಮ ಬಜೆಟ್ ಸ್ಪೀಚ್‌ನಲ್ಲಿ ಅದನ್ನು ಹೇಳಿದ್ದೇನೆ. 800 we have tackled. ಕಂಪ್ಲೀಶನ್ ಅರ್ಧ ಆಗಿ ಅನ್ನೂ ಇನ್ನೂರು ಉಳಿದುಕೊಂಡಿರತಕ್ಕಂಥಾದ್ದು ಇದೆ. ನಾನು ಅಧಿಕಾರ ಬಿಡಬೇಕಾದರೆ ಸುಮಾರು 500-600 ಆಗಿ ಹೋಗಿ ಬಿಟ್ಟಿತ್ತು. ನನಗೆ ಬಂದಿರುವ ಲೇಟೆಸ್ಟ್ ಫಿಗರ್ಸ್ ಪ್ರಕಾರ ಮುಕ್ತಾಯ ಹಂತದಲ್ಲಿರುವುದು ಸುಮಾರು 800. 200 ಟ್ಯಾಕ್ಸ್ ಮಾಡತಕ್ಕಂಥಾದ್ದು ಇದೆ. ಸ್ವಾಮಿ ಇದನ್ನು ಏಕೆ ನಿಲ್ಲಿಸುತ್ತಾ ಇದ್ದೀರಿ. ವಿಶ್ವ ಪ್ರೋಗ್ರಾಂನ ಹೆಸರು ಹೇಳಿ, ನಮ್ಮ ಕಾರ್ಯಕ್ರಮವನ್ನು ತಿರುಚಲಾಗಿದೆ. ಅಪಾರವಾದ ನಂಬಿಕೆಯಿಂದ ನಾನೇ ಇದ್ದು ಸಮಾಜದಲ್ಲಿರತಕ್ಕಂಥ ತುಳಿತಕ್ಕೆ ಸಿಕ್ಕಿರತಕ್ಕಂಥ ಜನ ಯಾರಿದ್ದಾರೆ, ಅವರು ಬೆಳಿಗ್ಗೆ ಕೂಲಿಗೆ

ಹೋದರೆ ಅವರಿಗೆ ಕೂಲಿಸಿಗದಿರತಕ್ಕಂಥ ವರ್ಗಕ್ಕೆ ಒಂದು ಉದ್ಯೋಗವನ್ನು ಕೊಟ್ಟು, ಅದರ ಮೂಲಕ ಅವರಿಗೂ ಸಹಾಯ ಮಾಡಿ ಉತ್ಪಾದನೆಯನ್ನು ತೆಗೆಯತಕ್ಕಂಥ ಕಾರ್ಯಕ್ರಮ ಇದು. Production and employment orientd, a unique programme in the whole of the country. ಇಂಥ ಒಂದು ಮಹಾನ್ ಉದ್ದೇಶದಿಂದ ಪ್ರಾರಂಭ ಮಾಡಿದ ಈ ಕಾರ್ಯಕ್ರಮವನ್ನು ನೀವು ತಿರುಚಿ ಹಾಳು ಮಾಡಿದರೆ ಕರ್ನಾಟಕ ರಾಜ್ಯದ ಜನತೆಯು ನಿಮ್ಮನ್ನು ಎಂದೂ ಕ್ಷಮಿಸುವುದಿಲ್ಲ. You please inform this August House saying that whatever the conceppt with which we started the programme of which you are a party, I am going to continue this ಎಂಬ ಮಾತನ್ನು ದಯಮಾಡಿ ಹೇಳಿ, ಅದನ್ನು ಮುಂದುವರಿಸಿ. ಈಗ ವರ್ಕಶೆಡ್ ಆಗಿರತಕ್ಕಂಥವು ಅಲ್ಲಿಯೇ ಮಲಗುವುದು ಬೇಡ. ಅರ್ಧ ಆಗಿರತಕ್ಕಂಥವುಗಳನ್ನು ಅಲ್ಲಿಗೇ ನಿಲ್ಲಿಸುವುದೂ ಬೇಡ. ಇದನ್ನು ಮುಂದುವರಿಸಬೇಕು.

ಇನ್ನು ಆರಾಧನಾ ಕಾರ್ಯಕ್ರಮವನ್ನು ತಾವು ಕಂಟಿನ್ಯೂ ಮಾಡಿದ್ದೀರಿ. 6 ಕೋಟಿ ಇಟ್ಟಿದ್ದು ನೀವು 7 ಕೋಟಿ ಇಟ್ಟಿದ್ದೀರಿ. ಮೈನಾರಿಟೀಸ್‌ಗೂ ಸೇರಿ. ನಾನು ಅವರಿಗೆ 50 ಲಕ್ಷ ರೂಪಾಯಿಗಳನ್ನು ಬೇರೆ ಇಟ್ಟಿದ್ದೆ. ಇದು ತುಂಬಾ ಜಜನಪ್ರಿಯವಾದ ಕಾರ್ಯಕ್ರಮ ಅದನ್ನು ಮುಂದುವರಿಸಿದ್ದೀರಿ, ಬಹಳ ಸಂತೋಷ. ನಿಜ ಹೇಳಬೇಕೆಂದರೆ ಇದೊಂದಕ್ಕೆ 7 ಕೋಟಿ ರೂಪಾಯಿಗಳನ್ನು ನೀವು ಏತಕ್ಕೆ ಇಟ್ಟಿದ್ದೀರಿ ಅಂದರೆ, ಅದು ಬಹಳ ಕಡಿಮೆ ರೇಟ್‌ನದ್ದಾಗಿದ್ದು, ಅದಕ್ಕಾಗಿಯೇ ನೀವು ಹಾಗೆ ಇಟ್ಟಿದ್ದೀರಿ. ಆದರೆ ಉಳಿದ ಕಾರ್ಯಕ್ರಮಗಳು ನೂರಾರು ಕೋಟಿ ರೂಪಾಯಿಗಳದ್ದು ಎಂದು ಅವುಗಳನ್ನು ತಿರುಚಿ ಹಾಕಿದ್ದೀರಿ. ಇದೆಲ್ಲಾ ನಮಗೆ ಅರ್ಥವಾಗುತ್ತದೆ. ನಾನು ಬಹಳ ವರ್ಷಗಳಿಂದ ರಾಜಕಾರಣದಲ್ಲಿ ಕಳೆದಿದ್ದೇವೆ. ಮಾನ್ಯ ಅಧ್ಯಕ್ಷರ ಮೂಲಕ ನಾನು ವಿನಂತಿಸಿಕೊಳ್ಳುತ್ತೇನೆ, ನೀವು ಹಾಕಿಕೊಂಡ ಉಳಿದ ಕಾರ್ಯಕ್ರಮಗಳು ಅಂದರೆ ಬೆಳ್ಳಬೆಳಕು, ಸಂಪದ, ಸಾಗರದೀಪ ಮುಂತಾದುವನ್ನು ಮಾಡಿ. ಅದರ ಬಗ್ಗೆ ನಾನು ಏನೂ ಹೇಳುವುದಿಲ್ಲ. ಇನ್ನೊಂದು ಮುಖ್ಯವಾದ ವಿಚಾರ, ಕೆಲವು ಬಾಕಿ ಹಣ ಬರುವ ವಿಚಾರ ಇದೆ. ಇಲೆಕ್ಟ್ರಿಸಿಟಿ ಬೋರ್ಡ್ ವಿಚಾರ ಹೇಳುವಾಗ ನಾನು ಅದನ್ನು ಹೇಳಲು ಮರೆತಿದ್ದೆ. ನಿಮ್ಮ ಸಂಪುಟದಲ್ಲಿರತಕ್ಕಂಥವರೊಬ್ಬರಿಂದ ಬಾಕಿ ಇತ್ತು ಎಂದು ನಾನು ನನ್ನ ಕಾಲದಲ್ಲಿ ಡಿಸಕನೆಕ್ಟ್ ಮಾಡಿಸಿದ್ದೆ. ಸಂಡೂರ್ ಮೈನ್ಸ್‌ನವರು ಎಷ್ಟು ಹಣ ಬಾಕಿಯನ್ನು ಕೆಇಬಿ ಯವರಿಗೆ ಕೊಡಬೇಕೆಂಬುದು ಗೊತ್ತಿದೆಯೇ? Do you know how much money he is due to K.E.B? 7 ಕೋಟಿ, 63 ಲಕ್ಷ ಒಂದು ಬಾಬು. ಆದರೆ ಇನ್ನೊಂದು 4 ಕೋಟಿ 65 ಲಕ್ಷಗಳು, ಹೀಗೆ ಒಂದೇ ಕಂಪನಿಯಿಂದ ಕೆಇಬಿಗೆ 12 ಕೋಟಿ 28 ಲಕ್ಷ ರೂಪಾಯಿಗಳು ಬರಬೇಕಾಗಿದೆ. He is the Minister in the Cabinet. ಅದಕ್ಕಾಗಿಯೇ ನಾನು ಅವರನ್ನು ಮಿನಿಸ್ಟರ್ ಮಾಡಿರಲಿಲ್ಲ. ಇಲ್ಲಿ ರಾಜಕೀಯವಾಗಿ ನಾನು ಮಾತನಾಡುತ್ತಾ ಇಲ್ಲ, ಯಾರೂ ಈ ಬಗ್ಗೆ ಹಾಗೆಂದು ತಿಳಿದುಕೊಳ್ಳಬೇಕಾಗಿಲ್ಲ. ರೆವಿನ್ಯೂ ದೃಷ್ಟಿಯಿಂದ ನಾನು ಮಾತನಾಡುತ್ತಾ ಇದ್ದೇನೆ. ಅವರು ಕೋರ್ಟ್‌ನಲ್ಲಿ ಸ್ಟೇ ಇದೆ ಎಂದು ಹೇಳಬಹುದು. ಕೋರ್ಟ್‌ನಲ್ಲಿ ಎಷ್ಟು ಸ್ಟೇ ಇದೆ, ಏನು ಸ್ಟೇ ಇದೆ ಎಂಬುದು ಕೂಡ ನನಗೆ ಗೊತ್ತು. ಇವರು ಸೆಂಟ್ರಲ್ ನ್ಯಾಷನಲ್ ಗ್ರಿಡ್‌ನಿಂದ ಪವರ್ ಸ್ಯಾಂಕ್ಷನ್ ಮಾಡಿಸಿಕೊಂಡ ವಿವರಗಳನ್ನು ಹೇಳಬೇಕಾದರೆ ನನಗೆ ಸಮಯಾವಕಾಶ ಬೇಕಾಗುತ್ತದೆ. ಅದನ್ನು ಈಗ ಹೇಳಲು ಹೋಗುವುದಿಲ್ಲ. ನನಗೆ ಎಲ್ಲಾ ಗೊತ್ತಿದೆ ಮತ್ತು ಎಲ್ಲಾ ವಿವರಗಳನ್ನು ನಾನು ಹೊಂದಿದ್ದೇನೆ. ನೀವು ಕಂಪ್ಲೇಂಟ್ ಬಂದ ಮೇಲೆ ಸಚಿವರಾಗಿದ್ದ ರೇವಣ್ಣನವರನ್ನು ತೆಗೆದುಹಾಕಿದ್ದೀರಿ. ಆದರೆ ಸರಕಾರಕ್ಕೆ 12 ಕೋಟಿ 28 ಲಕ್ಷ ಬಾಕಿ ಕೊಡತಕ್ಕಂಥವರು ನಿಮ್ಮ

ಸಚಿವಸಂಪುಟದಲ್ಲಿದ್ದಾರೆ. ನನಗೆ ಅವರ ಮೇಲೆ ವೈಯಕ್ತಿಕವಾಗಿ ಯಾವ ಭೇದವೂ ಇಲ್ಲ. ಬಸವರಾಜೇಶ್ವರಿ, ಸೆಂಟ್ರಲ್ ಮಿನಿಸ್ಟರ್‌ರವರದ್ದು 23 ಲಕ್ಷದ 5 ಸಾವಿರ ರೂಪಾಯಿಗಳು ಬಾಕಿ ಇವೆ. ಜಯಣ್ಣ, ಚೀಫ್‌ವಿಪ್‌ರವರದ್ದು 69 ಲಕ್ಷ ಬಾಕಿ ಇದೆ. ಇದು ಅಬಕಾರಿಗೆ ಸಂಬಂಧಪಟ್ಟದ್ದು. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, 1982-83 ಎಂದರೆ ಅದಕ್ಕೆ ಬಡ್ಡಿ ಮರಿ ಬಡ್ಡಿ ಸೇರಿಸಿದರೆ ಒಂದು ಕೋಟಿ ಚಿಲ್ಲರೆಯಾಗುತ್ತದೆ. ನಾವು ನಮ್ಮ ಕಾಲದಲ್ಲಿ ಅವರಿಗೆಲ್ಲ ನೋಟೀಸ್‌ನ್ನು ಕೊಟ್ಟು, ವಸೂಲು ಮಾಡುವುದಕ್ಕೆ ಹಚ್ಚಿದ್ದೆವು. ಇದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಎಕ್ಸೈಜ್ ಬಗ್ಗೆ ನಾನು ಒಂದೇ ಒಂದು ಮಾತನ್ನು ಹೇಳುತ್ತೇನೆ. ಇದರ ಬಗ್ಗೆ ನೀವು ಏನೂ ಭಾಷಣ ಮಾಡಲಿಲ್ಲ ಎಂದು ಯಾರೂ ತಿಳಿದುಕೊಳ್ಳಬಾರದು. Rs. 555 crores was expected revenue out of this Excise. ನಾನು ಈ ಸಂದರ್ಭದಲ್ಲಿ ಒಂದು ಹೇಳುತ್ತೇನೆ. ನಾವು ಅದನ್ನು ಮೀರಿ ಹೋಗುವುದಕ್ಕೆ ಆಗುವುದಿಲ್ಲ. 1990-91ಕ್ಕೆ ಇದ್ದಷ್ಟೇ ನಾವು 1991-92ಕ್ಕೆ ಇಟ್ಟುಕೊಂಡಿದ್ದೆವು. ನೀವು ಯಾವಾಗಲೂ Growth rate, as for as ತಿನ್ನುವುದು ಮತ್ತು ಕುಡಿಯುವ ವಿಚಾರದಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕೆಂದು ನಾನು ಆಗಲೇ ಹೇಳಿದ್ದೇನೆ. ನೀವು ತೆಗೆದುಕೊಂಡು ಹೋಗಿ ಕಂಪ್ಲೀಟ್ ಮಾಡತಕ್ಕ ವಿಚಾರ ಅಲ್ಲ. ಬಹಳ ಎಚ್ಚರಿಕೆಯಿದ ಇರಬೇಕು. 1992-93 Rs. 573 crores. ನಿಮ್ಮ ಬಜೆಟ್ ಭಾಷಣದಲ್ಲಿ 535 ಕೋಟಿ ಎಂದು ಇದೆ. There has been a revenue drop under th excise head by about 35 to 40 crores of rupes. Why? ನಾವೆಲ್ಲಾ ಪೂರ್ತಿ ಮಾಡಿದ್ದೇವೆಂದು ನೀವು ಹೇಳುತ್ತಿದ್ದೀರಿ. ಆ ನೀತಿ ಈ ನೀತಿ ಎಂದು ಹೇಳುತ್ತಿದ್ದೀರಿ. ನಾನು ನಿಮಗೆ ಭಾಷಣವನ್ನು ಮಾಡುವುದಕ್ಕೆ ಬೇಡ ಎಂದು ಹೇಳುವುದಿಲ್ಲ. ಎಕ್ಸೈಜ್ ಲಾಬಿಯನ್ನು ನಾವು ಮಟ್ಟಹಾಕಿಬಿಡುತ್ತೇನೆ, all my support is there if you go ahead with the programme. ಸೌತ್ ಕೆನರಾದ AJ Shetty and company ಯದು ಮೊನ್ನೆಮೊನ್ನೆ ಕೇಸನ್ನು ಹಿಡಿದಿದ್ದಾರೆ. ಸೆಕೆಂಡ್ಸ್ ಈಗಲೂ ಕೂಡ ಬರುತ್ತಿದೆಯಲ್ಲಾ, ಅಲ್ಲಿ ಹುತಾತ್ಮವಾದರೆ ಅದು ಒಂದು ಕಂಪನಿ ನಿಮಗೆ ಸಿಗುತ್ತದೆ. ಅದೇ ರೀತಿಯಾಗಿ ದಾವಣಗೆರೆ ಕಡೆಯಿಂದ ಬರುತ್ತದೆ. ಅಲ್ಲಿ ಹುತಾತ್ಮವಾಗುವುದಕ್ಕೆ ಮತ್ತೊಂದು ಕಂಪನಿ ಸಿಗುತ್ತದೆ. ಗೋವಾದಿಂದ ಫೆನಿ ಬರುತ್ತದೆ. ಪಾಂಡಿಚೆರಿಯಿಂದ ಬರುತ್ತದೆ, ತಮಿಳುನಾಡಿನಿಂದ ಬರುತ್ತದೆ, ಆಂಧ್ರದಿಂದ ಬರುತ್ತದೆ, ಮಹಾರಾಷ್ಟ್ರದಿಂದ ಬರುತ್ತದೆ, ಇಷ್ಟಕ್ಕು ಹುತಾತ್ಮವಾಗಬೇಕು, ಮತ್ತು ಕರ್ನಾಟಕ ಭಾಗಕ್ಕೂ ಸೆಕೆಂಡ್ಸ್ ಈಗ ಸಿಕ್ಕುತ್ತದೆ. ಸೆಕೆಂಡ್ಸ್‌ನ್ನು ನಿಲ್ಲಿಸಬೇಕೆನ್ನತಕ್ಕದ್ದು ನಿಮ್ಮ ಪ್ರಾಮಾಣಿಕವಾದಂತಹ ಪ್ರಯತ್ನದಲ್ಲಿ ಇದ್ದರೆ ನಾನು ಮೆಚ್ಚುತ್ತೇನೆ. ನೀವು ಮಾಡಿ, ನಮ್ಮ ಕಾಲದಲ್ಲಿಯೂ ಕೂಡ ನಾವು ಎಲ್ಲರಿಗೂ ಹೇಳತಕ್ಕಂಥದ್ದು, ನಾವು ಇಲ್ಲವೆಂದಲ್ಲ. Seconds produed in Karnataka. But taxable ಏರಿಯಾದಿಂದ ಹೊರಗೆ ಬರುತ್ತಿರತಕ್ಕಂಥದ್ದು ಕರ್ನಾಟಕದಲ್ಲಿ ಒಂದಾದರೆ ಇನ್ನೊಂದು outside the state ಬರುತ್ತದೆ. ಹೊರಗಡೆಯಿಂದ ಬರುವುದನ್ನು ಹೇಗೆ ನಿಲ್ಲಿಸಿದ್ದೀರಿ? ಹಾಗಾದರೆ ಹುತಾತ್ಮವಾಗುವುದಕ್ಕೆ ಎಷ್ಟು ಆತ್ಮವನ್ನು ಇಟ್ಟುಕೊಂಡಿದ್ದೀರಿ, ಅದಕ್ಕೆ ಹುತಾತ್ಮರಾಗುತ್ತೀರಾ ! ಸರಿಯಾಗಿ ಕೆಲಸವನ್ನು ಮಾಡದೇ ಹುತಾತ್ಮ ಮಾಡುತ್ತೇನೆ, ಮತ್ತೊಂದು ಮಾಡುತ್ತೇವೆಂದರೆ ದಿವಸದಿವಸಕ್ಕೆಲ್ಲಾ ಕೇಸ್‌ಗಟ್ಟಲೆ ಸಿಕ್ಕುತ್ತಿದೆ. ಏನು ಮಾಡುತ್ತೀರಿ? ಹುತಾತ್ಮ ಎನ್ನತಕ್ಕಂಥ ಮಾತನಾಡಿ, ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಅಂದರೆ, ಮಾನ್ಯ ಬಂಗಾರಪ್ಪನವರ ಕಾಲದಲ್ಲಿ ನಡೆಯುತ್ತಿತ್ತು, ನಾನು ಬಿಡುವುದಿಲ್ಲ ಎನ್ನತಕ್ಕಂಥ ಅರ್ಥದಲ್ಲಿ ಹೇಳುತ್ತಿದ್ದೀರಿ. ರಾಜಕಾರಣಿಯಲ್ಲಿ ನಾನು ಅರ್ಥವಾಗದೆ ಇರತಕ್ಕಂಥ ದಡ್ಡಸಿಕಾಮಣಿ

ಅಲ್ಲ. ರಾಜಕಾರಣದಲ್ಲಿ ನಾನು ಕೂಡ ಬಹಳ ವರ್ಷ ಕಳೆದಿದ್ದೇನೆ. though he did not refer to my name, the announced is ಬಂಗಾರಪ್ಪನವರ ಕಾಲದಲ್ಲಿ ನಡೆಯುತ್ತಿತ್ತು. ನಾನು ಬಿಡುವುದಿಲ್ಲ ಎಂಬ ಅರ್ಥದಲ್ಲಿ I think I have also spent litle more than what you have spent on the floor of the House. ಇವತ್ತು ನಿಮ್ಮ ಬಜೆಟ್ ಭಾಷಣದ ಪ್ರಕಾರ 'ಎಕ್ಸೈಜ್ 30-40 ಕೋಟಿ ಡ್ರಾಪ್ ಆಗಿದೆ. ಏಕೆ? Excise year endig June end. ಜುಲೈ ಫಸ್ಟ್‌ಗೆ ಎಕ್ಸೈಜ್ ಇಯರ್ ಶುರುವಾಗುತ್ತದೆ. ನಮಗೆ ಏಪ್ರಿಲ್ ಫಸ್ಟ್‌ಗೆ ಫೈನಾನ್ಸಿಯಲ್ ಇಯರ್ ಶುರುವಾಗುತ್ತದೆ. ನಿಮ್ಮ ಬಜೆಟ್ ಭಾಷಣದಲ್ಲಿ ನಿಮ್ಮಷ್ಟಕ್ಕೆ ನೀವು ಹೇಳಿಕೊಂಡಿದ್ದೀರಿ, ಇದರಲ್ಲಿ ಇದೆ. ಎಕ್ಸೈಜ್ ವಿಚಾರದಲ್ಲಿ ಒಂದೇ ಒಂದು ವಿಚಾರವನ್ನು ನಾನು ನಿಮ್ಮ ಗಮನಕ್ಕೆ ತರುವ ಹಾಗೆ ಇದ್ದರೆ, ನೀವೇ ಇದರಲ್ಲಿ ಹೇಳಿಕೊಂಡಿದ್ದೀರಿ, 1992-93ನೇ ಸಾಲಿನ ಅಂದಾಜಿನ ಅಬಕಾರಿ ಆದಾಯವು 573 ಕೋಟಿ ಎಂದು ಹೇಳಿದ್ದೀರಿ, ಇದನ್ನೆ ನಾನು ಪ್ಲಾನಿಂಗ್ ಕಮಿಷನ್ನಿಗೆ ಕೊಟ್ಟಿದ್ದುದು. ನಾನು ಅದಕ್ಕೆ ಬಾಯಲ್ಲೇ ಹೇಳಿದ್ದುದು, ಅದೇ ಇದರಲ್ಲಿ ಇರುವುದು. ಅಬಕಾರಿ ಹರಾಜಿನಿಂದ ನಿರೀಕ್ಷಿದಷ್ಟು ಶಿಸ್ತು ಹಣ ಬರದಿರುವ ಹಿನ್ನೆಲೆಯಲ್ಲಿ ಅದನ್ನು 540 ಕೋಟಿಗೆ ಇಳಿಸಲಾಯಿತು ಎಂದು ಹೇಳಿದ್ದೀರಿ. Why? The moment I gave up the power, why did you reduce it to 540 from 573? ಹಾಗಾದರೆ ನಾನು ಹೇಳಲೇ? ಅಬಕಾರಿ ಲಾಬಿಯಲ್ಲಿ ನೀಡಿದ್ದೀರಿ ಅನ್ನತಕ್ಕ ಮಾತನ್ನು ನೇರವಾಗಿ ಆಡತಕ್ಕಂಥ ಸಂದರ್ಭ ಬರುತ್ತದೆ. ಅದನ್ನು ಮಾಡಿಕೊಳ್ಳಬೇಡಿ, ಹೇಗೆ ಮಾಡಿಕೊಳ್ಳುತ್ತೀರಿ, ನೀವು ಏತಕ್ಕೆ ಮಾಡುವುದಕ್ಕೆ ಹೋಗುತ್ತೀರಿ, ಎಕ್ಸೈಜ್ ಇಯರ್ ಎಂಡಿಂಗ್ ಜೂನ್ ಎಂಡ್‌ವರೆಗೆ ಇರಬೇಕಾದರೆ ನೀವು ಒಂದೇ ಸಾರಿಗೆ ಏತಕ್ಕೆ 540 ಕೋಟಿಗೆ ತೆಗೆದುಕೊಂಡು ಬಂದಿದ್ದೀರಿ. ಆಮೇಲೆ 1993-94ನೇ ವರ್ಷದಲ್ಲಿ 701.54 ಕೋಟಿ ರೂಪಾಯಿಗಳನ್ನು ಅಬಕಾರಿ ಆದಾಯವಾಗಿ ಸಂಗ್ರಹಿಸುವ ಗುರಿಯನ್ನು ಇಟ್ಟುಕೊಳ್ಳಲಾಗಿತ್ತು ಎಂದು ಹೇಳಿದ್ದೀರಿ. ಒಟ್ಟು 575 ಕೋಟಿ, ಈ ವರ್ಷ ಇಡಬೇಕಾದರೆ 701 ಕೋಟಿ ಮಾಡುವುದಕ್ಕೆ ನನ್ನದು ಏನೂ ಬೆಂಬಲ ಇಲ್ಲ ಎಂದು ತಿಳಿದುಕೊಳ್ಳಬೇಡಿ, ಪೂರ್ತಿ ಬೆಂಬಲ ಇದೆ. ನೀವು ಕಲೆಕ್ಟ್ ಮಾಡಿ. ಇದು ಪ್ರಸ್ತುತ 1992-93ನೇ ವರ್ಷದ ಅಂದಾಜಿನ ಮೊತ್ತಕ್ಕಿಂತ ಶೇಕಡ 30 ರಷ್ಟು ಹೆಚ್ಚು ಎಂದು ಹೇಳಿದ್ದೀರಿ. ನೀವು ಶೇಕಡ 50 ಮಾಡಿ, 70 ಮಾಡಿ, ನನ್ನದೇನೂ ಅಭ್ಯಂತರವಿಲ್ಲ. ಆದರೆ ನೀವು ಇರುವುದನ್ನು ಕಡಿಮೆ ಮಾಡಿ you have brought down 540 from 573. Why? ನೀವು ಅಷ್ಟನ್ನು ಮಾಡಿರತಕ್ಕಂಥವರು how can we expect-that during 1993-94 revenue that some to the State exchequer will go up as per your promise made in this Bdget speech? ಇದನ್ನು ಮಾಡುವುದಕ್ಕೆ ನಿಮ್ಮಿಂದ ಆಗುವುದಿಲ್ಲ. ಇಷ್ಟು ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಎಕ್ಸ್ಯಾಜ್ ವಿಚಾರದಲ್ಲಿ ಒಂದೇ ಒಂದು ಮಾತನ್ನು ಹೇಳುತ್‌ತೀನೆ. ಅದನ್ನು ಬಹಳ ಎಚ್ಚರಿಕೆಯಿಂದ ಮಾಡಿ. ಎಕ್ಸೈಜ್ ಅಂದರೆ ಇಷ್ಟೆ. ಎಚ್ಚರಿಕೆ ಅಂದರೆ ಏನು? ಈಗಾಗಲೇ ಕೆಲವರು ಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡಿದ್ದಾರೆ. ಕಮ್ಯೂನಲ್ ಗಲಾಟೆ ಆದವು ಎಂದು ಸ್ಟೇ ತೆಗೆದುಕೊಂಡಿದ್ದಾರೆ. ನಮ್ಮ ಕಾಲದಲ್ಲಿಯೂ ಕಮ್ಯೂನಿಸ್ಟ್ ಗಲಾಟೆ ಇದ್ದರೂ ಸ್ಟೇಗೆ ಹೋಗಲಿಲ್ಲ. ನಿಮ್ಮ ಕಾಲದಲ್ಲಿ ಹೋಗುತ್ತಿದ್ದಾರೆ. ಎಕ್ಸೈಜ್ ಕಂಟ್ರಾಕ್ಟರ್ಸ್ ನಮ್ಮ ಸ್ಟೇಜ್ ಕಂಟ್ರಾಕ್ಟರ್ಸ್. ಅವರು ಓಪನ್ ಬಿಡ್‌ನಲ್ಲಿ ತೆಗೆದುಕೊಂಡಿರುತ್ತಾರೆ. Call them and convince them, make them to pay in kist E ಆ ಹಣ ಏನಿದೆ ಅಷ್ಟನ್ನು ಪೇಮೆಂಟಿಗೆ

ಕರೆಕ್ಟಾಗಿ ಮಾಡುತ್ತಾ ಹೋಗಿ, ಇಲ್ಲದಿದ್ದರೆ ನಿಮಗೆ ರೆವಿನ್ಯೂಸ್ ಎಂದಿಗೂ ಬರುವುದಿಲ್ಲ, ಕಂಪ್ಲೀಟ್ ಆಗಿ ಡ್ರಾಪ್ ಆಗುತ್ತದೆ ಎನ್ನತಕ್ಕ ಮಾತನ್ನು ನೀವು ಯಾರೂ ಕೂಡ ಮರೆಯಬರದು. ಇನ್ನು ಕೊನೆಗೆ ಉಳಿದಿರತಕ್ಕಂಥದ್ದು ಒಂದೇ ಒಂದು ಮಾತು. ಅದು ಏನೆಂದರೆ, ಕಮ್ಯೂನಲ್ ರೈಟ್ಸ್ ಇದೊಂದು ಇನ್ನೊಂದು ಮಾತನ್ನ ಹೇಳಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ. ಈ ದೇಶಧಲ್ಲಿ ಹತ್ತೆಂಟು ಹಲವಾರು ಧರ್ಮಗಳು ಇವೆ, ಜಾತಿಗಳು ಇವೆ, ಭಾಷೆಗಳು ಇವೆ, ಭೌಗೋಳಿಕವಾಗಿ ಬೃಹತ್ ರಾಷ್ಟ್ರ ಇದು. Suppose if it were Israil, Egypt, Hollando or poland or America. ಅಮೆರಿಕಾದಲ್ಲಿ 2-3-4 ಇದೆ ಎನ್ನಬಹುದು. ಆದರೆ ನಮ್ಮ ದೇಶದಲ್ಲಿ ಹಾಗಿಲ್ಲ. There is language barrier, area barrier, caste, creed barrier, so many other barriers; every barrir will come in your way; ಬಹಳ ಎಚ್ಚರಿಕೆಯಿಂದ ಇರಬೇಕು. ನಾನು ನಿಮಗೋಸ್ಕರ ಹೇಳುತ್ತಿಲ್ಲ. ನಾವು ಜನರಲ್ ಆಗಿ ಮಾತನಾಡತಕ್ಕಂಥ ವಿಚಾರ. ಇವತ್ತು ಏನಾಗಿದೆ ಅಂದರೆ, ಸಂಪೂರ್ಣವಾಗಿ ಯಾವ ಮಟ್ಟಕ್ಕೆ ಬಂದಿದೆ ಎಂದರೆ, ರಾಜಕೀಯ ಮಾಡಬೇಕಾದರೆ ಏನಾದರೂ ಮಾಡಿ ಅಧಿಕಾರಕ್ಕೆ ಹೋಗಬೇಕು ಎನ್ನತಕ್ಕ ಚಿಂತನೆಯನ್ನು ನಾವು ಮಾಡುತ್ತಾ ಹೋಗಿಬಿಟ್ಟರೆ ಈ ದೇಶದಲ್ಲಿ ನಸಮಸ್ಯೆಗೆ ಪರಿಹಾರವನ್ನು ಒದಗಿಸುವ ಬದಲು ನಾಳೆ. ಸಮಸ್ಯೆಯನ್ನು ಹುಟ್ಟಿಹಾಕಿದ ಹಾಗೆ ಆಗುತ್ತದೆ. ಸರ್ವ ಧರ್ಮಗಳು, ಮುಸಲ್ಮಾನ್ ಧರ್ಮ, ಹಿಂದು ಧರ್ಮ, ಕ್ರೈಸ್ತ ಧರ್ಮ, ಬೌದ್ಧ ಧರ್ಮ, ಪಾರ್ಸಿಧರ್ಮ, ಸಿಖ್ ಧರ್ಮ-ಯಾವ್ಯಾವ ಧರ್ಮಗಳು ಇವೆ ಅವರೆಲ್ಲ ನಮ್ಮ ಅಣ್ಣತಮ್ಮಂದಿರು, ನಮ್ಮ ಅಕ್ಕಂತಗಿಯರು-ನಾವು ಅದೇ ರೀತಿಯಲ್ಲಿ ಟ್ರೀಟ್ ಮಾಡುತ್ತೇವೆ. ನಿಜ ಹೇಳಬೇಕೆಂದರೆ, ನಾವು ಎಷ್ಟು ಮಾತನಾಡುತ್ತೇವೆ ಅಷ್ಟನ್ನು ಹಳ್ಳಿಯವರು ಮಾತನಾಡುವುದಿಲ್ಲ. ಅವರಿಗೆ ಸಾಕಾಗಿ ಹೋಗಿದೆ. ಬೆಳಕು ಅರಿದರೆ ಅನ್ನ, ಹಿಟ್ಟು, ರೊಟ್ಟಿ, ಹುಡುಕಿಕೊಳ್ಳುವುದರೊಳಗೆ ಅವರು ಸುಸ್ತ ಹೊಡೆದುಹೋಗಿಬಿಟ್ಟಿದ್ದಾರೆ. ಅವರಿಗೆ ಧರ್ಮ ಯಾವುದು ಅಂದರೆ ಆ ಬಡ ಹೊಟ್ಟೆಗೆ ಅನ್ನ ಹುಡುಕುವುದೇ ಒಂದು ಧರ್ಮವಾಗಿ ಕುಳಿತುಕೊಂಡಿದೆ, ನಾನು ಅವರ ನೆರವಿಗೆ ಹೋಗೋಣ. ಅವರ ನೆರವಿಗೆ ಹೋಗತಕ್ಕಂಥ ಕೆಲಸವನ್ನು ಮಾಡೋಣ. ನಾನು ಒಂದೇ ಒಂದು ಮಾತನ್ನು ಹೇಳುತ್ತೇನೆ. Those who believe in the destrucction of the mosque ಇದು ಸಂಪೂರ್ಣವಾದಂತಹ ಖಂಡಿಸತಕ್ಕಂಥ ವಿಚಾರವಾಗಿದೆ. ಇದು ಸಣ್ಣ ವಿಚಾರ ಅಲ್ಲ. ಇವತ್ತು ಅವರ ಮಸೀದಿಯನ್ನು ನಾವು ಕೆಡವಿದರೆ ನಾಳೆ ನಮ್ಮ ದೇವಸ್ಥಾನಗಳೂ ಕೂಡ ಉಳಿಯುವುದಕ್ಕಾಗುವುದಿಲ್ಲ, ಯಾರೋ ಅಲ್ಲಿ ಹುಟ್ಟಿಕೊಂಡಿರುತ್ತಾರೆ. ಈ ಮಾತನ್ನು ನಾನು ಮುಖ್ಯಮಂತ್ರಿಯಾಗಿದ್ದಾಗಲೂ ಹೇಳಿದ್ದೇನೆ. ಸಮಾಧಾನ ಗುಣದಿಂದ ಹೋಗಿ ಎಲ್ಲಾ ದೇವಸ್ಥಾನಗಳು, ದೇವಾಲಯಗಳು, ಧರ್ಮಗಳನ್ನು ಅಣ್ಣ ತಮ್ಮಂದಿರಂತೆ ತೆಗೆದುಕೊಂಡು ಹೋಗುವಂತಹ ವಿಚಾರಧಾರೆ ನಮ್ಮಲ್ಲಿ ಬೇಕು. ಎಷ್ಟು ಸಾರಿ ಕಮ್ಯೂನಲ್ ಗಲಾಟೆಯಾಯಿತು. ಇವತ್ತು ಏನಾಗಿದೆ ಅಂದರೆ ಪೂರ್ತಿ ಹೋಗಿಹೋಗಿ ಇವತ್ತು ಎಲ್ಲರ ಯೋಜನೆಗಳು ಕೂಡ ಸಂಪೂರ್ಣವಾಗಿ ಅವರ ಕಡೆ ಹೋಗತಕ್ಕಂಥ ಮಟ್ಟಕ್ಕೆ ಆಗಿ ಇವತ್ತು ಯಾವುದಕ್ಕೂ ಬರದಹಾಗೆ ಆ ಜನಕ್ಕೆ ಯೋಚನೆ ಹತ್ತಿರತಕ್ಕಂಥ ವಿಚಾರ ಕೂಡ ಆಗಿದೆ. ಆ ಸಂದರ್ಭದಲ್ಲಿ ನಾನು ತಮ್ಮ ಗಮನವನ್ನು ಸೆಳೆಯುತ್ತಿದ್ದೇನೆ. ನಮ್ಮ ದೊಡ್ಡಮನುಷ್ಯರು ಹಚ್ಚಿಕೊಟ್ಟವರು ಆರಾಮವಾಗಿ ಊಟಮಾಡಿಕೊಂಡು ಟೆಲಿವಿಷನ್ ನೋಡುತ್ತಾ ಮನೆಯಲ್ಲಿ ಕುಳಿತುಕೊಂಡರು. ಸತ್ತು ಹೋದವರು ಪಾಪ,ಾಪದವರು. ಪಾಪದವರು ಎನ್ನುವುದು ಸೌತ್‌ಕೆನರಾ ಭಾಷೆ. ಕಡುಬಡವರು, ಸಂಪೂರ್ಣವಾಗಿ ಎಲ್ಲ ಗುಡಿಸಲಿನಲ್ಲಿರತಕ್ಕಂಥವರು ಸತ್ತು ಹೋದರು. ಅವರ ಹೆಣಗಳೆಲ್ಲ ಉರುಳಿದವು. ಇದು

ನಮ್ಮೆಲ್ಲರ ಕಹಿಯ ಅನುಭವ. ಸಂಪೂರ್ಣವಾಗಿ ಕಡು ಬಡವರ ಜೀವನಗಳನ್ನೇನಾದರೂ ನಾವು ಉಳಿಸಬೇಕೆಂದು ಇದ್ದರೆ ಮೊಟ್ಟಮೊದಲು ಈ ಸೌಹಾರ್ದತೆ, ವಾತಾವರಣ ಇದನ್ನು ಸಂಪೂರ್ಣವಾಗಿ ಮಾಡಬೇಕು ಎನ್ನತಕ್ಕ ದೃಷ್ಟಿಯಲ್ಲಿ ಈ ಸಂದರ್ಭದಲ್ಲಿ ನಾನು ಹೇಳುತ್ತಿದ್‌ದೀನೆ. ನಾವು ಇದರ ಬಗ್ಗೆ ಏನಾದರೂ ಸೀರಿಯಸ್ ಆಗಿ ಇಲ್ಲದಿದ್ದರೆ ಏನಾದರೂ ಆಗಲಿ ಅವನ ತಲೆಬೀಳಲಿ, ನನ್ನ ಎಲೆಯ ಮೇಲೆ ಮಾತ್ರ ಅನ್ನ ಬೀಳಲಿ ಎಂದು ವಿಚಾರ ಮಾಡಿದರೆ ಈ ದೇಶ ಉಳಿಯುವುದಿಲ್ಲ. ಈ ಒಂದು ವಿಚಾರವನ್ನು ಮಾಡಿರತಕ್ಕಂಥದ್ದು ಯಾರಿಗೂ ಕೂಡ ಒಳ್ಳೆಯದಲ್ಲ. ಈ ವಿಚಾರಕ್ಕೆ ನೀವೇನಾದರೂ ಬಿಟ್ಟರೆ ಅದು ಯಾವ ಮಟ್ಟೆಕ್ಕೆ ಹೋಗುತ್ತದೆ ಎಂದರೆ, ದಾರ ಕಿತ್ತ ಹೋರಿ ಹೋದಹಾಗೆ ಹೋಗುತ್ತದೆ. ಇದು ನಾಳೆ ನಿಮ್ಮ ಕಂಟ್ರೋಲ್‌ಗೆ ಬರುವುದಿಲ್ಲ. ಮೂಗುದಾರ ಇಲ್ಲದ ಹೋರಿ ಎಂದು ಹೇಳುತ್ತಾರಲ್ಲಾ, ನಾಳೆ ಆ ರೀತಿ ಹೋಗುತ್ತದೆ ಎನ್ನತಕ್ಕಂಥ ಮಾತನ್ನು ಸಂಪೂರ್ಣವಾಗಿ ನಾವು ಗಮನಿಸಬೇಕು. ಆ ಸಂದರ್ಭದಲ್ಲಿ ಗಲಾಟೆಗಳಾಗಿ ಎಲ್ಲೆಲ್ಲಿ ಅನ್ಯಾಯವಾಗಿದೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಜೀವಗಳೆಲ್ಲಾ ಹಾನಿಯಾದವು, ಅವರ ಬಗ್ಗೆ ವ್ಯಥೆ ಇದೆ, ದುಃಖ ಇದೆ. ಮುಂದೆ ಆಗದ ಹಾಗೆ ನೋಡಿಕೊಳ್ಳತಕ್ಕಂಥ ಒಂದು ಜವಾಬ್ದಾರಿ ಕೂಡ ಇದೆ. ಈ ಸಂದರ್ಭದಲ್ಲಿ ಆ ಘಟನೆಯನ್ನು ಖಂಡಿಸುತ್ತಾ ಯಾರ್‍ಯಾರು ಇದರ ಜವಾಬ್ದಾರಿ ವಹಿಸಿದ್ದಾರೆ ಅವರು ಅದನೆಲ್ಲಾ ಖಂಡಿಸಬೇಕಾಗುತ್ತದೆ. ನಾನು ಈ ಸಂರ್ಭದಲ್ಲಿ ಒಂದೇ ಒಂದು ಹೇಳುವುದು. ನಾವು ಅಷ್ಟು ನಿಗ್ರಹ ಮಾಡುತ್ತೇವೆ, ಇಷ್ಟು ನಿಗ್ರಹ ಮಾಡುತ್ತೇವೆ ಎಂದು ಸರ್ಕಾರದವರು ಹೇಳುತ್ತಾರೆ. ನಿಮ್ಮ ಇಂಟೆಲಿಜೆನ್ಸ್ ಏಜೆನ್ಸಿ ಇದನ್ನೆಲ್ಲಾ ಮಾಡದಿದ್ದರೆ ನಾಳೆ ಪೇಮೆಂಟ್ ಆಫ್ ದಿ ಕಾಂಪೆನ್‌ಷೇಷನ್ ಜಾಸ್ತಿ ಹಣವನ್ನು ಕೊಡಬೇಕಾಗುತ್ತದೆ. After all it is tax payer's money. ಇದು ಅವನದೇ ಹಣ. ನೀವು ದೊಡ್ಡ ಮಾತನಾಡಿ, ಏನೆಲ್ಲಾ ಸಂಪೂರ್ಣವಾಗಿ ಭಾರಿ ಮಾಡುತ್‌ತೀನೆ, ಅದು ಮಾಡುತ್ತೇವೆ ಎಂದು ಮೊದಲೇ ಹೇಳಿ, ಸುಮಾರಾಗಿ ಎತ್ತು ಗಾಡಿ ಎಳೆಯುವುದಕ್ಕಿಂತ ಮೊದಲೇ ಬರೀ ನೊಗನೇ ಕುಣಿದಾಡಿತ್ತಂತೆ. ಹಾಗೆ ನೊಗ ಕುಣಿದಾಡಿ ಕುಣಿದಾಡಿ ಮಾಡಿದಂಗೆ ಮಾಡಿ ಗಾಡೀನ್ ಮುಂದಕ್ಕೆ ಹೋಗದಿದ್ದರೆ ನಾಳೆ ಏತಕ್ಕೂ ಬರುವುದಿಲ್ಲ. ಅದು ಹಣಕಾಸನ್ನು ನಾವು ತೆಗೆದುಕೊಳ್ಳತಕ್ಕಂಥದ್ದು ಇರಬಹುದು. ಆದಾಯದ್ದು ಇರಬಹುದು, ಕಂಟ್ರೋಲ್ ಮಾಡತಕ್ಕಂಥ ವಿಚಾರ ಇರಬಹುದು. ಇವನ್ನೆಲ್ಲಾ ಕೂಡ ನಾವು ತಾಳಿದುಕೊಳ್ಳಬೇಕು. ನಾನು ಈ ಸಂದರ್ಭದಲ್ಲಿ ನಮ್ಮ ಬಿಜೆಪಿ ಮಿತ್ರರಿಗೆ ಹೇಳತಕ್ಕಂಥದ್ದು ಏನೆಂದರೆ ಈ ದೇಶದಲ್ಲಿ ಎಲ್ಲರನ್ನೂ ಒಟ್ಟಿಗೆ ತೆಗೆದುಕೊಳ್ಳದಿದ್ದರೆ ಇದು ಬರುವುದಿಲ್ಲ. ಓನಾಮ ತಿಳಿಯಲಾರದವ ಓಲೆ ಬರೆದಾನೆ ಎಂದು ಒಂದು ಗಾದೆ ಇದೆ. ಓನಾಮನೇ ಗೊತ್ತಿಲ್ಲ ಅವನಿಗೆ, ಇನ್ನು ಓಲೆ ಬರೆಯುತ್ತಾ ಕುಳಿತುಕೊಳ್ಳುತ್ತಾನೆಯೇ? ಮೊದಲು ನಮ್ಮಂಥ ಸಮಾಜದಲ್ಲಿ ಸರ್ವಧರ್ಮಗಳಿವೆ ಎನ್ನತಕ್ಕಂಥ ವಿಚಾರವನ್ನು ಗಮನದಲ್ಲಿಟ್ಟು ಎಲ್ಲರನ್ನೂ ತೆಗೆದುಕೊಂಡು ಹೋಗತಕ್ಕಂಥ ವಿಚಾರವನ್ನು ಕೂಡ ಮಾಡಬೇಕು. ಅದನ್ನು ಮಾಡಿದಾಗ ಮಾತ್ರ ಸಾಧ್ಯ ಎಂದು ಹೇಳುತ್ತೇನನೆ. ನೀವು ಎಷ್ಟೇ ಮಾಡಿದರೂ ಕೂಡ ನಾನು ಹೇಳುತ್ತೇನೆ, ಗಾಳಿಗೆ ಗುದ್ದಿ ಮೈ ನೋವು ಮಾಡಿಕೊಳ್ಳಬೇಡಿ. ಅದು ಅಷ್ಟು ಒಳ್ಳೆಯದಲ್ಲ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ತಾವು ಕ್ಷಮಿಸಬೇಕು, ತಮ್ಮ ಮುಖಾಂತರ ಮಾನ್ಯ ಸದಸ್ಯರ ಕ್ಷಮೆಯನ್ನೂ ಕೂಡ ಕೇಳುತ್ತಿದ್ದೇನೆ. ಎಷ್ಟು ಜನ ಮಾನ್ಯ ಸದಸ್ಯರ ಟೈಮ್ ತೆಗೆದುಕೊಂಡಿದ್ದೇವೆಯೋ ಗೊತ್ತಿಲ್ಲ. ಆದರೆ ದಯವಿಟ್ಟು ನಾನು ತಮ್ಮೆಲ್ಲರ ಕ್ಷಮೆ ಕೇಳುತ್ತೇನೆ ಮತ್ತು ತಮ್ಮ ಕ್ಷಮೆಯನ್ನು ಕೂಡ ಕೇಳುತ್ತೇನೆ. ಬಹಳ ಹೊತ್ತಾಯಿತು, ತಾವು ಅಧ್ಯಕ್ಷರಾಗಿ ನನಗೆ ಅತ್ಯಂತ ಉದ್ದನೆಯ ಕಾಲವನ್‌ನ

ಕೊಟ್ಟಿದ್ದೀರಿ. ಅದಕ್ಕಾಗಿ ನಾನು ಸಹಾ ತಮಗೆ ಆಭಾರಿಯಾಗಿದ್ದೇನೆ. ಮತ್ತು ಸಹನೆಯಿಂದ ಕೇಳಿರತಕ್ಕಂಥ ಮಾನ್ಯ ಸದಸ್ಯರು ಯಾರು ಯಾರು ಇದ್ದೀರಿ, ಈ ಸದನದ ಎಲ್ಲಾ ಪಕ್ಷಗಳ ಮತ್ತು ಎಲ್ಲಾ ಮೂಲೆಯಲ್ಲಿರತಕ್ಕಂಥ ಮಾನ್ಯ ಸದಸ್ಯರುಗಳಿಗೆ, ತಮಗೆಲ್ಲರಿಗೂ ತಮ್ಮ ಮುಖಾಂತರ ಅಭಿನಂದನೆ ಸಲ್ಲಿಸಿ, ತಮಗೂ ಕೂಡ ಮನಃಪೂರ್ವಕವಾಗಿ ಅಭಿನಂದನೆಯನ್ನು ಸಲ್ಲಿಸಿ ನನ್ನ ಬಾಷಣ ಮುಕ್ತಾಯ ಮಾಡುತ್ತೇನೆ, ನಮಸ್ಕಾರ.

ಡಾ : ಜೀವರಾಜ ಆಳ್ವ : (ಮಲ್ಲೇಶ್ವರಂ) ಮಾನ್ಯ ಅಧ್ಯಕ್ಷರೇ, ನಾನು ಮೊದಲ ಮಾತನಾಡಬೇಕು ಎಂದು ಅರ್ಧ ಗಂಟೆ ಸಮಯ ಕೊಡಿ ಎಂದು ತಮ್ಮ ಹತ್ತಿರ ಕೇಳಿದ್ದೆ. ತಾವು ನಮ್ಮ ಪ್ರಾರ್ಥನೆಗೆ ಆಗಬಹುದು ಎಂದು ಹೇಳಿದ್ದಿರಿ. ಈಗ ಏನೊ ನಾನು ಬಹಳ ಇಕ್ಕಟ್ಟಿನಲ್ಲಿ ಸಿಕ್ಕಿದ್ದೇನೆ. ಬಂಗಾರಪ್ಪನವರಿಂದ, ಹಿರಿಯ ನಾಯಕರು ಅವರ ಬಹಳ ವಿಚಾರಪೂರಿತ, ಚಿಂತಶೀಲ ಭಾಷಣ ಆಯಿತು. ಈ ಚಿಂತನ ಶೀಲ ಭಾಷಣದಲ್ಲಿ in defence of two years Government ಅದು ಏನಾಯಿತು ಎಂದು ಹೇಳಿದರೆ, he was not accused today. ¦ÇåÂð in selfdefene ಯಾವುದ್ಯಾವುದೊ, ಭಾಷಣ, ಸಿಂದ್ಯಾರವರು ಮಾಡಬೇಕಾಗಿದ್ದುದ್ದು, ಏಕಾಂತಯ್ಯನವರು ಮಾತನಾಡಬೇಕಾಗಿದ್ದಂಥ ಎಲ್ಲ ಭಾಷಣಗಳನ್ನು ಈ ಮೂರು ವರ್ಷಗಳ ಕಾಂಗ್ರೆಸ್ಸಿನ ಆಡಳಿತದ ವೈಖರಿ, ಇವರ ವಿಪ್ಲವ ಅವರ ವೈಫಲ್ಯತೆಯನ್ನು ತೋರಿಸುವಂಥ ಭಾಷಣವನ್ನು ಬಂಗಾರಪ್ಪನವರು ಮಾಡಿದ್ದಾರೆ. ಅದಕ್ಕೆ ಮೊದಲು ಸಭೆಯ ಅಭಿನಂಧನೆಗಳನ್ನು ಸಲ್ಲಿಸುವುದಕ್ಕೆ ಇಷ್ಟಪಡುತ್ತಿದ್ದೇನೆ. ಅವರು ಒಂದು ಮಾತು ಹೇಳಿದರು.

ಶ್ರೀ ಎಸ್. ಬಂಗಾರಪ್ಪ : ಡಾಕ್ಟರವರೆ ಒಂದು ನಿಮಿಷ. ಮಾನ್ಯ ಅಧ್ಯಕ್ಷರೆ ಕ್ಷಮಿಸಿ, ತಮ್ಮ ಅಪ್ಪಣೆ ಪಡೆದು ಒಂದು ಮಾತು ಮರೆತಿದ್ದೆ ಅದನ್ನು ಹೇಳುತ್ತೇನೆ. ಈ ವಾರಪತ್ರಿಕೆ ವಿಚಾರವನ್ನು ತಾವು ನಿನ್ನೆ ಇಲ್ಲಿ ಹೇಳಿದಿರಿ. ಕ್ಷಮಿಸಬೇಕು, ಪತ್ರಿಕೆ ಬಗ್ಗೆ ಪತ್ರಿಕಾ ಮಾಧ್ಯಮದ ಬಗ್ಗೆ ನಮಗೆ ಅಪಾರವಾದ ಗೌರವ ಇದೆ. ಪ್ರಜಾಪ್ರಭುತ್ವದಲ್ಲಿ ನಾವು ಗೌರವ ಇಟ್ಟುಕೊಳ್ಳಬೇಕು. ಆದರೆ ಕೆಲವು ಪತ್ರಿಕೆಗಳ ಬಗ್ಗೆ ನೀವು ಗೌರವ ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಅಂತಹ ಪತ್ರಿಕೆಗಳ ಪೈಕಿ ಇದೂ ಒಂದು. ನಾನು ಇಷ್ಟೇ ಹೇಳುವುದು. ಇನ್‌ವರ್ಟೆಡ್ ಕಾಮಾಸ್ ಹಾಕೊಂಡು ಅವನವನೇ ಬರೆದುಕೊಳ್ಳುತ್ತಾ ಕುಳಿತುಬಿಟ್ಟರೆ ಅವರು ಯಾರು ಎಂದು ನನಗೆ ಗೊತ್ತಿಲ್ಲ, ಎಲ್ಲಿ ಇದ್ದಾನೆ ಎಂದು ಗೊತ್ತಿಲ್ಲ. ಯಾರು ಬಂದು ಕಂಡಿಲ್ಲ, ಮಾಡಿಲ್ಲ, ನಾನು ಪ್ರೆಸ್‌ಗೆ ಇಂಟ್ರವ್ಯೂ ಕೊಡುತ್ತಿರಲಿಲ್ಲ. ನರಸಿಂಹರಾಯರಿಗೆ 7 ಕೋಟಿ ತೆಗೆದುಕೊಂಡು ಹೋಗಿ ಕೊಟ್ಟರು, ಹತ್ತು ಕೋಟಿ ಕೊಟ್ಟರು ಎಂದು ಬರೆದುಬಿಟ್ಟರೆ, ಎಲ್ಲಿಂದ ಹಣ ಬಂತು ಎಂದು ನೀವು ಭಾಷಣ ಮಾಡುತ್ತಾ ಕುಳಿತರೆ ನಾನು ಹೇಳುತ್ತೇನೆ. precious time of this August House ಅದನ್ನು ಹಾಳು ಮಾಡುವುದಕ್ಕೆ ಇಂತಹ ಪತ್ರಿಕೆಗಳು ಕಾರಣವಾಗುತ್ತವೆ. ದಯವಿಟ್ಟು ಇಂತಹ ಪತ್ರಿಕೆಯನ್ನು ಓದುವುದೂ ಬಿಡುವುದೂ ನಿಮಗೆ ಬಿಟ್ಟಿದ್ದು. ಆದರೆ ಓದುವುದರಿಂದ ಅನರ್ಥ ಜಾಸ್ತಿ ಆಗುತ್ತದೆ. ಆದರೆ ಇದಷ್ಟೂ ಬರೆದಿರತಕ್ಕದ್ದು ಸುಳ್ಳು ಎಂದು ನಾನು ಅಲ್ಲಗಳೆಯುತ್ತೇನೆ. ನೀವು ನಿನ್ನೆ ಅದು ಬಂದ ತಕ್ಷಣ ಅಲ್ಲಗಳೆಯಬೇಕಾಗಿತ್ತೆಂದು ಹೇಳಿದ್ದಿರಿ. ನಾನು ಹೇಳುತ್ತೇನೆ. ಅವನು ಬರೆಯುತ್ತಾ ಕುಳಿತುಕೊಳ್ಳಲಿ, ನಾನು ಅಲ್ಲಗಳೆಯುವುದಕ್ಕಾಗಿ ಹುಟ್ಟಿಲ್ಲ. ತೀರ್ಮಾನ ಮಾಡುವುದಕ್ಕೆ ಜನ ಕೂಡ ಇದ್ದಾರೆ ಕರ್ನಾಟಕ ರಾಜ್ಯದಲ್ಲಿ, ರಾಷ್ಟ್ರದಲ್ಲಿ ಕೂಡ ಇದ್ದಾರೆ. ನಾವು ಎಷ್ಟೇ ಅಲ್ಲಗಳೆದರೂ ಇರಬಹುದು ಎಂದು ಹೇಳುವವರೂ ಇರುತ್ತಾರೆ. ನಾಳೆ ನಿಮ್ಮ ಮೇಲೆ ಬಂದಾಗಲೂ ಕೂಡ ಅಲ್ಲಗಳೆದರೂ ಸಹ

ಯಡಿಯೂರಪ್ಪನವರು ಇಂತಹವರೇ ಏನೋ ಮಾಡಿರಬೇಕು ಸುಮ್ಮನಿರಿ ಎಂದು ಹೇಳುವವರು ಅಲ್ಲಿರುತ್ತಾರೆ. Please dont forget this. ಅದಕ್ಕಾಗಿ ನಾನು ಹೇಳುವುದು ಏನೆಂದರೆ ಈ ಪತ್ರಿಕೆ ತೆಗೆದುಕೊಂಡು ಹಾಗೆಲ್ಲ ತಲೆ ಕೆಡಿಸಿಕೊಳ್ಳುವುದಕ್ಕೆ ನಾವು ಹೋಗಬಾರದು. ನಿಜ ಹೇಳಬೇಕು ಎಂದರೆ, ಇವೆಲ್ಲ ಥರ್ಡ್‌ರೇಟ್ ಪತ್ರಿಕೆಗಳು ದಯವಿಟ್ಟು ಓದುವುದಕ್ಕೆ ಹೋಗಬೇಡಿ, ಒಳ್ಳೆಯದಲ್ಲ. ಇಷ್ಟು ಹೇಳಿ ಮತ್ತೊಮ್ಮೆ ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಡಾ: ಜೀವರಾಜ ಆಳ್ವ : ಶ್ರೀ ಬಂಗಾರಪ್ಪನವರು ತಮ್ಮ ಭಾಷಣದಲ್ಲಿ ಬಜೆಟ್‌ನ್ನು It is a clasic statement of bureaucratic version ಎಂದು ಹೇಳಿದ್ದಾರೆ. ಅದರಲ್ಲಿ ಬಹಳ ವೈಚಾರಿಕತೆ ಇತ್ತು. ಆದರೆ ಏನಾಗುತ್ತದೆ ಎಂದರೆ, ಈ ವೈಚಾರಿಕತೆ, ಚಿಂತನಶೀಲತೆ ಮತ್ತು ಏನು ತಪ್ಪು ಮಾಡಿದ್ದೇವೆ. ನಮ್ಮ ಅಧಿಕಾರ ಸಮಯದಲ್ಲಿ ಏನು ನ್ಯೂನತೆ ನಡೆದಿದೆ ಎನ್ನುವುದು ಅಧಿಕಾರ ಹೋದಮೇಲೆಯೇ ನಮಗೆ ಅರ್ಥ ಆಗುವುದು. ಇವರು ಒಂದು ಮಾತು ಹೇಳಿದ್ದು ನನಗೆ ನೆನಪು ಇದೆ. ಏಕೆಂದರೆ, ಮಾನ್ಯ ಹಿರಿಯ ನಾಯಕರಾದ ಬಂಗಾರಪ್ಪನವರಿಗೆ ಉತ್ತರ ಕೊಡುತ್ತಾ ಹೋದರೆ ಸರಿಯಾಗುವುದಿಲ್ಲ. ಆದರೆ ಅವರ ಭಾಷಣದಲ್ಲಿ ನಮ್ಮ ಸರ್ಕಾರದ ವೈಖರಿ ಅಥವಾ ಅನ್ಯುಯಲ್ ಪ್ಲಾನ್ ಸೈಜ್, ಬೆಳವಣಿಗೆ ಆಗಿಲ್ಲ ಎಂದು ಹಲವಾರು ವಿಚಾರಗಳು ಬಂದಿದ್ದರಿಂದ ಅದಕ್ಕೆ ಕೆಲವು ಮಾತುಗಳಿಗೆ ಮಾತ್ರ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾುತ್ತಿದ್ದೇನೆ. ಆಮೇಲೆ ನನಗೆ ಸ್ವಲ್ಪ ಸಮಯ ಜಾಸ್ತಿ ಬೇಕಾಗುತ್ತದೆ. ಏಕೆಂದರೆ ಬಂಗಾರಪ್ಪನವರ ತರಹ ನಾನು ಬಹಳ ಕಡಿಮೆ ಮಾತನಾಡುವವನು. ಕಡಿಮೆ ಮಾತನಾಡುವವ ಅವರು ಮೂರು ಗಂಟೆ ಮಾತನಾಡಿದರು, ನನಗೂ ಕನಿಷ್ಟ ಒಂದು ಗಂಟೆಯಾದರೂ ಭಾಷಣ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಮಾನ್ಯ ಬಂಗಾರಪ್ಪನವರು ಅನ್ಯಥಾ ಭಾವಿಸಬಾರದು, ಅವರು ಭಾಷಣ ಮಾಡಿ ಇದ್ದಾರೋ ಅಥವಾ ಹೋದರೋ ಗೊತ್ತಿಲ್ಲ. ಅವರು ರಿಸೋರ್ಸ್ ಮೊಬಿಲೈಸೇಷನ್ ಬಗ್ಗೆ ಬಹಳ ದೊಡ್ಡ ಮಾತನಾಡಿದರು. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗ ಅಂದರೆ ಆರು ತಿಂಗಳ ವೀರೇಂದ್ರ ಪಾಟೀಲರ ಸರ್ಕಾರ, ಅನಂತರ ನನ್ನ ಆರು ತಿಂಗಳ ಸರ್ಕಾರದಲ್ಲಿ ರಿಸೋರ್ಸ ಮೊಬಿಲೈಸೇಷನ್ ಒಂದು ಸ್ಟೆಬಿಲಿಟಿಗೆ ಬಂತು ಎಂಬ ಮಾತನ್ನು ಹೇಳಿದ್ದಾರೆ. ಒಂದು ವರ್ಷದ ವೀರೇಂದ್ರ ಪಾಟೀಲರ ಸರ್ಕಾರದ ಬಗ್ಗೆ ಯಾವುದೋ ಒಂದು ಪತ್ರಿಕೆಯವರು ಒಂದು ವಿಚಾರ ಸಂಕಿರಣ ಮಾಡಿ ವಿರೋಧ ಪಕ್ಷದ ನಾಯಕರು ನಮ್ಮನ್ನೆಲ್ಲಾ ಭಾಷಣಕ್ಕೆ ಕರೆದಾಗ ನಾನು ಒಂದು ಮಾತನ್ನು ಹೇಳಿದೆ. ಬಹಳ ದೊಡ್ಡ ದಡ್ಡತನವನ್ನು ಶ್ರೀ ರಾಜಶೇಖರಮೂರ್ತಿಯವರು ಮಾಡುತ್ತಿದ್ದಾರೆ. ಈ ರಾಜಶೇಖರ ಮೂರ್ತಿಯವರನ್ನು ಪಟೇಲ್ ರುದ್ರಪ್ಪ ಎಂದು ಮಾನ್ಯ ಬಂಗಾರಪ್ಪನವರು ಹೋಲಿಕೆ ಮಾಡಿದರು. ಅದು ಪಟೇಲ್ ರುದ್ರಪ್ಪನವರು ಪಂಚಾಯತಿಯಲ್ಲಿ ನಾಲ್ಕು ನೂರು ರೂಪಾಯಿ ಇದೆ, ಬರುವ ವರ್ಷವೂ ನಾಲ್ಕು ನೂರು ರೂಪಾಯಿ ಇದೆ. ಆದ್ದರಿಂದ ಆ ನಾನೂರು ರೂಪಾಯಿ ಇದೆ ಎಂದು ಅವರನ್ನು ಹೋಲಿಕೆ ಮಾಡಿ ನೋಡಿಸಿದರೆ ಇವತ್ತು ರಾಜಶೇಖರ ಮೂರ್ತಿಯವರನ್ನು ಅದಕ್ಕೆ ಹೋಲಿಕೆ ಮಾಡಿ ತೋರಿಸುತ್ತೇನೆ. ಏಕೆಂದರೆ ಒಂದು ಕಡೆ ಅವರ ಬಗ್ಗೆ, ಅಭಿಮಾನದಿಂದ ಒಂದು financial discipline ಸ್ಟೆಬಿಲಿಟಿ ತಂದರು ಎಂದು ಹೇಳಿದರೆ, ಆ ಒಂದು ವರ್ಷದ ಪತ್ರಿಕಾ ಸಮಾವೇಶ ನಡೆದಾಗ ನಾನು ಒಂದು ಟೀಕೆ ಮಾಡಿ ಹೇಳಿದೆ. ಈ ಯಾವ ಟ್ರೆಜರಿ ಅಂದರೆ ಕರ್ನಾಟಕದಲ್ಲಿ ಖಜಾನೆಯನ್ನು ತುಂಬಿದ್ದಾರೋ ಏನೂ ಕೆಲಸ ಮಾಡದೇ Non-

performance of the first regime ವೀರೇಂದ್ರ ಪಾಟೀಲರ ಸರ್ಕಾರದಲ್ಲಿ ಕಣ್ಣಲ್ಲಿ ಕಂಡಿದ್ದು, ಹೆಗಡೆಯವರ ಸರ್ಕಾರದಲ್ಲಿ ಅಧ್ಯಾಪಕರಿಗೆ ಸಂಬಳ ಕೊಡುವುದಕ್ಕೆ ಇಲ್ಲ, ಅಧಿಕಾರಿಗಳಿಗೆ ಸಂಬಳ ಕೊಡುವುದಕ್ಕೆ ಇಲ್ಲ, ಅದರಿಂದ ಬಹಳ ಅವ್ಯವಸ್ಥೆ ಆಗಿದೆ, Financial insecurity is there, financial instability is there, the Government has gone insolvent ಎನ್ನುವಂತಹ ಒಂದು ಮಾತನ್ನು ಹೇಳಿದ್ದರು. ಆಗ ನಾನು ಒಂದು ಮಾತನ್ನು ಹೇಳಿದೆ. financial insolvency ಇದೆ. In terms of treasury ತಮ್ಮಲ್ಲಿ 100 ಕೋಟಿಯೋ ಅಥವಾ 200 ಕೋಟಿಯೋ ರೂಪಾಯಿಯೋ ಈ ದಿವಸ ಇರಬಹುದು. ಆ ಸಮಯದಲ್ಲಿ ರಾಜಶೇಖರ ಮೂರ್ತಿಯವರ ಹತ್ತಿರ ಯಾರೇ ಶಾಸಕರು ಹೋದರೂ ಕೂಡ ನೋಡಿ The treasury is rich by 100 croes or 200 crores ಎಂದು ಹೇಳುತ್ತಿದ್ದರು. ಆದರೆ, ನಮ್ಮ ಸರ್ಕಾರವಿದ್ದಾಗ ನಾವು ಯಾವ ಜನಪರ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೋ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಬರೀ ಒಂದು ವರ್ಷದ ಸರ್ಕಾರ ನಮ್ಮದಾಗಿರಲಿಲ್ಲ, ಆರೂವರೆ ವರ್ಷಗಳ ಕಾಲ ಸರ್ಕಾರ ಕೊಟ್ಟಂಥ ಪಕ್ಷ ನಮ್ಮದು, ಒಬ್ಬ ವ್ಯಕ್ತಿಯ ಕೈಯಲ್ಲಿ ಸರ್ಕಾರವನ್ನು ನಡೆಸಿದೆವು. ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರುವಂತೆ, ನಮ್ಮ ಸರ್ಕಾರದ ಆಡಳಿತದ ಕಾಲದಲ್ಲಿ ನಾವು ಸತವಾಗಿ ನಾಲ್ಕು ವರ್ಷಗಳ ಕಾಲ ಬರಗಾಲದ ಬವಣೆಯನ್ನು ಅನುಭವಿಸಿದೆವು. ನಾನಾ ಕಾರಣಗಳಿಂದ Poopulist measures ಎಂದು ಹೇಳಿತ್ತಾರೆ, ಸುಮಾರು 40 ವರ್ಷಗಳ ಕಾಲ ಯಾವುದೇ ಸ್ವಾತಂತ್ರ್ಯದ ಸವಿಯನ್ನು ಉಣ್ಣದಂಥ ಕರ್ನಾಟಕದ ಕಟ್ಟಕಡೆಯ, ದಟ್ಟ ದರಿದ್ರರಿಗೆ ನಾವು ಅವರ ಸುಖ-ದುಃಖಗಳಿಗೆ ಸಂಧಿಸಬೇಕೆಂದು ಜನಪರ ಕಾರ್ಯಕ್ರಮಗಳನ್ನು ಹಾಕಿದೆವು. ಈ ಜನಪರ ಕಾರ್ಯಕ್ರಮಗಳಿಂದ ಪ್ರತಿ ವರ್ಷ 500 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಕೆಲಸ ಮಾಡಿಬೇಕಾಗಿ ಬಂತು. ಬರಗಾಲದಿಂದ ಸುಮಾರು 500 ಕೋಟಿ ರೂಪಾಯಿ ಜಾಸ್ತಿ ಹಣ ಖರ್ಚಾಗಬೇಕಾಯಿತು. ಬಹಳಷ್ಟು ರಿಸೌರ್ಸ್ ಮೊಬಿಲೈಜೇಷನ್ ಕೂಡ .0001 ಎಂದರೂ 70 ಕೋಟಿ ರೂಪಾಯಿ ಜಾಸ್ತಿಯಾದರೆ, 800 ಕೋಟಿ ಆಗುತ್ತದೆ. ಅಂದರೆ ಸುಮಾರು ಶೇಕಡಾ 5 ರಷ್ಟಾಗುತ್ತದೆ. ಏಕೆಂದರೆ, ಭಾಷಣದಲ್ಲಿ Jugglery of figures ಎಂದು ಹೇಳುತ್ತಾರೆ. ಹೇಗೆ ಬೇಕಾದರೂ ಅದನ್ನು ಮಾಡಬಹುದು. ಅಧಿಕಾರಿಗಳು ಕೊಟ್ಟ, ಕಂಪ್ಯೂಟರ್ ಕೊಟ್ಟ ಅಂಕಿ-ಅಂಶಗಳನ್ನೆಲ್ಲಾ ಹೇಳಬಹುದು. ಅಲ್ಲದೆ, ವರ್ಷೇ ವರ್ಷೇ 200 ಕೋಟಿ ರೂಪಾಯಿಗಳು ಜಾಸ್ತಿಯಾಗುತ್ತದೆ. 9-10 ವರ್ಷಗಳಲ್ಲಿ ಮೊಬಿಲೈಜೇಷನ್ ಆಫ್ ರಿಸೊರ್ಸ್ ಚೆನ್ನಾಗಿರುತ್ತದೆ. ಹಿಂದೆ ನಾನು ಒಂದು ಜ್ಯೋತಿಷ್ಯವಾಣಿ ನುಡಿದಿದ್ದೆ. ಏನೆಂದರೆ, ಈ ವೀರೇಂದ್ರ ಪಾಲೀಟರ ಸರ್ಕಾರದ ಜೀವ ಮುಗಿಯಿತು, ಈ ಸರ್ಕಾರದ ಪತನವಾಗುತ್ತದೆ, ಯಾವ ಖಜಾನೆಯನ್ನು ನೀವು ಭರ್ತಿ ಮಾಡಿದ್ದೀರೋ, ಅದನ್ನು ದಿವಾಳಿ ಮಾಡುವುದಕ್ಕೆ ಇನ್ನೊಂದು ಸರ್ಕಾರ ಹುಟ್ಟುತ್ತದೆಂದು ನಾನು ಸೂಚ್ಯವಾಗಿ ಹೇಳಿದ್ದೆ. That prophecy has come true. ಇವೊತ್ತು ಖಜಾನೆ ಭರ್ತಿ ಮಾಡಿದ್ದೇವೆ, ಅಡಿಷನಲ್ ಮೊಬಿಲೈಜೇಷನ್ ಮಾಡಿದ್ದೇವೆ. ಯೋಜನಾ ಆಯೋಗದವರು ಸರ್ಟಿಫಿಕೇಟ್ ಕೊಟ್ಟಿದ್ದಾರೆಂದು ಶ್ರೀಮಾನ್ ಬಂಗಾರಪ್ಪನವರು ಹೇಳುತ್ತಿದ್ದಾರೆ. ಖಜಾನೆಗೆ ಹಣದ ರಾಶಿ ತುಂಬಿದರೂ ಕೂಡ ಅದೇ ತರಹ ಈ ಖಜಾನೆ ಲೂಟಿಯೂ ಆಯಿತೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಯಾವ ಕಾರ್ಯಕ್ರಮದಲ್ಲಿ ತಾವು ಸಾಧನೆ ಮಾಡಿದ್ದೀರಿ. ಒಂದು ಮಾತನ್ನು ಹೇಳಿದರೆ ಅನ್ಯಥಾ ಭಾವಿಸಬಾರದು. ಇವೊತ್ತು ಮೊಬಿಲೈಜೇಷನ್ ಆಫ್ ರಿಸೌರ್ಸಸ್ ಎಂದು ಹೇಳುತ್ತಾರೆ. The entire credit for Mobilisation of Resoures ಅನ್ನು ಮಾನ್ಯ ನಾಯಕರಾದಂಥ ಮುಖ್ಯಮಂತ್ರಿಗಳು ತೆಗೆದುಕೊಂಡರು, ನಾನು ಅನ್ಯಥಾ ಭಾವಿಸುವುದಿಲ್ಲ. As a

Governmental head he deserves to get the credit of it. ಆದರೆ, ಅಲ್ಲೊಬ್ಬ ವ್ಯಕ್ತಿ ಇದ್ದ, ಆ ವ್ಯಕ್ತಿ ಇವೊತ್ತು ನಮ್ಮೊಂದಿಗಿಲ್ಲ. ಆ ವ್ಯಕ್ತಿಯೇ ವಾಣಿಜ್ಯ ತೆರಿಗೆ ಆಯುಕ್ತರಾದ ಶ್ರೀ ಮುನಿಸ್ವಾಮಿ ಎನ್ನುವವರು. ಈ ವ್ಯಕ್ತಿಗೆ ಇವರು ಒಂದು ಟಾರ್ಗೆಟ್ ಕೊಟ್ಟರು. ಅಷ್ಟರವರೆಗೆ ಮೊಯಿಲಿ ಸರ್ಕಾರದ ಖಜಾನೆ ಪರಿಸ್ಥಿತಿ ಯಾವ ರೀತಿ ಇತ್ತೋ ಅದಕ್ಕಿಂತ ಕೆಟ್ಟದಾಗಿ ಕಳೆದ ವರ್ಷ ಇತ್ತು. ಬರೀ 800 ಕೋಟಿ ರೂಪಾಯಿಗಳ ಮೊಬಿಲೈಜೇಷನ್ ಆಫ್ ರಿಸೋರ್ಸಸ್ ಇತ್ತು. ಆಗ ಆ ಅಧಿಕಾರಿಯನ್ನು ಇಲ್ಲಿಗೆ ಕರೆ ತಂದು ಆತನಿಗೆ ಜವಾಬ್ದಾರಿ ಕೊಟ್ಟರು. He was given at all costs, the resources will have to be mobilised, the targts will have to be reaced. The entire credit goes to one single individual who took the best of officers. ಆ ಮನುಷ್ಯ ಆಡಿದ ಮಾತು ನನಗೆ ಹೆಚ್ಚಾಗಿ ನೆನಪಿದೆ. ಏನೆಂದರೆ, ಆತ ಅಧಿಕಾರಿಗಳ ಸಭೆ ಕರೆದು ಹೇಳುತ್ತಾರೆ. ನನಗೆ ಮುಖ್ಯಮಂತ್ರಿಗಳು ಒಂದು ಟಾರ್ಗೆಟ್ ಕೊಟ್ಟಿದ್ದಾರೆ, ನೀವೇನಾದರೂ ಆ ಟಾರ್ಗೆಟ್ ಅನ್ನು ಪೂರ್ಣಗೊಳಿಸದಿದ್ದರೆ ನಿಮ್ಮಗಳ ಚರ್ಮ ಸುಲಿಯುತ್ತೇನೆ. ಎಂದು ಹೇಳಿದರು. It is in lighter vein ಬಹಳ ಸಿಂಗ್ಯುಲರ್ ಆಗಿ ಫೈಟ್ ಮಾಡಿದರು, ಸಾವಿರಾರು, ಸಹಸ್ರ ಕೋಟಿ ರೂಪಾಯಿಗಳ ಮೊಬಿಲೈಜೇಷನ್ ಆಯಿತು. ಈ ರೀತಿ ಮೊಬಿಲೈಜೇಷನ್ ಆದ 15 ದಿವಸಗಳ ನಂತರ ಆ ಅಧಿಕಾರಿಯ ವರ್ಗಾವಣೆಯಾಯಿತು. ಏಕೆಂದರೆ, ನಿಮ್ಮ ಖಜಾನೆ ತುಂಬಿಸುವುದಕ್ಕೋಸ್ಕರ ನಿಮಗೆ ಅಧಿಕಾರಿಗಳ ಸಹಾಯ ಬೇಕು, ಖಜಾನೆ ತುಂಬಿಸಿ ದರೋಡೆ ಮಾಡಿಸಬೇಕಾದರೆ, ನಿಮಗೆ ಎಕ್ಸೆಂಪಷ್ಷನ್ ಕೊಡಬೇಕಾದರೆ, ಬಂಡವಾಳಶಾಹಿಗಳು ಯಾರು ವೆಸ್ಟೆಡ್ ಇಂಟ್ರೆಸ್ಟ್ ಎಂದು ಇದ್ದಾರೋ ಅಂತಹ ವ್ಯಕ್ತಿಗಳಿಗೆ ಎಕ್ಸೆಂಪ್‌ಷನ್ ಕೊಡುವುದಕ್ಕೆ ನಿಮಗೆ ಆ ಅಧಿಕಾರಿ ಬೇಕಾಗಲಿಲ್ಲ. A person of unquestionable integrity ಅವರು ಮಾಡಿದ ತಪ್ಪಾದರೂ ಏನು? ಸುಮಾರು 800 ಕೋಟಿ ರೂಪಾಯಿಗಳ ಅಡಿಷನಲ್ ಮೊಬಿಲೈಜೇಷನ್ ಆಫ್ ರಿಸೌರ್ಸಸ್ ಮಾಡಿದರು. ಅವರನ್ನು ನೀವು ಆರು ತಿಂಗಳುಗಳ ಕಾಲ ಉಪಯೋಗಿಸಿಕೊಂಡಿರಿ. He was the entire potential of a single individual and entire subordinate of this particular Deparmtnet was exploited and finally he was shunted out because he was not prepared to compromise. ಅವರು ಇವತ್ತು ನಮ್ಮ ಜೊತೆ ಇಲ್ಲ, ಅವರು ಇವತ್ತೇನಾದರು ಜೀವಂತವಾಗಿದ್ದರೆ ಅವರನ್ನು ಹೊಗಳಲು ಈ ಮಾತನ್ನು ನಾನು ಹೇಳುತ್ತಿಲ್ಲ. This is a historical fact, which cannot be denied. ಇವತ್ತು ಮಾನ್ಯ ಬಂಗಾರಪ್ಪನವರು ತಮ್ಮ ಮೂರು ಗಂಟೆಗಳ ಸುಧೀರ್ಘವಾದ ಭಾಷಣದಲ್ಲಿ ಆ ಅಧಿಕಾರಿ ಇಷ್ಟು Additional resoures ಮಾಡಲು ಸಹಾಯ ಮಾಡಿದ್ದಾರೆ. ಅದರಿಂದ ಇಷ್ಟು Additional Resources Mobilisation ಆಗಿದೆ ಎಂದು ಅಧಿಕಾರಿಗಳ ಬಗ್ಗೆ ಹೇಳತಕ್ಕಂಥ ಒಂದು ದೊಡ್ಡತನವನ್ನು, ಸೌಜನ್ಯವನ್ನು ತೋರಲಿಲ್ಲವೆನ್ನತಕ್ಕಂಥ ವ್ಯಥೆಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಇನ್ನು ಮೊಯ್ಲಿಯವರ ಭಾಷಣದ Level-plane fields ಬಗ್ಗೆ ಅವರು ಬಹಳ ಕಠಿಣವಾಗಿ ಟೀಕೆ ಮಾಡಿದರು. ಇದು ಒಂದು ರೀತಿಯಲ್ಲಿ all that is required is, ನಮಗೆ ಈಜು ಬಾರದ ಪಂಡಿತನ ಪಾಂಡಿತ್ಯ ಬೇಕಾಗಿಲ್ಲ, ನಮಗೆ ಬೇಕಾಗಿರತಕ್ಕದ್ದು commonsense plus ನಾನು ಮುಖ್ಯಮಂತ್ರಿಗಳಿಗೆ ಸೂಚ್ಯವಾಗಿ ಹೇಳುತ್ತಿದ್ದೇನೆ, ನೀವು ನಾವು ಸೇರಿ 46 ವರ್ಷಗಳಿಂದ We have just indulged in the jugglery of facts and figures. No indepth study of the budget hasbeen done. With all humiity at my command, even at the tenure of our office for six years, ಇವತ್ತು ಬಹಳ ಗುರುತರವಾದ ಒಂದು ಪ್ರಶ್ನೆಯನ್ನು

ಮುಖ್ಯಮಂತ್ರಿಗಳಿಗೆ ಕೇಳಬಯಸುತ್ತೇನೆ. ಬಹಳ ಗಹನವಾದ ಒಂದು ವಿಚಾರದ ಬಗ್ಗೆ ಕೇಳುತ್ತಿದ್ದೇನೆ. ಅದರಲ್ಲಿ ಎಷ್ಟು ಸತ್ಯ ಅಸತ್ಯವಿದೆ ಎನ್ನತಕ್ಕ ಬಗ್ಗೆ ನಾನು ಹೋಗುತ್ತಿಲ್ಲ. ನಿಮ್ಮ ಯುವಜನ ಮತ್ತು ಕ್ರೀಡಾ ಇಲಾಖೆಯ ಮಂತ್ರಿಗಳಾದ ಪ್ರೇಮಚಂದ್ರಸಾಗರ್‌ರವರು ದೊಡ್ಡ ಪ್ರಶ್ನೆಯನ್ನು ಎತ್ತಿದ್ದಾರೆ. ಅದೇನೆಂದರೆ, ಈ ವರ್ಷದ ಬಜೆಟಿನಲ್ಲಿ ಯುವಜನ ಸೇವಾ ಇಲಾಖೆಗೆ ಸಾಕಷ್ಟು ಹಣಕಾಸನ್ನು ಕೊಟ್ಟಿಲ್ಲವೆಂದು ಹೇಳಿದ್ದಾರೆ. ನೀವು 42 ಜನ ಮಂತ್ರಿಗಳು ಇದ್ದೀರಿ, ಈಗ 40 ಜನರಿದ್ದೀರಿ ಎಂದು ಕಾಣುತ್ತದೆ. ಇದು ಒಂದು ರೀತಿ ಜಂಬೂ ಮಂತ್ರಿಮಂಡಲ. ನಿಮ್ಮಲ್ಲಿ ಎಷ್ಟು ಜನರು ಬಜೆಟ್ ಚರ್ಚೆಗೆ ಮುಖ್ಯ ಮಂತ್ರಿಗಳ ಹತ್ತಿರ ಹೋಗಿದ್ದೀರಿ ಎಂಬ ಬಗ್ಗೆ ನಿಮ್ಮಲ್ಲಿ ಆತ್ಮಾವಲೋಕನವನ್ನು ಮಾಡಿಕೊಳ್ಳಿ? We call it as introspection. Not even an academic exercise has ben done. ಇವತ್ತು 42 ಜನ ಮಂತ್ರಿಗಳಲ್ಲಿ ಶೇಕಡ 50 ರಷ್ಟು ಮಂತ್ರಿಗಳು ಏನಾದರೂ ನಾವು ಮುಖ್ಯಮಂತ್ರಿಗಳ ಹತ್ತಿರ ಬಜೆಟ್ಟಿನ ಬಗ್ಗೆ ನಮ್ಮ ನಮ್ಮ ಇಲಾಖೆಗೆ ಬೇಕಾದಂಥ ಹಣದ ಸಂದಾಯದ ಬಗ್ಗೆ ಗಹನವಾದಂಥ ಚರ್ಚೆಯನ್ನು ಮಾಡಿದ್ದೇವೆಂದು ಹೇಳುವುದಾದರೆ ನಾನು ಅವರಿಗೆ ಶಹಬಾಷ್ ಎಂದು ಹೇಳುತ್ತೇನೆ. ಏಕೆಂದರೆ ನಮಗೆ ಸಮಯವಿಲ್ಲ, ನಾವು ರಾಜಕಾರಣಿಗಳಾಗಿ Politics is a most supreme Science. It is much more superior than the science of economics. Today, we are captive set of bureaucrate.

ಶ್ರೀ ಚೌಡರೆಡ್ಡಿ :ಮುಖ್ಯಮಂತ್ರಿಗಳ ಇತಿಹಾಸದಲ್ಲಿ ಮೊದಲ ಭಾರಿಗೆ ಬಜೆಟ್ಟನ್ನು ಮಾಡುವ ಮೊದಲು ಮಂತ್ರಿಗಳನ್ನು ಕರೆದು ವಿಚಾರ ಮಾಡಿದ್ದೇವೆಂದು ಹೇಳಿದ್ದಾರೆ. ಈ ಮಾಹಿತಿ ತಮಗೆ ಗೊತ್ತಿಲ್ಲದೆ ಇರಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈ ಸಂದರ್ಭದಲ್ಲಿ ನಿಮ್ಮನ್ನೂ ಕೈಮುಗಿದು ಕೇಳಿಕೊಳ್ಳುತ್ತಿದ್ದೇನೆ, ಅದೇನೆಂದರೆ ಬಜೆಟಿನ ಬಗ್ಗೆ ಚರ್ಚೆ ಮಾಡುವುದಿರಲಿ, ಸದನ ನಡೆಯುವಾಗ ನಿಮ್ಮ ಕಡೆಯಿಂದ ಹತ್ತು ಜನರಿದ್ದರೆ ಸಾಕು, ಅದೇ ನಮ್ಮ ಪುಣ್ಯ. ದಯಮಾಡಿ ಇದನ್ನು ಮಾಡಿ.

ಡಾ: ಜೀವರಾಜ ಆಳ್ವ : ಮುಖ್ಯಮಂತ್ರಿಗಳ ಹತ್ತಿರ ಅಥವಾ ಮಾನ್ಯ ಮಂತ್ರಿಗಳ ಹತ್ತಿರ ಬರುವ ವರ್ಷದ ಬಜೆಟ್ ಆಗಲಿ, the cursory glance that we give, even the so-called discussion with the Planning Commission Vice-Chairman, let him touch his own heart. ಎರಡು ವರ್ಷಗಳ ಕಾಲ ಮುಖ್ಯಮಂತ್ರಿಗಳಾಗಿ ಆಳಿದಂಥ ಬಂಗಾರಪ್ಪನವರಿಗೆ ಕೇಳಬಯಸುವುದೇನೆಂದರೆ, ಪ್ಲಾನಿಂಗ್ ಕಮಿಷನ್ ಕಛೇರಿಗೆ ಹೋಗಿ ನೀವು ಕಳೆದ ಕಾಲವೆಷ್ಟು? ನೀವು ಅರ್ಧ ಗಂಟೆ ಮೆಮೊರಾಂಡಂ ಕೊಡಲು ದೆಹಲಿಯಲ್ಲಿ ಎರಡು ದಿನ ಪ್ರವಾಸ ಮಾಡುತ್ತೀರಿ. ಅನಂತರ ದೆಹಲಿ ದರ್ಬಾರಿನ ದೊರಗಳು ನಿಮ್ಮ ಪ್ಲಾನ್ ಅಲೋಕೇಷನ್‌ಗೆ 50 ಕೋಟಿ ಜಾಸ್ತಿ ಕೊಡುತ್ತೇವೆಂದರೆ ನೀವು ಅವರಿಗೆ ಜೀ ಆಜಾದ್, ಜೀ ಹುಕುಂ ಎಂದು ಹೇಳಿಕೊಂಡು ಬರುತ್ತೀರಿ. ನೀವು ಯಾವಾಗ ಪ್ಲಾನಿಂಗ್ ವಿಚಾರದಲ್ಲಿ ಚರ್ಚೆ ಮಾಡಿದ್ದೀರಿ? ನಿಮ್ಮಲ್ಲಿ ಬಹಳ ಹಿರಿಯರಾದ ಶ್ರೀಮತಿ ನಾಗರತ್ನಮ್ಮನವರು ಪ್ಲಾನಿಂಗ್ ಮಂತ್ರಿಗಳಾಗಿದ್ದಾರೆ, ಅವರಿಗೆ ಏನು ಗೊತ್ತಿದೆ? ಅವರು ಏನು ಚರ್ಚೆ ಮಾಡಿದ್ದಾರೆ. Your Officers will give you facts and firures in voluminous thousands of pages, distorting and cutting short the previous year's statistics, if it suits you, probablyy he will increase fifty crores to please a particular Minister or a particular project is nearer to your heart. But is there a real indepth study of the Budget? It cannot be a cursory cosmetic

discussion for about fifteen days or twenty days. We are all parties and siners in this crime. 45 years of apathy, callousness to a very sacred document like the Budget, I am a party. In fact, I had to discuss with my Chief Minister. There were days of our fighting. I do not know. I was quietly surprised. In fact, I had requestes the Chief Minister to be generous with the Youth Services Department, and Ministry of Culture. ಇವತ್ತು ಯಾರೇ ಆದರೂ ನೂರು ದಿನಗಳ ನಿಮ್ಮ ಬಜೆಟನ್ನು ಮಾಡಬೇಕಾದರೆ 60 ದಿನ ನೀವು ಮಂತ್ರಿಗಳಾಗಿದ್ದೀರಿ, ನೀವುಗಳು ನಿಮ್ಮ ನಿಮ್ಮ ಇಲಾಖೆಗಳಿಗೆ ಜಾಸ್ತಿ ಹಣವನ್ನು ಕೊಡಬೇಕು ಇಂಥ Head of Account ಬೇಕಾಗಿಲ್ಲ, ನಾವು ಇಂಥಂಥ ಹೊಸ ಸ್ಕೀಮ್‌ನ್ನು ಹಾಕಿದ್ದೇವೆ, ಎಂದು ಹೇಳಿದ್ದೀರಾ? ಭಾಗ್ಯಗಳು, ಆಶ್ರಯ, ಆರಾಧನಗಳು ನಮ್ಮ ಕಾಲದಲ್ಲಿದ್ದ ಗಂಗಾಕಲ್ಯಾಣ, ಸೇತುಬಂಧನ, ಹಸಿರು ಕಡತ, ಉದ್ಯೋಗ ಜ್ಯೋತಿ, ಸಾಗರ ದೀಪ ಇವೆಲ್ಲಾ ಹಾಗೆಯೇ ಮುಂದುವರೆಯುತ್ತಿವೆ. ಇದೆಲ್ಲಾ again tutored. ಯಾವುದೋ ಒಂದು ಕಾರ್ಯಕ್ರಮಕ್ಕೆ ಹೊಸ ಹೆಸರನ್ನಿಡಬಹುದು. Duplicity again and we are fooling ourselves. At the end of the year. ಇವತ್ತು ಬಜೆಟ್ ಇಷ್ಟೊಂದು ಚರ್ಚೆ ಮಾಡುತ್ತಿದ್ದೇವೆ. ಪ್ರಾಜೆಕ್ಟ್ ಬಗ್ಗೆ ಬಹಳ ಗಹನವಾಗಿ ಚರ್ಚೆಮಾಡುತ್ತೇವೆ. ಹಿಂದೆ ಗಂಗಾ ಕಲ್ಯಾಣ ಎದು ನಾವು ಮಾಡಿದೆವು. ಸೇತುಬಂಧನ ಎಂದು ಮಾಡಿದೆವು, ಇದರಲ್ಲಿ ಏನಾದರೂ ಸಾಧನೆ ಆಯಿತೇ? Some sot of introspection, clear and serious discussion is necessary. ಇವತ್ತು ಮಾನ್ಯ ಬಂಗಾರಪ್ಪನವರು ಬಹಳ ಗಹನವಾದ ವಿಚಾರಗಳನ್ನು ಎತ್ತಿದರು. ಅಷ್ಟೇ ಗಹನವಾಗಿ ಅತ್ಯುಗ್ರ ಟೀಕೆಯನ್ನು ಮಾಡುತ್ತಿದ್ದರು. In defence of the Government. ನಮಗೆ ಯಾವ ಸರ್ಕಾರ, ಎಲ್ಲಿಂದ ಮಾಡುತ್ತಿದ್ದಾರೆಂದು ಅನಿಸಿತು. ಏಕೆಂದರೆ ವಿರೋಧಪಕ್ಷವಾಗಿ ಈ ಎರಡು ವರ್ಷಗಳ ಆಡಳಿತವನ್ನು ಅತ್ಯಂತ ಕೆಟ್ಟ, ಅತ್ಯಂತ ಭ್ರಷ್ಠ ಸರ್ಕಾರವೆಂದು ನಾವು ಹೇಳಿದೆವು. ಆಧರೆ ಎರಡು ವರ್ಷಗಳ ಆಡಳಿತಕ್ಕೆ ಮಾನ್ಯ ಮುಖ್ಯಮಂತ್ರಿಗಳು ಒಂದು ಪಂಥಾಹ್ವಾನವನ್ನು ಕೊಟ್ಟರು. ನಾನು ಅವರನ್ನು ಪ್ರಶ್ನೆ ಕೇಳಬಯಸುತ್ತೇನೆ. Sri Bangarappa has challenged. ಅವತು ತಾನು ಮಾಡಿದ್ದು ಸತ್ಯ, ತಾವು ಮಾಡಿದ್ದು ಸರಿ ಎಂದು ಹೇಳಿದ್ದಾರೆ. ಇಂಡಿಫೆನ್ಸ್ ಆಫ್ ಹಿಸ್ ಗೌರ್ನಮೆಂಟ್ ಅವರು ಹೇಳಿದಾಗ ನಾವು ಅತ್ಯುಗ್ರವಾದ ಟೀಕೆ ಮಾಡಿದ್ದೇವೆ. Let there be a white paper. ಇವತ್ತು ಅವರು ಮಾತನಾಡಿದ್ದಕ್ಕೆ ನಾನು ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ. ಮಾನ್ಯ ಏಕಾಂತಯ್ಯನವರು ಮಾತನಾಡುವುದಕ್ಕಾಗುವುದಿಲ್ಲ. ಏಕೆಂದರೆ ಅವರು ಅಧಿಕಾರಸ್ಥಾನದಲ್ಲಿಲ್ಲ. ಅಧಿಕಾರಸ್ಥಾನದಲ್ಲಿಲ್ಲದಿರುವಾಗ ಅವರನ್ನು ಈ ಪ್ರಶ್ನೆ ಕೇಳಬಹುದಿತ್ತು. ವಿಶ್ವ ಯೋಜನೆಯ ಬಗ್ಗೆ, ಆಶ್ರಯ ಯೋಜನೆಯ ಬಗ್ಗೆ ಕೇಳಬಹುದಿತ್ತು. ಏಕೆಂದರೆ ಸರ್ಕಾರ ಬಿದ್ದು ಹೋಗಿದೆ. ಹಿರಿಯ ಮಾನ್ಯ ಶಾಸನಸಭಾ ಸದಸ್ಯರು ಬಹಳ ದೀರ್ಘವಾದ ಭಾಷಣ ಮಾಡಿದ್ದಾರೆ. ಅದರ ಪ್ರಥಮ ಭಾಗ ಬಹಳ ಚಿಂತನಶೀಲ, ವಿಚಾರಪೂರ್ಣ ಭಾಷಣವಾದರೂ ಕೂಡ ಎರಡನೇ ಭಾಗದಲ್ಲಿ ಸರ್ಕಾರದ ವೈಫಲ್ಯತೆಯನ್ನು ಟೀಕೆಮಾಡಿದ್ದಾರೆ. ಸರ್ಕಾರವನ್ನು ಮತ್ತು ನಾಯಕತ್ವವನ್ನು ಟೀಕೆ ಮಾಡಿದ್ದಾರೆ. ನಾನಾದರೂ ಮಾನ್ಯ ಸಭಾಧ್ಯಕ್ಷರ ಮುಖಾಂತರ ಅತ್ಯಂತ ಮುಖ್ಯವಾದ ಪ್ರಶ್ನೆಯನ್ನು ಕೇಳಬಯಸುತ್ತೇನೆ. It is most controversial and crucial. ಇದು ಈ ವಿಧಾನ ಸಭೆಯ ಇತಿಹಾಸದಲ್ಲಿ ಹಿಂದಿನ ಸರ್ಕಾರದಲ್ಲಿ ಯಾವತ್ತೂ ಆಗಿಲ್ಲ. ಕಳೆದ 4 ಬಾರಿಯಿಂದ ಸತತವಾಗಿ ನಾನು ಈ ಶಾಸನಸಭೆಯಲ್ಲಿ ಕೆಲಸ ಮಾಡುತ್ತಾ ಬಂದಿದ್ದೇನೆ. ಒಂದು

ಪಕ್ಷದ ಮುಖ್ಯ ಮಂತ್ರಿ ಇನ್ನೊಂದು ಪಕ್ಷದ ಸಭಾ ನಾಯಕರ ಮೇಲೆ, ಅವರ ಕಾರ್ಯ ವೈಖರಿಯ ಮೇಲೆ ಅತ್ಯಂತ ಗುರುತರವಾದ ಟೀಕೆಮಾಡಿ ಅತ್ಯಂತ ದೊಡ್ಡ ಪಂಥಾಹ್ವಾನ ಮಾಡಿದ್ದಾರೆ. He has literally challenged the Leadership, and the functioning and the failures of this Government. Under these circumstances, if you have the capacity, courage and conviction, issue a white paper. Let there be a discussion. ನೋಡೋಣ, ಮಾತನಾಡೋಣ. ಇದು ಈ ಹಿಂದೆ ಯಾವತ್ತೂ ಕೂಡ ಆಗದೇ ಇರತಕ್ಕದ್ದು. ಈ ವಿಧಾನ ಸಭೆಯ ಇತಿಹಾಸದಲ್ಲೇ ಇಂಥಾದ್ದು ಯಾವತ್ತೂ ಆಗಿಲ್ಲ. ನಾವು ಮಾನ್ಯ ಬಂಗಾರಪ್ಪನವರ ಬಗ್ಗೆ ಬಹಳ ಸುಲಭವಾಗಿ ಹೇಳಬಹುದು. ಇರಿಗೇಷನ್ ಬಗ್ಗೆ. ಫರ್ಟಿಲೈಸರ್ಸ್ ಬಗ್ಗೆ ಏನು ಮಾಡಿದ್ದಾರೆ, ಪ್ರತಿಯೊಂದು ಇಲಾಖೆಯ ಬಗ್ಗೆಯೂ ಈಗ ಚರ್ಚೆ ನಡೆಯಬೇಕು. ಏಕೆಂದರೆ ನೂರು ದಿವಸದ ಅಂತರದಲ್ಲಿ ಮಾನ್ಯ ಮೊಯ್ಲಿಯವರ ಬಗ್ಗೆ ಮಾತನಾಡತಕ್ಕದ್ದು ಏನಿದೆ ಎಂಬುದನ್ನು ನಾವು ಕಾದು ನೋಡಬೇಕಾಗುತ್ತದೆ. ನಾನಾದರೂ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ, ನೀವು ಸರ್ಜಿಕಲ್ ಆಪರೇಷನ್ ಮಾಡುತ್ತೇನೆಂದು ಏನು ಹೇಳಿದಿರಿ ಅದನ್ನು ಮಾಡುವುದಕ್ಕೆ ಧೈರ್ಯ, ಕೆಚ್ಚೆದೆ ನಿಮಗಿದೆಯೇ ಎಂದು ಹೇಳಬಯಸುತ್ತೇನೆ. You have to prove your bonafids. As a inheritor of a one of the most corrupt regimes in the country. ಇದಕ್ಕೆ ಉತ್ತರವನ್ನು ಕೊಡುವಂಥ ಧೈರ್ಯ ನಿಮಗೆ ಬರಬೇಕು. If you fails, we will tear you into pieces. We have no compromise here. ಇವತ್ತು ಅಷ್ಟು ದೀರ್ಘವಾದ ಭಾಷಣವನ್ನು ಮಾಡಿದ ಮೇಲೆ There has to be White paper. ಅಷ್ಟು ಓಪನ್ ಆಗಿ ಮಾನ್ಯ ಘೋರ್ಪಡೆಯವರ ಕಡೆ ಇಷ್ಟಿಷ್ಟು ಬಾಕಿ ಉಳಿದಿದೆ ಎಂದು ಹೇಳಿದ್ದಾರೆ. ಇನ್ನೊಂದು ವಿಚಾರವನ್ನು ಹೇಳಿದರೆ ತಾವು ಅನ್ಯಥಾ ಭಾವಿಸಬಾರದು. You talk of a very clean Government; you talk of an Open Government. Ambiguity in your approach. I am not trying to politicalise. With all humility at my command. ಇಷ್ಟು ದೊಡ್ಡ ಜಂಬೊ ಕ್ಯಾಬಿನೆಟ್ ಮಾಡಿದ್ದೀರಿ, ಮಾಡಿಕೊಳ್ಳಿ. ಏಕೆಂದರೆ ಸರ್ಕಾರದ ಕೆಲಸಗಳು ಬಹಳ ಇವೆ. ಆದರೆ ಅವರು ಏನು ಕೆಲಸ ಮಾಡುತ್ತಿದ್ದಾರೆ? ಈ ವಿಧಾನ ಸಭೆಯಲ್ಲಿ ಯಾರೂ ಕೂಡ ಕಾಣಿಸುತ್ತಿಲ್ಲ. ಹೊಸ ವೈಚಾರಿಕತೆ ಏನೂ ಕಾಣಿಸುತ್ತಿಲ್ಲ. ಒಂದು ಕ್ರಿಯೇಟಿವಿಟಿ ಏನೂ ಕಾಣಿಸುತ್ತಿಲ್ಲ. ನಾಳೆ ಏನಾಗುತ್ತದೋ, ನಾಳೆ ಏನಾಗುತ್ತದೋ ಎಂದು ಎಲ್ಲರೂ ಕಾದು ನೋಡುತ್ತಿದ್ದಾರೆಯೇ ಹೊರತು the Government has come to a grinding halt. This is the most disapppointing aspect of it ಇನ್ನೊಂದು ಮೊರ್ಯಾಲಿಟಿ ಎಂದು ಹೇಳುತ್ತಾರೆ, ಇಥಿಕ್ಸ್ ಎಂದು ಹೇಳುತ್ತಾರೆ. ಸ್ಕ್ರುಪುಲಸ್ ಆಫ್ ದಿ ಗೌರ್ನಮೆಂಟ್ ಎಂದು ಮಾನ್ಯ ಮೊಯ್ಲಿಯವರು ಹೇಳುತ್ತಿದ್ದಾರೆ. ಸ್ವಾಮಿ, ಆ ಸ್ಕ್ರುಪುಲಸ್ ಎಂಬುದು ಎಲ್ಲಿದೆ? With all humility at my command, I had to seek on moral and ehtical grounds, Srii Gopinath Sandra will have to resign. That is one aspect of it. ಇನ್ನು ಎರಡು ವಿಚಾರಗಳಿವೆ. ಬ್ಲೇಸಿಯಸ್ ಡಿಸೌಜರವರು ನನ್ನ ಆತ್ಮೀಯ ಮಿತ್ರರು. ಬ್ಲೇಸಿಯಸ್ ಡಿಸೌಜರವರು ರಾಷ್ಟ್ರವೇ ತತ್ತರಿಸುವಂಥ ಸೆಕ್ಯೂರಿಟಿ ಸ್ಕ್ಯಾಮ್‌ನಲ್ಲಿ, ನನ್ನನ್ನು ಅವರು ಕೇಳಲಿಲ್ಲ.... the information was not elicited. I have only two hundred Shaes' ಎಂದು ಮೊದಲನೆ ಬಾರಿ ಕೇಳಿದರು. ಅನಂತರ during the course of scrutiny, probaly he was not aware that the officers concerned will go deeper into it. It was realised that his daughter owns thousands of shares. ನಾನೇನು

ವೈಯಕ್ತಿಕವಾಗಿ ಟೀಕೆ ಮಾಡುತ್ತೇನೆಂದಲ್ಲ. ಅಲ್ಲಿಂದ ಮುಂದೆ ಇನ್ನೊಬ್ಬ ಮಂತ್ರಿ ಓಮ್‌ಪ್ರಕಾಶ್ ಕಣಗಲಿ, ಅವರು ನಮ್ಮ ಕೆನರಾಬ್ಯಾಂಕಿನ ಡೈರೆಕ್ಟರ್. ಬರೇ ಒಂದು ರಾತ್ರಿಯಲ್ಲಿ ಕೆನರಾ ಬ್ಯಾಂಕ್ ಡೈರೆಕ್ಟರಾಗಿ ಅವರ ತಂದೆಯವರು ಆಯಿಲ್ ಫೆಡರೇಷನ್ ಎಂದು ಒಂದಿದೆ. ಅದು ಒಂದು ಫೈನಾನ್‌ಷಿಯಲ್ ಸ್ಕೀಮ್, ಅದರಿಂದ ಆ ಹಣವನ್ನು ಟ್ರಾನ್ಸ್‌ಫರ್ ಮಾಡಲಿಕ್ಕೋಸ್ಕರ ಬರೆ ಒಂದು ರಾತ್ರಿಯಲ್ಲಿ ಅಧಿಕಾರಿಗಳು ಓಮ್‌ಪ್ರಕಾಶ್‌ರವರ ಇದರಿಂದ ಅರ್ಧಪರ್ಸೆಂಟ್ ಜಾಸ್ತಿ ಮಾಡಿದ್ದಾರೆಂದು ಹೇಳಿದ್ದಾರೆ. Is it not a national shame? ಇವರು ಕೆನರಾಬ್ಯಾಂಕ್ ಡೈರೆಕ್ಟರಾಗಿದ್ದಾರೆ. ತಂದೆ ಒ.ಎನ್.ಜಿ.ಸಿ. ಸೆಂಟ್ರಲ್ ಪೆಟ್ರೋಲಿಯಮ್ ಮಿನಿಸ್ಟರ್ ಆಗಿರುತ್ತಾರೆ. ಅಲ್ಲಿಂದ ರಾತ್ರೋರಾತ್ರಿ ಯಲ್ಲಿ ಶೇಕಡಾ 5 ಅರ್ಧ ಪರ್ಸೆಂಟ್ ಇಂಟರೆಸ್ಟ್ ಡಬಲ್ ಆಗುತ್ತದೆ. One of our premier institutions, Canara Bank, which we are all proud of you and me the sons of South Canara Soil we have to put down our heads in shame. That compromises the whole integrity of the insstitution. ಅಂಥವರು ನಿಮ್ಮ ಮಂತ್ರಿಮಂಡಲದಲ್ಲಿ ಕುಳಿತಿದ್ದಾರೆ. ಏಕೆ, ಇದೇನಾ ನಿಮ್ಮ ಸಾತ್ವಿಕತೆ, Open team ಇವತ್ತು ಮಾನ್ಯ ಘೋರ್ಪಡೆಯವರ ಮೇಲೆ ಟೀಕೆಯಾದರೆ ನಾಳೆ ಮಾನ್ಯ ಘೋರ್ಪಡೆಯವರು ಒಂದು ಉತ್ತರವನ್ನು ಕೊಡಬೇಕಾಗುತ್ತದೆ. ಕೋರ್ಟ್‌ನಲ್ಲಿದೆ ಎಕ್ಸ್ಯೂಸಸ್, ಏತಕ್ಕೆಂದು ಹೇಳಿದರೆ ದಯವಿಟ್ಟು ಅತ್ಯಂತ ವಿಶ್ವಾಸಪೂರ್ವಕವಾಗಿ ವಿರೋಧ ಪಕ್ಷದಲ್ಲಿ ಕುಳಿತು ನಿಮ್ಮನ್ನು ಟೀಕೆ ಮಾಡಬೇಕು, ಇಕ್ಕಟ್ಟಿಗೆ ಸಿಲುಕಿಸಬೇಕೆಂದಿಲ್ಲ. ನಿಮ್ಮಿಂದ ಬಹಳ ಬಯಸುತ್ತೇನೆ. ನನಗೇನೆಂದು ಹೇಳಿದರೆ ನಮ್ಮ ಜಿಲ್ಲೆಯಲ್ಲಿ ಬಹಳ ಆಸೆಯಿತ್ತು, ದಕ್ಷಿಣ ಕನ್ನಡ ಜಿಲ್ಲೆಯವರು ಒಬ್ಬ ಮುಖ್ಯಮಂತ್ರಿಯಾಗಬೇಕೆಂದು. ಮೊದಲು ನಾನೇ ಆಗಬೇಕೆದು ಇತ್ತು, ಆಗಲಿಲ್ಲ. ಪರವಾಗಿಲ್ಲ ಮಾನ್ಯ ಮೊಯಿಲಿಯವರು ಆದರು. ಆ ಹೆಮ್ಮೆ ನನಗೆ, ದಕ್ಷಿಣ ಕನ್ನಡ ಜಿಲ್ಲೆಯವರು ಎಲ್ಲರೂ ಬುದ್ಧಿವಂತರು ಎನ್ನುವುದು ನನ್ನ ಲಕ್ಷಣ. ಏತಕ್ಕೆಂದರೆ ನಾನು ಬುದ್ಧಿವಂತ. ಮೊಯಿಲಿಯವರಿಗೆ ಸ್ವಲ್ಪ ಬುದ್ಧಿವಂತಿಕೆ ಕಡಿಮೆಯಾಗಿದೆಯೋ, ಅಥವಾ ಮುಖ್ಯಮಂತ್ರಿ ಸ್ಥಾನ ಸಿಕ್ಕಿದ ಮೇಲೆ ಸ್ವಲ್ಪ ....has he softened? ಏನಾಗಿದೆಯೋ ನನಗೆ ಅರ್ಥವಾಗುತ್ತಿಲ್ಲ. .... I am simply surprised. unbelevable. ಇವರು ಆ ಕೆಚ್ಚು ತೋರಿಸಬೇಕಾಗುತ್ತದೆ. we have nothing to speak ಈ ಬಜೆಟ್ ಬಗ್ಗೆ It is a scrap of paper. I expected much more pragmatic, more revolutionary, more creative budget from him. Even there you disapppoint me. ಏನು ಎಂತದು ಮಾಡಿದ್ದು Again a deficit. ನಮ್ಮ ನಾಯಕ ಮಾನ್ಯ ರಾಮಕೃಷ್ಣ ಹೆಗಡೆಯವರು It is a very very Herculean task to give a cosmetic, a very creative look to the budget. This ia a sinking, insolvent budget ಎಂದು ಹೇಳಿದ್ದನ್ನು ಪೂರ್ಣವಾಗಿ ನಾನು ಒಪ್ಪುತ್ತೇನೆ. ಏತಕ್ಕೆಂದರೆ, ನಾನು ಬಜೆಟ್ ಕಾಫಿಯನ್ನು ಓದಿದೆ, ಎಲ್ಲಿ ನೋಡಿದರೂ ಏನೂ ಇಲ್ಲ. ಏತಕ್ಕೆಂದರೆ ಪೂರ್ಣವಾಗಿ ಅತ್ಯಂತ ವೈಫಲ್ಯಗಳನ್ನು ಎಂದು ಏತಕ್ಕೆ ದುಃಖವಾಗಿ ಹೇಳುತ್ತೇನೆಂದರೆ, ಈ ಜಗತ್ ಹಿಂದಿನಿಂದ ಬಹಳ ವರ್ಷಗಳಿಂದ ಬೆಳೆದುಬಂದಿರತಕ್ಕಂಥದ್ದು, 11 ತಿಂಗಳು, ಈ ಬಜೆಟ್ ಮುಗಿಯುವ ಮೊದಲು ಇನ್ನೊಂದು ಬಜೆಟ್ ಶುರುವಾಗುತ್ತದೆ. ಈ ಎಕ್ಸರ್ಸೈಸಸ್, ಅವರಿಗೆ ಕೆಲಸ ಲೆಕ್ಕಾಚಾರ ಬರೆಯುವುದು, ಜಗ್ಲರಿ ಫಿಗರ್ಸ್‌ನ್ನು ಬರೆಯುವುದು Statistics and figures are lies and absolute lies, ಎಂದು ಒಂದು ಮಾತು ಇದೆ. ಇದನ್ನು ತೋರಿಸಿ ತೋರಿಸಿ, ನಮ್ಮನ್ನು ಫೂಲ್ ಮಾಡುತ್ತಾರೆ. ಇಡೀ ಬಂಗಾರಪ್ಪನವರ ಭಾಷಣದಲ್ಲಿ ನಾನು ಒಪ್ಪಿದಂಥ ಒಂದೇ ಒಂದು

ಮಾತು ಎಂದರೆ It is a classic statement of bureacratic version. I have all the respect to the bureaucrats. We ave one of good bureaucracy. But why we have made ourselves captives? ಏತಕ್ಕೋಸ್ಕರ ಅತ್ಯಂತ ವೈಫಲ್ಯತೆಯನ್ನು ನಮ್ಮ ವೀಕ್‌ನೆಸ್ ಎಂದು ಏನು ಹೇಳುತ್ತಾರೆ. ಅದನ್ನು ನಾವು ತೋರಿಸಿಕೊಂಡಿದ್ದೇವೆ. What is wrong with us? ಮಾನ್ಯ ಅಧ್ಯಕ್ಷರೆ, ಮುಖ್ಯ ಮಂತ್ರಿಗಳ ಹತ್ತಿರ ಅತ್ಯಂತ ವಿಶ್ವಾಸಪೂರ್ವಕವಾದ ಮನವಿ. ಯಾವುದೇ ಒಂದು ಹೊಸ ವ್ಯವಸ್ಥೆ ನಿರ್ಮಾಣವಾಗಬೇಕಾದರೆ In history whoever it is, whether it is going to be Veerappa Moily as Chief Minister another person as Chief Minister, or none of us as Chief Minister, there must be a change, a change for the better. ಭಾವಿಯೊಳಗಿನ ಕಪ್ಪೆಯಂತೆ, ನಮ್ಮದೇ ಸಾಗರ ಎಂದು ನೋಡಿಕೊಂಡು ಕುಳಿತುಕೊಂಡಿದ್ದೇವೆ. ನಮಗೇನೂ ಅರ್ಥವಾಗುತ್ತಿಲ್ಲ, ನಾವು ಪ್ರಾಮಾಣಿಕ ಪ್ರಯತ್ನ ಮಾಡುತ್ತಿಲ್ಲ. ಅಧಿಕಾರಿಗಳು ಏನು ಹೇಳುತ್ತಾರೋ ಅದನ್ನು ಮಾಡುತ್ತಿದ್ದೇವೆ. ಅದರಲ್ಲಿ ಹೆಚ್ಚಿನ ಅಧಿಕಾರ ವರ್ಗಕ್ಕೆ they have absolute contempt towards us. They are such cybics. ಆ ವರ್ಗದಲ್ಲಿ ಶಾಸಕರು, ಇಲಿ, ಮಂತ್ರಿಗಳು ಇರಲಿ ಇವರಿಗೆ ಏನು ರಾಜಕಾರಣ ಬರುತ್ತದೆ. Politics is the last resort of scounderls. ಇವತ್ತು ನಮಗೆ ಕಾಮನ್‌ಸೆನ್ಸ್ ಬೇಕು. ನಾನು ಒಂದು ಮಾತನ್ನು ಪುನರುಚ್ಚಾರ ಮಾಡುವುದಕ್ಕೆ ಇಷ್ಟಪಡುತ್ತೇನೆ. Politics is much more superior scince then the science of economics. ಇಷ್ಟೆಲ್ಲ ಗೊತ್ತಿದ್ದೂ ಕೂಡ ನಮಗೆ, ನಮ್ಮ ಜನಜೀವನಕ್ಕೆ, ಕರ್ನಾಟಕದ ಸಮಸ್ತ ಜನರ ಬದುಕಿಗೆ ಸ್ಪಂಧಿಸುವ ಆತ್ಮ ಸ್ಥೈರ್ಯ ನಮ್ಮದಾಗಿದೆ. ಆಧರೂ ನಾವು ಕೆಲಸ ಮಾಡುತ್ತಿಲ್ಲ. ಇವತ್ತು ನಮ್ಮ ಲೆಕ್ಕಾಚಾರವೇ ಬೇರೆ. ಬಂಗಾರಪ್ಪನವರು ಫಾಕ್ಟ್ಸ್ ಅಂಡ್ ಫಿಗರ್ಸ್ ಬಗ್ಗೆ ಮಾತನಾಡುತ್ತೇವೆಂದು ಹೇಳಿದರು. ಅದು ಯಾರು ಕೊಟ್ಟ ಫ್ಯಾಕ್ಟ್ಸ್ ಅಂಡ್ ಫಿಗರ್ಸ್? ಅಧಿಕಾರಿಗಳು ಕೊಟ್ಟ ಫ್ಯಾಕ್ಟ್ಸ್ ಅಂಡ್ ಫಿಗರ್‌ಸೇ ಅಥವಾ ಕಂಪ್ಯೂಟರ್ ಕೊಟ್ಟ ಫ್ಯಾಕ್ಟ್ಸ್ ಅಂಡ್ ಫಿಗರಸೇ? ಅವರಿಗೆ ಏನು ಎಂದರೆ he wanted to outsmart. 1990ರಲ್ಲಿ ನಾನೂ ಇದನ್ನು ಮಾಡಿದ್ದು. ನನ್ನ ಸರ್ಕಾರದಲ್ಲಿ ನನ್ನ ಮುಖ್ಯ ಮಂತ್ರಿಯವರು ಅದೇ ಮಾಡಿದ್ದುದು. ಆಧರೆ ರಾಜಶೇಖರ ಮೂರ್ತಿಯವರು ಅದೇ, ಪಟೇಲ್ ರಾಮಪ್ಪನ ಕೆಲಸ, ಪಟೇಲ್ ರುದ್ರಪ್ಪನ ಕೆಲಸ ಮಾಡಿದರಲ್ಲ, ನನ್ನ ಹಣ ಪ್ರತಿದಿನ ಬಂದಾಗ 100-200 ಕೋಟಿ ಎಂದು. ಯಾವ ಜನಪರ ಕಾರ್ಯಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಜನಪರ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದರೆ ಆ ಸರ್ಕಾರ ಹೋಗುತ್ತಿರಲಿಲ್ಲ. ಇವತ್ತು ವಿಷದವಾಗಿ apart from a White Paper on the performance of the previous Governments. ಇವತ್ತು ನೀವು ಸ್ವಲ್ಪ ಷೇಕಿ ಎಂದರೆ ನನಗೆ ಏನು ಒಂದು ಅನುಭವ ಎಂದರೆ, ಇವತ್ತು ಇಷ್ಟು ಟೀಕೆ ಆಗುವಾಗ 42 ಜನ ಮಂತ್ರಿಗಳಲ್ಲಿ ನಿಮ್ಮ ಜೊತೆಯಲ್ಲಿ ಯಾರೂ ಇಲ್ಲ. ಮಂತ್ರಿಮಂಡಲದ ಸದಸ್ಯರಿಗೆ ನಿಮ್ಮ ಮೇಲೆ ನಂಬಿಕೆ ಇದೆಯೋ ಇಲ್ಲವೋ, ಇದನ್ನು ತೀರ್ಮಾನ ಮಾಡಿ. This is a very very serious fact, because this is exactly what I want you to show, as a man from South Canara, apart from being a thing, I export a lot. We expect a lot. We want you to be successful. ಏಕೆಂದರೆ ನಮಗೂ ನಿಮಗೂ ಜಗಳ ಬರುವುದು 1994ರಲ್ಲಿ. 1994ರಲ್ಲಿ ಚುನಾವಣೆಯಲ್ಲಿ ನಿಮ್ಮನ್ನು ವಿರೋಧಿಸುತ್ತೇವೆ. 1994ರ ಚುನಾವಣೆಯಲ್ಲಿ ನಿಮ್ಮನ್ನು ವಿರೋಧಿಸುವಂಥ ಪ್ರಸಂಗ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನಮ್ಮ ಜೊತೆಗೆ ನೀವು ಬಂದರೂ ಬರಬಹುದೆಂದು ಮುಖ್ಯ ಮಂತ್ರಿಗಳು ಹೇಳುತ್ತಾರೆ. ಅದಕ್ಕೆ ನೀವು ಹೇಳುತ್ತೀರಿ?

ಶ್ರೀ ಆರ್.ವಿ. ದೇಶಪಾಂಡೆ : ಸೌತ್ ಕೆನರಾದಲ್ಲಿ ಪ್ರಭಾವ ಬೀರುತ್ತೀರಾ?

ಡಾ. ಜೀವರಾಜ ಆಳ್ವ : ನನಗೆ ಬಂಗಾರಪ್ಪನವರ ಭಾಷಣದ ವೈಖರಿ, ಮೇಜು ಕುಟ್ಟುವುದು ನೋಡಿದಾಗ ಏನೋ ಬದಲಾವಣೆಯಾಗುತ್ತದೆ, ಬೇಗ ವೀರಪ್ಪ ಮೊಯಿಲಿಯವರು ಮತ್ತು ಅವರ ಮಿತ್ರರು ಈ ಕಡೆ ಬರುತ್ತಾರೆಂದು ಅನ್ನಿಸುತ್ತದೆ. ಇನ್ನೊಂದು ಒಳ್ಳೆಯ ವಿಚಾರಧಾರೆ, ತಮ್ಮಲ್ಲಿ ವಿಶ್ವಾಸಪೂರ್ವಕವಾಗಿ ಬೇಡಿಕೊಳ್ಳುತ್ತಿದ್ದೇನೆ. ನಾನು ಮತ್ತು ನೀವು ನ್ಯಾಷನಲ್ ಕಾಮರ್ಸ್ ಕನ್‌ವೆನ್‌ಷನ್‌ಗೆ ಹೋದಾಗ very diametric expressions were expressed. You were very hapy and wholeheartedly welcomed Manmohan Singh's new proposals, economicc liberalisation, industrial liberlisation. ನನಗೆ ಆಗ ಸ್ವಲ್ಪ ಹೆದರಿಕೆ ಆಯಿತು. I did say that it is a subte economic invasion by these imperialst forces ಎಂದು ಇವತ್ತು ಡಂಕೆಲ್ ಪ್ರೊಪೋಸಲ್ ತಂದಿದ್ದೀರಿ. ದಯವಿಟ್ಟು ಮಾನ್ಯ ಸಭಾಧ್ಯಕ್ಷರು, ಮಾನ್ಯ ಸದಸ್ಯರು ಅನ್ಯಥಾ ಭಾವಿಸಬಾರದು. ಯಾವುದಕ್ಕೂ ಕೂಡ ಹೆಚ್ಚಿನ ಸಮಯ ತೆಗೆದುಕೊಂಡು ವಿಧಾನ ಸಭೆ ಅಂದರೆ ಕಾರ್ಪೊರೇಷನ್, ನಗರಸಭೆಯ ಮಟ್ಟಕ್ಕೆ ಹೋಗುವುದಿಲ್ಲ. ಹಲವಾರು ವಿಚಾರಧಾರೆಗಳು ಇಲ್ಲಿ ಒಂದು ರೀತಿ ಚಿಂತನೆಯಾಗಬೇಕಾಗುತ್ತದೆ. ಬಹಳ ವಿಚಾರಧಾರೆಗಳ ಮಂಥನವಾಗಬೇಕಾಗುತ್ತದೆ. ಆದರೆ ಇವತ್ತು ಡಂಕೆಲ್ ಪ್ರೊಪೋಸಲ್ ಎಂದು ಇಡೀ ರಾಜ್ಯಕ್ಕೆ ರಾಷ್ಟ್ರಕ್ಕೆ ಸಂಬಂಧಪಟ್ಟ, ರೈತರಿಗೆ ಸಂಬಂಧಪಟ್ಟ, ರಾಜ್ಯದ ರಾಷ್ಟ್ರದ ಸ್ವಾಭಿಮಾನಕ್ಕೆ ಸಂಬಂಧಪಟ್ಟ ವಿಚಾರಗಳ ಬಗ್ಗೆ ಒಂದೆರಡು ದಿವಸ ಚರ್ಚೆ ಮಾಡಬೇಕಾಗುತ್ತದೆ. ಪ್ರೊಫೆಸರ್ ನಂಜಂಡಸ್ವಾಮಿಯವರು ಒಂದು ಮಾತನ್ನು ಹೇಳಿದರು. ನಾನು ಒಪ್ಪಿಸಿದೆ. ನಮ್ಮ ಪಕ್ಷದಿಂದ ಅದನ್ನು ಮಾಡಿಸುತ್ತೇನೆ ಎಂದು. ಈ ಡಂಕಲ್ ಪ್ರಪೋಸಲ್ಸ್ ಏನು? ಅದನ್ನು ಕನ್ನಡದಲ್ಲಿ ಭಾಷಾಂತರ ಮಾಡಿಸಿ. ಕನ್ನಡದಲ್ಲಿ ಭಾಷಾಂತರ ಮಾಡಿ ಇದರಲ್ಲಿ, Before it is discussed in the House let the Dunkel Proposals be discussed, let a platform be created for a threadbare discussion. ಇವತ್ತು it has an adverse effect on the industry, Health and Agricultuure ಎಂದು ನಾನು ಹೇಳಿದೆ. ಏಕೆಂದರೆ, I have always been an optimist. ಏನೋ ಒಂದು ಆಗಲಿ. ಲಿಬರಲೈಸೇಷನ್ ಪಾಲಿಸಿ, industrial liberlisation privatiation ಎಂದು ಹೇಳುತ್ತೀರಿ. ಇವರು ಹೇಳುತ್ತಾರೆಯೇ ಹೊರತು ನೀವು ಇವತ್ತು ಬಹಳ ಉಲ್ಲಾಸವಾಗಿ With all lost of hopes, you said you ill have a new industrial policy altogether. You have repeated the procss of single-window agency. ಇದು ಎಷ್ಟು ಕಾರ್ಯತಃ ಆಗುತ್ತದೆ? ಇವತ್ತು ಕರ್ನಾಟಕದ ಮಟ್ಟಿಗೆ ನೀವು ಇಷ್ಟು ಲಿಬರಲೈಸೇಷನ್ ಪಾಲಿಸಿ ಅನೌನ್ಸ್ ಮಾಡಿದ್ದರೂ, ಬಂಗಾರಪ್ಪನವರು ವಿಶ್ವ-ಪರ್ಯಟನೆಗೆ ಹೋದರು. ವಿಶ್ವಪರ್ಯಟನೆಯಲ್ಲಿ ಒಂದು ಮೆಮೊರ್‍ಯಾಂಡಮ್. ಆಫ್ ಅಂಡರ್‌ಸ್ಟ್ಯಾಂಡಿಂಗ್ ಸೈನ್ಸ್ ಮಾಡಿಕೊಂಡು ಬಂದರು. ಒಂದರ ಬಗ್ಗೆ ನನಗೆ ಗಮನ ಇದೆ. ಅವರು ನಗುತ್ತಾರೆ. They were compelled to sign a memorandum of understanding. It is a face saver. ಎಂದು ಅವರ ಅಧಿಕಾರಿ ಬಂದಾಗ ಬಹಳ ಕಾನ್‌ಫಿಡೆನ್ಸಿಯಲ್ಲಾಗಿ ಎಕ್ಸ್‌ಚೇಂಜ್ ಮಾಡಿದಂಥ ಮಾತು. The Chief Minister of Karnataka came; since we have other interests, we were asked to entertain him. Then finally he said, you don't have to go through this project, just sign a memorandum of understanding, so that people of Karnataka will feel that

something is done. ಬೇಕಾದರೆ ಬಂಗಾರಪ್ಪನವರು ಇದರ ಬಗ್ಗೆ ಏನಾದರೂ ಛಾಲೆಂಜ್ ನೀಡಿದರೆ ಆ ಕಂಪೆನಿ ಯಾವುದು ಎಂದು ನಾನು ಆಮೇಲೆ ಹೇಳುತ್ತೇನೆ. ಏಕೆಂದರೆ ನಿಜ ಸಂಗತಿ ಏನೆಂದರೆ, ರಾಮಕೃಷ್ಣ ಹೆಗಡೆಯವರು ಹೋಗಿ ಬಂದಿರಬಹುದು. ಬಂಗಾರಪ್ಪನರು ಹೋಗಿರಬಹುದು. ನೀವು ನಾಳೆ ಇನ್ನೊಂದು ಪ್ರವಾಸ ಹಾಕಿ ಹೊಸ ಉದ್ಯಮಗಳನ್ನು ಕರೆತರಬೇಕು ಎನ್ನುವ ನಿಜವಾದ ಭಾವನೆಯಿಂದ ಹೋದರೂ ಕೂಡ there is absolutelyu no response whatsoever. There is a shift. All the corporate offices of the country want to come to Bangalore. They want to enjoy the celubrious climate. ಇಲ್ಲಿನ ಹವಾಮಾನ ಚೆನ್ನಾಗಿದೆ . ಜಾಗ ಚೆನ್ನಾಗಿದೆ, ನಗರದ ಜನರು ಬಹಳ ಒಳ್ಳೆಯವರು, ಯಾರು ಬಂದರೂ ಸೇರಿಸಿಕೊಳ್ಳುತ್ತಾರೆನ್ನುವ ಭಾವನೆಯಿಂದ ಬರೀ ಕಾರ್ಪೊರೇಟ್ ಆಫೀಸ್‌ಗಳು ಬರುತ್ತಾ ಇವೆ. ಮಾನ್ಯ ಸಭಾಧ್ಯಕ್ಷರೆ, ಇದುವರೆಗೂ ಶೇಕಡ ಒಂದು ಇಂಡಸ್ಟ್ರೀ ಬಂದಿಲ್ಲ. Let the Chief Minister or Industries Minister tell me, how many industries have come in the last 3 years. Your so-caled liberalisation, open arm methods, and your warm spontaneous welcome have OK yielded any result. ಹೇಗೆ ಬರುವುದಕ್ಕೆ ಸಾಧ್ಯ? ನಮ್ಮಲ್ಲಿ ನೀರು ಇಲ್ಲ. ನಮ್ಮಲ್ಲಿ ಎಲೆಕ್ಟ್ರಿಸಿಟಿ ಇಲ್ಲ. ಟೋಟಲ್ ಆಪಥಿ ಇದೆ. ನೀವು ಕೆಲವು ಸಾರಿ ಯಾರು ಯಾರೋ ಕೆಲಸಕ್ಕೆ ಬಾರದೇ ಇರುವವರಿಗೆ ಅಥವಾ ಇಂಡಸ್ಟ್ರೀ ಡಿಪಾರ್ಟ್‌ಮೆಂಟ್‌ಗೆ ಅಥವಾ ಇತರ ಭಾಗದವರನ್ನು ತಂದು ಮಂತ್ರಿಗಳಾಗಿ ಮಾಡಿ ಕೂರಿಸುತ್ತೀರಿ. How are you to expect? ಏನಾದರೂ ಮಾರ್ಜಿನಲ್ ಇಂಡಸ್ಟ್ರಿಯಲ್ ಪ್ರೋಗ್ರೆಸ್ ಸ್ವಲ್ಪವಾದರೂ ಬಂದಿದ್ದರೆ. ನಿಜಲಿಂಗಪ್ಪನವರ ಕಾಲದಲ್ಲಿ ಮತ್ತು ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ.... (ಬೆಲ್)

ಅಧ್ಯಕ್ಷರು : ಬೇಗ ಮುಗಿಸಿ.

ಡಾ. ಜೀವರಾಜ ಆಳ್ವ : ಸಭಾಧ್ಯಕ್ಷರೇ, ಹೆಚ್ಚಿನ ಭಾಗವನ್ನು ಬಂಗಾರಪ್ಪನವರೇ ತೆಗೆದುಕೊಂಡಿದ್ದರು. I am prepared continue to speak tomorrow. ಬಹಳ ಅಪರೂಪದಲ್ಲಿ ನಾನು ಮಾತನಾಡಿರುವುದು...

ಶ್ರೀ ಆರ್.ವಿ. ದೇಶಪಾಂಡೆ : ಈಗಾಗಲೇ ಆರೂವರೆ ಆಗಿದೆ. ಮಾನ್ಯ ಸದಸ್ಯರಿಗೆ ಇನ್ನೂ ಅರ್ಧ ಗಂಟೆ ಅವಕಾಶ ಬೇಕಾಗಿದೆ.

ಅಧ್ಯಕ್ಷರು : ಇದಾದ ಮೇಲೆ ತಮ್ಮದೇ 68ನೇ ನಿಯಮದ ಕೆಳಗ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪಕಾಲಾವಧಿ ಚರ್ಚೆ ಇದೆ.

ಶ್ರೀ ಆರ್.ವಿ. ದೇಶಪಾಂಡೆ : ಅದನ್ನೂ ನಾಳೆ ತೆಗೆದುಕೊಳ್ಳಿ.

ಅಧ್ಯಕ್ಷರು : ಈಗ ಸಭೆಯನ್ನು ಮುಂದೂಡಿ ಮತ್ತೆ ನಾಳೆ ಬೆಳಿಗ್ಗೆ 10 ಗಂಟೆಗೆ ಸೇರುವುದು.

(ಸದನವು ಸಂಜೆ 6 ಗಂಟೆ 35 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ 10ನೇ ಮಾರ್ಚಿ 1993ರ ಬೆಳಿಗ್ಗೆ 10 ಗಂಟೆಗೆ ಸೇರಲು ನಿಶ್ಚಯಿಸಿತು)

---

(■ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

Printed by The Director of Printing, Stationery & Publications, Government Press, Bangalore